ಬೆಲೆ: ಎರಡು ಆಣೆ

ಕರ್ಮವೀರ

KARMAVEER WEEKLY, HUBLI

ಅಖಿಲ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ ವಾರಪತ್ರಿಕೆ

ಸಂಪಾದಕರು: ಹ. ರಾ. ಪುರೋಹಿತ, ಎಂ.ಎ.

Editor: H. R. PUROHIT, M. A.

—[ಸಂಪುಟ ೧೯]— ಹುಬ್ಬಳ್ಳಿ ಸೋಮವಾರ ತಾರೀಖು ೨೨-೧೨-೧೯೪೭ —[ಸಂಚಿಕೆ [illegible]]—

ಅಮೇರಿಕದ ದೃಷ್ಟಿಯಲ್ಲಿ ಸ್ವತಂತ್ರ ಹಿಂದುಸ್ತಾನ

ಸ್ವಾತಂತ್ರ್ಯೋದಯ— ಕಲಿಲೀಲೆ— ಕಾಳೀಬಲಿ— ಜನಜೀವನದಲ್ಲಿ ನಾನಾ ಮುಖದ ಕ್ರಾಂತಿ—ಸರಕಾರಗಳ ಶಾಂತಿ ಪ್ರಯತ್ನ

ಸ್ವತಂತ್ರಹಿಂದುಸ್ತಾನವಿಂದು ಸ್ವಾತಂತ್ರ್ಯಲಾಭದ ಪರಿಣಾಮವನ್ನು ಅನುಭವಿಸುತ್ತಿದೆ. ಸಮುದ್ರಮಥನದಲ್ಲಿ ಅಮೃತವನ್ನು ಪಡೆವಾಗ ಹಾಲಾಹಲದ ಬೇಗೆಯನ್ನೂ ಸಹಿಸಬೇಕಾಯಿತು. ಅದೇ ಪ್ರಕಾರ ಸ್ವಾತಂತ್ರ್ಯಸಿಂಹವಿಂದು ಹೊರಬೀಳುವಾಗ ಮಾತೃಗರ್ಭವನ್ನು ಸೀಳಿಬಿಟ್ಟಿದೆ. ಹಿಂದುಸ್ತಾನ ಹೋಳಾಗಿ, ಜಾತೀಯ ದಂಗೆಗಳ ಹಾವಳಿಗೆ ತುತ್ತಾಗಿ, ಭಗೀರಥ ಪ್ರಯತ್ನದಿಂದ ಪೂರ್ಣಸ್ವರಾಜ್ಯದತ್ತ ಮುನ್ನಡಯುತ್ತಿದೆ. ಈ ಸಂಕ್ರಮಣ ಕಾಲದಲ್ಲಿ, ರಾತ್ರಿ ಹೋಗಿ ಹಗಲು ಹುಟ್ಟುವ ವೇಳೆಯಲ್ಲಿ, ಸ್ವಾತಂತ್ರ್ಯದೇವತೆಯು ಲಕ್ಷೋಪಲಕ್ಷ ನರಬಲಿಯನ್ನು ತೆಗೆದುಕೊಳ್ಳುತ್ತಿರುವುದನ್ನು ಕಂಡು ಒಮ್ಮೊಮ್ಮೆ ಬೆಚ್ಚಿ, ಜಗತ್ತಿನ ಜನಾಂಗಗಳು ನಾನಾಪ್ರಕಾರವಾಗಿ ಉದ್ಗಾರ ಮಾಡಿವೆ; ಮುತ್ಸದ್ದಿಗಳು ತಮತಮಗೆ ತೋರಿದಂತೆ ಟೀಕೆ ಮಾಡಿದ್ದಾರೆ!

ಇಂಗ್ಲಂಡಿನ ಕನ್ಸರ್ವೇಟಿವ್ ಪಕ್ಷದ ಮುಖಂಡರಾದ ಚರ್ಚಿಲ್ಲರು ಹಳೆಯ ಸಾಮ್ರಾಜ್ಯವಾದದ ಸನಾದಿಯನ್ನೇ ಹಾಡಿದರು. ತಾವು ಮೊದಲೇ ಎಚ್ಚರಿಕೆ ಕೊಟ್ಟಂತೆ ಹಿಂದೀಯರು ತಮ್ಮನ್ನು ತಾವು ಆಳಿಕೊಳ್ಳಲಸಮರ್ಥರೆಂಬುದಕ್ಕೀಗ ನಿದರ್ಶನ ದೊರೆತಿದೆಯೆಂದು ಅವರು ಗೆಲುವಿನ ನಗೆಯನ್ನು ಬೀರಿದರು. ಹಿಂದುಸ್ತಾನ ಪಾಕಿಸ್ತಾನಗಳೆಂಬ ಎರಡು ಅಧಿರಾಜ್ಯಗಳು ಅಸ್ತಿತ್ವದಲ್ಲಿ ಬಂದನಂತರ ಜಗತ್ತಿನ ರಾಜಕಾರಣಿಗಳು ತಮ್ಮ ತಮ್ಮ ಲಾಭಹಾನಿಗಳ ದೃಷ್ಟಿಯಿಂದ ಲೆಕ್ಕ ಹಾಕಿ ಸಂಯುಕ್ತರಾಷ್ಟ್ರಸಂಘದಲ್ಲಿ ಅನೇಕ ಸಲ ಹಿಂದುಸ್ತಾನದ ಧೋರಣದ ಪರವಾಗಿಯೂ ಕೆಲವೆಡೆ ಸ್ವಾರ್ಥಕ್ಕೆ ಭಂಗ ಬರುವಂತಿದ್ದಲ್ಲಿ ಅದರ ವಿರುದ್ಧವಾಗಿಯೂ ಮತ ಕೊಟ್ಟವು. ಆದರೆ ಹಿಂದುಸ್ತಾನದ ನ್ಯಾಯಪಕ್ಷಪಾತಿತ್ವದಲ್ಲಿ ದೋಷ ಹುಡುಕಿ ಧೈರ್ಯವಾಗಿ, ತರ್ಕಬದ್ಧವಾಗಿ ಎದುರಿಸಲು ಈ ವರೆಗೆ ಯಾವ ರಾಷ್ಟ್ರವೂ ಮುಂದಾಗಲಿಲ್ಲ. ಇದೀಗ ಅಮೇರಿಕದಲ್ಲಿಯ ಪ್ರಮುಖ ಪತ್ರಿಕೆಗಳಲ್ಲಿ ಭರತಖಂಡದ ಇಂದಿನ ಪ್ರಜಾಕ್ಷೋಭೆಯ ಬಗ್ಗೆ ಅಲ್ಲಿಯವರೇನೆನ್ನುತ್ತಾರೆಂಬುದು ಪ್ರಕಟವಾಗಿದೆ. ಹೊರಗಣ ಜಗತ್ತಿನ ದೃಷ್ಟಿ ಯಾವಬಗೆಯದಿದೆಯೆಂಬುದನ್ನು ಕೆಲಮಟ್ಟಿಗೆ ಇದರಿಂದ ತಿಳಿದುಕೊಳ್ಳಬಹುದಾಗಿದೆ.

ಸ್ವಾತಂತ್ರ್ಯದ ಪ್ರಸವವೇದನೆ ಪ್ರಾರಂಭವಾದೊಡನೆ ಎಲ್ಲಿ ಗರ್ಭಪಾತ ಸಂಭವಿಸುವುದೋ ಎನ್ನುವಷ್ಟು ಭಯಂಕರವಾದ ಅಂತಃಕಲಹದ ಕಾಳ್ಗಿಚ್ಚಿದ್ದು ಹಿಂದುಸ್ತಾನದ ಪೂರ್ವ ಪಶ್ಚಿಮ ಪ್ರದೇಶಗಳಲ್ಲಿ ಅಗಣಿತ ಆಬಾಲ ವೃದ್ಧರನ್ನು ಆಹುತಿ ತೆಗೆದುಕೊಂಡುದನ್ನು ಯಾವ ದೃಷ್ಟಿಯಿಂದ ಪರದೇಶಗಳು ನೋಡುತ್ತಿವೆಯೆಂಬುದನ್ನು ತಿಳಿಯಲು ಸಹಕಾರಿಯಾಗುವಂತೆ ಈ ಕೆಳಗೆ ಅಮೇರಿಕದ ೩ ಸುಪ್ರಸಿದ್ಧ ಪತ್ರಿಕೆಗಳಲ್ಲಿಯ ಬರಹಗಳ ಸಾರವನ್ನು ಕೊಡಲಾಗಿದೆ.

ಸಂಘಟಿತ ದಂಗೆ

"ಅಟ್ಲಾಂಟಿಕ್" ಪತ್ರಿಕೆಯ ನವೆಂಬರದ ಸಂಚಿಕೆಯ ಪ್ರಕಾರ ಭಾರತದಲ್ಲಿಯ ದಂಗೆ ದುರ್ಘಟನೆಗಳ ಕಾರಣಗಳು ಇಂತಿವೆ:—

ಬಹಳ ಕಾಲದಿಂದ ಭಾರತದಲ್ಲಿಯ ಹಳೆಯ ಜೀವನಕ್ರಮವು ಹೊಸ ಆಕ್ರಮವಾಗಿ ಮಾರ್ಪಡಲು ಸಿದ್ಧವಾಗಿ ನಿಂತಿತ್ತು. ಜಾತಿಧರ್ಮಗಳಿಗಿಂತ ಹೆಚ್ಚಾಗಿ ದಾರಿದ್ರ್ಯವೇ ಜನರ ತಲೆಯನ್ನು ತಿನ್ನುತ್ತಿತ್ತು. ಮುಕ್ಕಾಲುಮೂರುವೀಸ ಜನರು ಅದರ ನಿವಾರಣೆ ಮಾಡಲು ಸಾಧ್ಯವಾಗದ ಒಕ್ಕಲುತನದ ಪದ್ಧತಿಗೆ ಶರಣಾದರು. ಬಡ್ಡಿಗೆ ಸಾಲ ಕೊಡುವವರು ಮತ್ತು ವ್ಯಾಪಾರಿಗಳಿಗಿಂತ ಜಮೀನುದಾರರು ಎರಗಿದ್ದಾರೆ. ಅನೇಕ ಕಡೆ ಮುಸಲ್ಮಾನ [illegible] ಹಿಂದುಗಳು ಒಕ್ಕಲ್ಮಾನರು [illegible] ಹಿಂದು ಜಮೀನುದಾರರಿಗೆ ಮುಸ[illegible]

ಲ್ಮಾನರು ಒಕ್ಕಲಾಗಿಯೂ ಇದ್ದುದರಿಂದ ಅವರ ಆರ್ಥಿಕ ಮತ್ತು ಧಾರ್ಮಿಕ ದೃಷ್ಟಿಗಳಲ್ಲಿ ವೈಷಮ್ಯ ಬೆಳೆಯುತ್ತ ಹೋಯಿತು. ಆದರಿಂದ ಆರ್ಥಿಕ ಅತೃಪ್ತಿಯು ಧಾರ್ಮಿಕ ದಂಗೆಗಳಲ್ಲಿ ಪ್ರಕಾಶಪಡುವಂತಾಯಿತು. ಇದಕ್ಕೆ ರಾಜಕೀಯ ಸುರಕ್ಷಿತದ್ವಾರವು (Safety Valve) ಸರಿಯಾಗಿ ಕೆಲಸಮಾಡದಿದ್ದುದೇ ಕಾರಣ. ನೂರಕ್ಕೆ ೯೦ ಜನರಿಗೆ ಮತಾಧಿಕಾರವಿಲ್ಲ. ಇಂಥವರಲ್ಲಿ ಹಲವರು ಒಕ್ಕಲುತನವನ್ನೂ ಉಳಿದವರು ಆಧುನಿಕ ಉದ್ಯೋಗೀಕರಣವನ್ನೂ ಬಳಕೆಗೆ ತರಬೇಕೆಂಬವರು. ಇದರ ಜೊತೆಗೆ ಇಲ್ಲಿಯವರೆಗಿದ್ದ ಸಮ್ರಾಟರ ಆಳಿಕೆಯು ನಾಡಿನ ಆರ್ಥಿಕ ಹಿನ್ನಡೆ ಮತ್ತು ರಾಜಕೀಯ ಪಾಖಂಡಿತ್ವಕ್ಕೆ ಕಾರಣವಾಯಿತು. ಮತ್ತು ಭಾರತ ಸ್ವಾತಂತ್ರ್ಯದಾನದ ನಿರ್ಣಯವನ್ನು ಕೆಲವರು ಧಾರ್ಮಿಕೇತರ ಧ್ಯೇಯ ಸಾಧನೆಗಾಗಿ, ಧಾರ್ಮಿಕ ಭೇದಗಳನ್ನು ಹೆಚ್ಚಿಸಲು ಬಳಸಿಕೊಂಡರು. ಲಂಡನ್ನಿನ "ಇಕಾನೊಮಿಸ್ಟ" ಪತ್ರಿಕೆಯೆಂಬಂತೆ ಕಳೆದ ತಿಂಗಳುಗಳಲ್ಲಿ ಪ್ರಾರಂಭವಾದ ಜಾತೀಯ ಘರ್ಷಣವು ಸ್ವಯಂಭೂತವಾದುದಲ್ಲ; ಭಾರತದ ಇತಿಹಾಸದಲ್ಲಿ ಇದರಷ್ಟು ಚೆನ್ನಾಗಿ ಇನ್ನೊಂದು ಸಂಘಟಿತವಾಗಿದ್ದಿಲ್ಲ ಎಂಬುದೂ ನಿಜವೇ.

ಮುಖ್ಯ ಹೊಣೆಗಾರರು

ಇದರ ಮೇಲೆ ಈ ಕೊಲೆಸುಲಿಗೆ, ಅತ್ಯಾಚಾರ, ಅನಾಚಾರಗಳಿಗೆ ಸಂಸ್ಥಾನಾಧಿಪರು ಹೊಣೆಗಾರರು. ಕೆಲವು ಮುಖ್ಯ ಉದ್ದಿಮೆದಾರರು ಮುಸ್ಲಿಮರ ವಿರುದ್ಧ ಚಟುವಟಿಕೆಗಳನ್ನು ಪ್ರಾರಂಭಿಸಿದರು. ಹಿಂದು ಜಮೀನುದಾರರು ಹಿಂದು ಒಕ್ಕಲನ್ನು ಮುಸಲ್ಮಾನರ ವಿರುದ್ಧ ಎತ್ತಿಕಟ್ಟಿದರು; ಹಾಗೆಯೇ ಮುಸಲ್ಮಾನ ಜಮೀನುದಾರರು ಮುಸಲ್ಮಾನ ಒಕ್ಕಲನ್ನು ಹಿಂದುಗಳಿಗೆದುರು ಮಾಡಿದರು; ಆ ಮೂಲಕ ಅವರು ತಮ್ಮ ರಾಜಕೀಯ ಮತ್ತು ಆರ್ಥಿಕ ಸ್ಥಾನಮಾನಗಳನ್ನು ಭದ್ರಪಡಿಸಿಕೊಳ್ಳಲು ಹವಣಿಸಿದರು.

[illegible]ರು ಅವರಂಥ ಸಂಸ್ಕೃತ ಮತ್ತು ಧಾರ್ಮಿಕ ರಾಗದ್ವೇಷ ಕಡಿಮೆಯುಳ್ಳವರಿಗೆ ಸುಧಾರಣೆಗಾಗಿ ಹೋರಾಡಬೇಕೋ ಇಲ್ಲವೆ ಆ ದಾರಿಯಲ್ಲಿ ನಡೆಯತೊಡಗುವುದರಿಂದ ಧರ್ಮಸನ್ನಿಪಾತ ಹಿಡಿದವರೊಡನೆ ಸೇರಿ [illegible] ತಿಳಿಯಲಾರದಾಗಿದೆ. ಈ ದಂಗೆಗಳಿಂದ ಭಯಂಕರ ಅರ್ಥಹಾನಿಯುಂಟಾಗಿದೆ. [illegible] ಆಹಾರ ಸಮಸ್ಯೆ ಇದರಿಂದ ಮತ್ತಷ್ಟು ಉಗ್ರವಾಗುವಂತಾಗಿದೆ.

ಸಧ್ಯ: ಧಾರ್ಮಿಕ ಪ್ರಶ್ನೆಯು ಪ್ರಾಮುಖ್ಯಕ್ಕೆ ಬಂದಿದ್ದರೂ ವಿಚಾರಿಸಿ ನೋಡಿದರೆ ಈ ಕ್ಷೋಭೆಗೆ ಮೂಲಭೂತವಾದ ರಾಜಕೀಯ ಧ್ಯೇಯ[illegible] ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗುಗಳಲ್ಲಿಯ ಒಳತೋಟಿಯೂ ಪೆಚ್ಚಿನ ಕಾರಣವೆಂದು ಕಂಡು ಬರುತ್ತದೆ. ಶುದ್ಧ ಧಾರ್ಮಿಕ ಪ್ರಪಂಚದಲ್ಲಿಗಿಂತ ಇಲ್ಲೇ ಈ ಜಾತೀಯ ಸಮಸ್ಯೆಯ ಪರಿಹಾರೋಪಾಯವನ್ನು ಹುಡುಕಬೇಕು.

ಕಲಿ— ಕಾಳಿಯರ ಲೀಲೆ

'ಟಾಯಿಮ' ಪತ್ರಿಕೆಯು ಕೊಟ್ಟಿರುವ ವಿವರಣ ಮತ್ತೂ ವಿಚಿತ್ರವಾಗಿದೆ. ಕಾಳೀದೇವತೆಯು ಹಿಂದು ಧರ್ಮದ ಉದಯಕ್ಕಿಂತ ೩೦ ಶತಕಗಳ ಹಿಂದೆಯೇ ಹಿಂದುಸ್ತಾನದಲ್ಲಿ ಕಾಲಿಟ್ಟಿದ್ದಾಳೆ. ಕ್ರಮೇಣ ಹಿಂದು ಧರ್ಮವು ಅವಳನ್ನು ತನ್ನ ದೇವತೆಗಳ ಪಟ್ಟಿಯಲ್ಲಿ ಸೇರಿಸಿಕೊಂಡಿತು. ಕಾಳಿಯು ಕ್ರೂರ ದೇವತೆ; ಅವಳು ನರಬಲಿಯನ್ನು ಬೇಡುವವಳು. ಇವಳ ಪ್ರತಾಪದ ಜೊತೆಗೆ ವಿಷ್ಣು ಪುರಾಣ ಹೇಳುವಂತೆ ಇದು ಕಲಿಯುಗ. ಕಲಿಯುಗದಲ್ಲಿ ಸಾಮಾಜಿಕ ನೀತಿಯು ಕೆಟ್ಟು ಆಸ್ತಿವಂತನೇ ದೊಡ್ಡವನೆಂದೂ ಹಣವಂತನೇ ಗುಣವಂತನೆಂದೂ ಕಾಮತೃಪ್ತಿಯೇ ವಿವಾಹ ಜೀವನದಗುರಿಯೆಂದೂ ಜನರು ತಿಳಿದುಕೊಳ್ಳುತ್ತಾರೆ. ಅಸತ್ಯವೇ ಜಯಕ್ಕೆ ಕಾರಣವೆಂದೂ ಕಾಮಕೇಳಿಯೇ ಪರಮಾನಂದವೆಂದೂ ಹೊರ ಆಡಂಬರವೇ ಧರ್ಮಸಾರವೆಂದೂ ಲೌಕಿಕರು ದುರ್ಮಾರ್ಗಗಾಮಿಗಳಾಗುತ್ತಾರೆ— ಎಂದಿದೆ. ಇದಕ್ಕೊಂದು ನಿದರ್ಶನವಾಗಿ ಆಗಸ್ಟ ಮಧ್ಯದಿಂದ ಹಿಂದುಸ್ತಾನ ಪಾಕಿಸ್ತಾನಗಳಲ್ಲಿಯ ಜಾತೀಯ ದಂಗೆಗಳಿಂದ ಲಕ್ಷಗಟ್ಟಲೆ ಜನರು ಮೃತಪಟ್ಟಿದ್ದಾರೆ. ಲಕ್ಷಾಂತರ ಜನರು ನಿರಾಶ್ರಿತರಾಗಿದ್ದಾರೆ. ಸ್ವಾತಂತ್ರ್ಯ ಸಿಕ್ಕಿದ ಆರೇ ವಾರಗಳಲ್ಲಿ ೨ನೆಯ ಮಹಾಯುದ್ಧದಲ್ಲಿ ನಾಲ್ಕು ವರ್ಷಗಳ ಅವಧಿಯಲ್ಲಿ ಮಡಿದ ಅಮೇರಿಕನ್ನರ ಅರ್ಧದಷ್ಟು ಹಿಂದೀಯರು ಮಡಿದರು. ಗಾಯಗೊಂಡವರ ಮತ್ತು ಅಂಗವಿಚ್ಛೇದ ಹೊಂದಿದವರಿಗಂತೂ ಲೆಕ್ಕವೇ ಇಲ್ಲ. ಆದರೂ ಹಿಂದುಸ್ತಾನ ಪಾಕಿಸ್ತಾನಗಳೆನ್ನೂ ಎದುರಾ ಎದುರು ಯುದ್ಧ ಮಾಡುವ ಗತಿಗೆ ಬಂದು ಮುಟ್ಟಿಲ್ಲ. ಎಷ್ಟೋ ಮಟ್ಟಿಗೆ ಕೊಲೆಸುಲಿಗೆಗಳು ಸಂಘಟಿತವಾಗಿ ನಡೆದವಲ್ಲ; ಅಲ್ಲಲ್ಲಿ ಅಗಿಂದಾಗ ತಾವೇ ತಾವಾಗಿ ನಡೆದವು. ಆದುದರಿಂದ ಅಧಿರಾಜ್ಯಗಳ ಮುಖಂಡರು ಇವಕ್ಕೆ ಕೆಲಮಟ್ಟಿಗೆ ಹೊಣೆಗಾರರಾದರೂ ಸರಕಾರಗಳನ್ನು ದೂರ. ವಹಿಸಿಲ್ಲ. ಅಂತೂ ಕಾಳಿಯ ಕೃಷ್ಣಚ್ಛಾಯೆಯಿಂದ ಭರತಖಂಡಕ್ಕೆ ಸ್ವಾತಂತ್ರ್ಯವೂ ಬಂದಿತು ಸಾವೂ ಬಂದಿತು! ಹೀಗೆ ಇಂದು ಹಿಂದುಸ್ತಾನವು ಹಿಂಸಾಪ[illegible] ಪಶ್ಚಿಗೆ ಸಿಂದರೂ [illegible] ಲೌಕಿಕ [illegible] ಗಳನ್ನು ಹತ್ತಿಗೆ ಕೊಡುತ್ತಿಲ್ಲ.

ಸಂಧಿಕಾಲದ ಸಹಜೋತ್ಪಾತ

'ನೇಶನ್' ಪತ್ರಿಕೆಯು ಪ್ರಕಾರ ಕೊಲೆಸುಲಿಗೆಗಳು ಅಧಿರಾಜ್ಯಗಳಲ್ಲಿಯ ಘರ್ಷಣವನ್ನು ಸೂಚಿಸುವದಿಲ್ಲ. ಎರಡು ಸರಕಾರಗಳೂ ಅವನ್ನು ನಿಲ್ಲಿಸಲು ಪ್ರಾಮಾಣಿಕ ಪ್ರಯತ್ನ ನಡೆಸಿವೆ. ಪಂಜಾಬಿನಲ್ಲಿ ಸಿಖರು ಕೆಲಮಟ್ಟಿಗೆ ದಂಗೆಯಲ್ಲಿ ಪ್ರಮುಖ ಭಾಗ ವಹಿಸಿದರು. ಇದಕ್ಕೆ ಹಿಂದೆ ಅವರು ಮುಸಲ್ಮಾನ ಅರಸರ ಆಳಿಕೆಯಲ್ಲಿ ಬಹಳ ಕಷ್ಟನಷ್ಟಗಳಿಗೆ ಗುರಿಯಾಗಿದ್ದು ಈಗ ಅದರ ಆಳಿಕೆಯೆಂದರೆ ಭಯಪಡುತ್ತಿದ್ದುದೇ ಕಾರಣ. [illegible] ಹಿಂದುಸ್ತಾನವನ್ನು [illegible] ಲೋಕಿಸಿ ಮಾತನಾಡುವವಾದರೆ, ಇಂದು ಹಿಂದುಸ್ತಾನದಲ್ಲಿ ನಡೆಯುತ್ತಿರುವುದು ಕೇವಲ ಜಾತೀಯ ದಂಗೆಯೆಂದು ಹೇಳಬರದು. ಭರತಖಂಡದ [illegible] ಕೋಟಿ ಜನತೆಯು ಇಂದು ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಕ್ರಾಂತಿಗಳಲ್ಲಿ ಏಕಕಾಲದಲ್ಲಿ ಹೊಕ್ಕು ಹೊರಡುತ್ತಿದೆ. ಸಮ್ರಾಟರ ಆಳಿಕೆಗೆ ಕೊನೆಗಾಲ ಬಂದು ಹೊಸದಾಗಿ ಸ್ವಾತಂತ್ರ್ಯ ಉದಯಿಸುವ ಸಂಧಿಕಾಲದಲ್ಲಿ [illegible] ಉತ್ಪಾತಗಳು ಸಂಭವಿಸುವುದು ಸಹಜ. ಹಿಂದುಸ್ತಾನದಲ್ಲಿ ಎಷ್ಟೋ ಒಳ್ಳೆಯ ಕಾರ್ಯಗಳು ನಡೆಯುತ್ತಿವೆ; ಆದರೆ ಅವುಗಳು ತಾತ್ಕಾಲಿಕವಾಗಿ ಈ ದಂಗೆಗಳಿಂದ ಮಸ್ತಕಕ್ಕೊಳಗಾಗಿವೆ. [illegible] ಸರ್ವಹಿತದ ದೃಷ್ಟಿಯಿಂದ ಘಟನೆಗಳನ್ನು ರಚಿಸಿದೆ; ಅಸ್ಪೃಶ್ಯತೆ ನಿವಾರಣೆಯಾಗುತ್ತಿದೆ. ಹೀಗೆ ಇನ್ನೂ ಎಷ್ಟೋ ವಿಧದಲ್ಲಿ ಪ್ರಜಾಸತ್ತೆ ಪೋಷಣೆ ಪಡೆಯುತ್ತಿದೆ. ಆದುದರಿಂದ ಈ ಕೊಲೆಕೊಳ್ಳಿಗಳಿಗೆ ಬಹಳ ಮಹತ್ವ ಕೊಡುವುದು ಯುಕ್ತವಲ್ಲ. ಅವೆಲ್ಲ ಪರಕೀಯರ ಆಳಿಕೆ ಮುಗಿದನಂತರ ಉದಯಿಸುವ ಸ್ವಾತಂತ್ರ್ಯದ ಆಕ್ರಮಗಳೆಂದೇ ತಿಳಿಯಬೇಕು.

ಸಿಖ ಮುಸಲ್ಮಾನರ [illegible]

ಮೇಲಿನ ಪತ್ರಿಕೆಯಲ್ಲಿ ಶ್ರೀ [illegible] ಹೀಗೆ ಬರೆಯುತ್ತಾರೆ:

ಅರ್ಧ ವರ್ಷದ ವರೆಗೆ ನಡೆದ ಉಗ್ರವಾದ ರಾಜಕೀಯ ಘರ್ಷಣವು ಇಂದು ಪಂಜಾಬಿಗೆ ಮೃತ್ಯುವಾಗಿ [illegible] ತೆಗೆದುಕೊಳ್ಳ[illegible]ಂದು ಒಂದು ಕಡೆ [illegible] ರಕ್ಷಿಸಲು [illegible] ಮುಸಲ್ಮಾನರೂ [illegible] ಕಡೆ ಸಿಖ್ಖ ಹಿಂದು [illegible] ಪ್ರಯತ್ನ ನಡೆಸಿದರು. ಏಕೆಂದರೆ, ಪಂಜಾಬು [illegible] ಪಶ್ಚಾದ ಆಹಾರ ಧಾನ್ಯಗಳ ಕಣಜವಾಗಿದೆ. ಅಲ್ಲದೆ ಹಿಂದು ವ್ಯಾಪಾರಿಗಳಿಗೆ ಪಾಕಿಸ್ತಾನಕ್ಕೆ ತಮ್ಮ [illegible] ಮುಸಲ್ಮಾನರ ವ್ಯಾಪಾರವನ್ನು [illegible] ಅಲ್ಪಸಂಖ್ಯಾಕರ [illegible] ಭಯಂಕರ ಪ್ರಯತ್ನ [illegible]

[illegible]

(ಎರಡು ಪುಟ ನೋಡಿರಿ)

ಅಮೇರಿಕದ ಇಂದಿನ ವಿಶ್ವವಿದ್ಯಾನಿಲಯಗಳು

ಲೇ: ಶ್ರೀ. ನಾಡಿಗ ಕೃಷ್ಣಮೂರ್ತಿ

ವಿಶೇಷ ಲೇಖನ ೧೦

ಅಮೇರಿಕದ ವಿಶ್ವವಿದ್ಯಾನಿಲಯಗಳಲ್ಲಿ ಹಿಂದೆಂದೂ ಸೇರದಷ್ಟು ವಿದ್ಯಾರ್ಥಿಗಳು ಈ ವರ್ಷ ಅಭ್ಯಾಸದಲ್ಲಿ ತೊಡಗಿದ್ದಾರೆ. ನ್ಯೂಯಾರ್ಕ ಟೈಮ್ಸ್ ಪತ್ರಿಕೆಯು ೧೨೦ ವಿದ್ಯಾಸಂಸ್ಥೆಗಳನ್ನು ಸಂದರ್ಶಿಸಿ, ಪರಿಶೀಲಿಸಿ ಈ ವರ್ಷ ಸುಮಾರು ೨೫೦೦೦೦೦ ವಿದ್ಯಾರ್ಥಿ ವಿದ್ಯಾರ್ಥಿನಿಯರು, ಹೆಚ್ಚಾಗಿ ಕಾಲೇಜುಗಳನ್ನು ಪ್ರವೇಶಿಸಿದ್ದಾರೆಂಬ ನಿರ್ಧಾರಕ್ಕೆ ಬಂದಿದೆ. ಅಂದರೆ ಹೋದ ವರ್ಷದ ಸಂಖ್ಯೆಗಿಂತ ನೂರಕ್ಕೆ ೧೦ ರಷ್ಟು ಹೆಚ್ಚು ವಿದ್ಯಾರ್ಥಿಗಳು ಕಾಲೇಜು ಸೇರಿದ್ದಾರೆ.

ಯುದ್ಧಕ್ಕೆ ಮೊದಲು ವಿದ್ಯಾರ್ಥಿಗಳ ಸಂಖ್ಯೆ ೧೫೦೦೦೦೦ ಇತ್ತು. ಈ ಸಂಖ್ಯೆಯೇ ಹೆಚ್ಚಿನದಿತ್ತು. ಈ ವರ್ಷ ಹೆಚ್ಚಾಗಿ ಬಂದು ಸೇರಿದ ಹತ್ತು ಲಕ್ಷ ವಿದ್ಯಾರ್ಥಿಗಳ ದೆಸೆಯಿಂದ ವಿಶ್ವವಿದ್ಯಾನಿಲಯಗಳ ಅಡಳಿತಗಾರರಿಗೆ ಅನೇಕ ಸಮಸ್ಯೆಗಳು ಬಂದೊದಗಿವೆ. ೪೦-೫೦ ವಿದ್ಯಾರ್ಥಿಗಳಿರುವ ತರಗತಿಯು ೬೦-೧೨೦ಕ್ಕೇರಿದೆ. ವಾಸಕ್ಕೆ ವಿದ್ಯಾರ್ಥಿ ಗೃಹಗಳಲ್ಲಿ ಸ್ಥಳವೇ ಇಲ್ಲ. ಪ್ರಯೋಗ ಶಾಲೆಗಳನ್ನು ಹಗಲೂ ರಾತ್ರಿ ಉಪಯೋಗಿಸುವ ಸಂದರ್ಭ ಬಂದಿದೆ. ಇನ್ನು ಶಿಕ್ಷಕರ ಕೊರತೆಯಾಗಿ ತುಂಬ ತೊಂದರೆಯಾಗಿ ಹೋಗಿದೆ.

ಈ ವಿಪರೀತಾವಸ್ಥೆ ಇಷ್ಟಕ್ಕೆ ಈ ವರ್ಷ ನಿಲ್ಲಲಾರದು. ಅಮೇರಿಕದ ಸುಪ್ರಸಿದ್ಧ ವಿದ್ಯಾಪ್ರವೀಣರ ಮಾತಿನಂತೆ ಈ ಪ್ರವಾಹ ಇನ್ನೂ ನಾಲ್ಕೈದು ವರ್ಷಗಳು ಹೀಗೆಯೇ ಸಾಗಬಹುದು. ಸಂಖ್ಯೆ ೩೦೦೦೦೦೦ ಕ್ಕೇರಬಹುದು. ಈ ಪ್ರವಾಹಕ್ಕೆ ಮುಖ್ಯ ಕಾರಣ, ಯುದ್ಧ ಮುಗಿಸಿಕೊಂಡು ಹಿಂತಿರುಗಿ ಬಂದ ಅಮೇರಿಕನ್ ಸೈನಿಕರು ಕಾಲೇಜು ಸೇರುತ್ತಿರುವುದೇ. ಈ ಸೈನಿಕ ವಿದ್ಯಾರ್ಥಿಗಳಿಗೆ ಸರಕಾರದಿಂದ ವರ್ಷಕ್ಕೆ ೫೦೦ ಡಾಲರು (೧೫೦೦ ರೂ.) ಫೀ ಅಲ್ಲದೆ ತಿಂಗಳು ಒಂದಕ್ಕೆ ೬೦ ರಿಂದ ೯೦ ಡಾಲರಗಳವರೆಗೆ ವಿದ್ಯಾರ್ಥಿ ವೇತನವೂ ಸಿಕ್ಕುವುದು. ಅವರು ತಮ್ಮ ವಿದ್ಯೆ ಮುಗಿಸುವವರೆಗೂ ಈ ವೇತನ ಕೊಡಲಾಗುವುದು. ಸೈನಿಕ ವಿದ್ಯಾರ್ಥಿ ಮದುವೆಯಾಗಿ ಮಕ್ಕಳಿದ್ದರೆ ಆತನಿಗೆ ಇನ್ನೂ ಹೆಚ್ಚಿನ ವೇತನ ಕೊಡಲಾಗುವುದು.

ವಿದ್ಯಾರ್ಥಿಗಳ ಪ್ರವೇಶ ಸಂಖ್ಯೆ ಮೀರಿದ್ದರೂ ಕೆಲವು ಕಾಲೇಜುಗಳು ಹೆಚ್ಚು ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುತ್ತಿವೆ. ಬಹುಕಾಲದಿಂದ ಹೆಸರಾಂತ ವಿಶ್ವವಿದ್ಯಾನಿಲಯಗಳಿಗಿಂತಲೂ, ವಿದ್ಯಾರ್ಥಿಗಳು ಕಾಲಿಮುಂದೆಯಂತೆ ಪ್ರವೇಶಕ್ಕಾಗಿ ಕುತೂಹಲದಿಂದ ಕಾದು ಕುಳಿತಿರುತ್ತಾರೆ. ಮಿತಿಯಾಗಿ ಕೊಡಲ್ಪಡುವ ಪ್ರವೇಶಗಳಿಗೆ ೧೦ ರಷ್ಟು ಅರ್ಜಿಗಳು ಬಂದಿರುತ್ತವೆ. ಸಾಮಾನ್ಯವಾಗಿ ನೂರಕ್ಕೆ ೧೦ ರಂತೆ ವಿದ್ಯಾರ್ಥಿಗಳು ಹೆಚ್ಚಿದ್ದರೂ ಕೊಲಂಬಿಯ, ನ್ಯೂಯಾರ್ಕ ಮುಂತಾದ ವಿಶ್ವವಿದ್ಯಾನಿಲಯಗಳಲ್ಲಿ ನೂರಕ್ಕೆ ೨೫ ರಷ್ಟು ಹೆಚ್ಚಿದೆ. ಇವರನ್ನು ಸೇರಿಸಿಕೊಳ್ಳಲಿಕ್ಕಾಗಿ ಹೊಸ ಹೊಸ ಕಟ್ಟಡಗಳನ್ನು ಕಟ್ಟಿದ್ದಾರೆ. ಈ ಅತಿ ವೃಷ್ಟಿಯ ಫಲವಾಗಿ ಬಹುಮಂದಿ ವಿದ್ಯಾರ್ಥಿಗಳು ಜಾಗವಿಲ್ಲದೆ ಹಿಂತಿರುಗಬೇಕಾಯ್ತು. ಸೈನಿಕ ವಿದ್ಯಾರ್ಥಿಗಳಿಗೆ ಮೊದಲು ಪ್ರವೇಶ ಕೊಡಲಾಗುವುದು. ನಂತರ ಉಳಿದವರಿಗೆ. ಅನೇಕ ವಿದ್ಯಾರ್ಥಿಗಳು ತಮಗೆ ಇಷ್ಟವಲ್ಲದ ಕಾಲೇಜುಗಳಿಗೆ ಗತ್ಯಂತರವಿಲ್ಲದೆ ಹೋಗಬೇಕಾದ ಸಂದರ್ಭಬಂದಿದೆ. ಮಘವಿನ ಜರತಾರಿ ಸೀತಾಂಬರಕ್ಕಾಗಿ ಅಂಗಡಿ ಅಂಗಡಿ ತಿರುಗಿದಂತೆ, ವಿದ್ಯಾರ್ಥಿಗಳು ತಮ್ಮ ಸರಸ್ವತೀ ಮಂದಿರವನ್ನು ಹುಡುಕಲು ಅನೇಕ ವಿಶ್ವವಿದ್ಯಾನಿಲಯಗಳ ಪ್ರದಕ್ಷಿಣೆ ಹಾಕಿದ ನಿದರ್ಶನ ಸಾಕಿದಾರು. ನನ್ನ ಜೊತೆಯಲ್ಲಿ ವಾಸಮಾಡುತ್ತಿರುವ ಜಾರ್ಜ್‌ಬಿಲ್ ನ್ಯೂಯಾರ್ಕ ಮಹಾನಗರದಿಂದ ಇಲ್ಲಿಗೆ ಓದಲು ಬಂದಿದ್ದಾನೆ. ಈತ ಸುಮಾರು ೧೦ ಕಾಲೇಜುಗಳನ್ನು ತಿರುಗಿ ಅಲ್ಲೆಲ್ಲಿಯೂ ಪ್ರವೇಶ ಸಿಕ್ಕದೆ, ಕೊನೆಗೆ ಇಲ್ಲಿಗೆ ಬಂದು ಅತಿ ಪ್ರಯಾಸದಿಂದ ಅಪ್ಪಣೆ ದೊರಕಿಸಿಕೊಂಡ.

ಯುದ್ಧಕ್ಕೆ ಮುಂಚೆ ಬಹಳ ಕಷ್ಟದಿಂದ ಜೀವನ ಸಾಗಿಸುತ್ತಿದ್ದ ಸಣ್ಣ ಸಣ್ಣ ಕಾಲೇಜುಗಳಿಗೆ ದೈವ ತಿರುಗಿದೆ. ದೊಡ್ಡ ಕಾಲೇಜುಗಳಲ್ಲಿ ತಿರಸ್ಕೃತರಾದ ವಿದ್ಯಾರ್ಥಿಗಳು ಸಣ್ಣ ಕಾಲೇಜುಗಳನ್ನು ತುಂಬುತ್ತಿದ್ದಾರೆ. ಹೀಗಾಗಿ ಸಣ್ಣ ಕಾಲೇಜುಗಳು ಸಹ ಅಭಿವೃದ್ಧಿ ಹೊಂದುತ್ತಿವೆ.

ಕಾಲೇಜುಗಳಲ್ಲಿ ಸ್ಥಳದ ಕೊರತೆಯೇ ದೊಡ್ಡದಾಗಿದೆ. ಎಲ್ಲಾ ವಿದ್ಯಾರ್ಥಿಗಳಿಗೂ ಸ್ಥಳ ದೊರೆತು ಸಾಧ್ಯವಾಗಬೇಕಾದರೆ ತರಗತಿಗಳ ಜಾಗವು ಹೆಚ್ಚಬೇಕೆಂದು ಕಾಲೇಜು ಅಧಿಕಾರಿಗಳು ತೀರ್ಮಾನಿಸಿದ್ದಾರೆ. ಅಮೇರಿಕದ ವಿದ್ಯಾ ಕಚೇರಿಯ ಲೆಖ್ಖದ ಪ್ರಕಾರ ೯೦,೦೦೦೦೦೦ ಚದುರಡಿ ಜಾಗ ಹೆಚ್ಚಾಗಬೇಕು. ೧೯೫೦ ರ ವೇಳೆಗೆ ೩೩೦,೦೦೦೦೦೦ ಚದುರಡಿ ಜಾಗದ ವ್ಯವಸ್ಥೆಯಾಗಬೇಕೆಂದು ಲೆಖ್ಖಾಚಾರ ಮಾಡಿದ್ದಾರೆ. ಈ ರೀತಿಯ ಒತ್ತಡವು ಇನ್ನೂ ೩೦ ವರ್ಷಗಳು ನಡೆಯುವುದೆಂದು ಅಭಿಪ್ರಾಯ ಪಟ್ಟಿದ್ದಾರೆ.

ಅಮೇರಿಕದ ವಿಶ್ವವಿದ್ಯಾನಿಲಯಗಳಲ್ಲಿ ಎರಡು ವಿಧ. ಸಂಸ್ಥಾನ ಸರಕಾರದ ಆಡಳಿತದಲ್ಲಿರುವ ವಿಶ್ವವಿದ್ಯಾನಿಲಯಗಳು ಮತ್ತು ಖಾಸಗಿ ವ್ಯವಸ್ಥೆಯಿಂದ ನಡೆದುಬರುವ ವಿಶ್ವವಿದ್ಯಾನಿಲಯಗಳು.

ಸಂಸ್ಥಾನದ ಆಡಳಿತದಲ್ಲಿರುವ ವಿಶ್ವವಿದ್ಯಾನಿಲಯಗಳು ಮೂರರಷ್ಟು ಜಾಸ್ತಿಯಾಗಿ ವಿದ್ಯಾರ್ಥಿಗಳಿಂದ ತುಂಬಿವೆ. ಕಾರಣ ಸಂಸ್ಥಾನದ ಪ್ರತಿಯೊಬ್ಬ ವಿದ್ಯಾರ್ಥಿಗೂ ಜಾಗ ಕೊಡಬೇಕೆಂಬ ನಿಯಮವನ್ನಿಟ್ಟುಕೊಂಡಿದ್ದಾರೆ. ಉದಾಹರಣೆಯಾಗಿ ನಮ್ಮ ಮಿಸ್ಸೌರಿ ವಿಶ್ವವಿದ್ಯಾನಿಲಯದ ಸಾಮಾನ್ಯ ವಿದ್ಯಾರ್ಥಿಗಳ ಸಂಖ್ಯೆ ೪೦೦೦ ಈ ವರ್ಷ ೧೨೦೦೦ ವಿದ್ಯಾರ್ಥಿಗಳಿಗೆ ಪ್ರವೇಶ ದೊರಕಿದೆ. ಈ ಹೆಚ್ಚು ವಿದ್ಯಾರ್ಥಿಗಳಿಗೆ ಜಾಗಕೊಡಲು ಅನೇಕ ವಿದ್ಯಾ ಸಂಸ್ಥೆಗಳು "Overflow" ಅಥವಾ "Extension" ಕಾಲೇಜುಗಳನ್ನು ತೆರದಿದ್ದಾರೆ. ಮುಂದಿನ ವರ್ಷ ಸೇರುವ ವಿದ್ಯಾರ್ಥಿಗಳಿಗೆ ಪ್ರವೇಶ ದೊರಕುವುದು ಇನ್ನೂ ಕಷ್ಟವಾಗಬಹುದು. ಜಾಗದ ಕೊರತೆ ಮತ್ತು ಶಿಕ್ಷಕರ ಅಭಾವದಿಂದ ವಿದ್ಯಾರ್ಥಿಗಳಿಗೆ ಸರಿಯಾದ ಲಾಭ ಸಿಕ್ಕುವುದು ಕಷ್ಟವಾಗಿದೆ. ಈ ಕಾರಣಗಳಿಂದ ಒಳ್ಳೆಯ ಮಾದರಿಯ ವಿದ್ಯಾಭ್ಯಾಸ ಸಿಕ್ಕುವ ಸಂಭವ ಕಡಿಮೆಯೆಂದು ದೇಶದ ವಿದ್ಯಾಪ್ರವೀಣರು ಮನಗಂಡು ಹಾಗೆ ಸ್ಪಷ್ಟಪಡಿಸಿದ್ದಾರೆ.

ನ್ಯೂಯಾರ್ಕ ಯುನಿವರ್ಸಿಟಿಯಲ್ಲಿ ಈಸಲ ೬೦೦೦೦ ವಿದ್ಯಾರ್ಥಿಗಳಿದ್ದಾರೆ. ಇವರಲ್ಲಿ ೫೦೦೦೦ ವಿದ್ಯಾರ್ಥಿಗಳು ಡಿಗ್ರಿ ಪರೀಕ್ಷೆಗಳಿಗೆ ಓದುವವರಿದ್ದಾರೆ. ಇವರಲ್ಲಿ ೨೫೦೦೦ ಸೈನಿಕ ವಿದ್ಯಾರ್ಥಿಗಳಿದ್ದಾರೆ. ಸುಪ್ರಸಿದ್ಧವಾದ ಕೊಲಂಬಿಯ ವಿಶ್ವವಿದ್ಯಾನಿಲಯದಲ್ಲಿ ೨೩೫೦೦ ವಿದ್ಯಾರ್ಥಿಗಳು ಸೇರಿದ್ದಾರೆ. ಹಿಂದೆಂದೂ ಇಲ್ಲಿ ಇಷ್ಟು ಸಂಖ್ಯೆಯಿರಲಿಲ್ಲ.

ನ್ಯೂಯಾರ್ಕಿನ ಸಿಟಿ ಕಾಲೇಜಿನ ಸಂಖ್ಯೆ ೬೨೦೦೦. ಹಂಟರ್, ಬ್ರೂಕ್‌ಲಿನ್, ಕ್ವೀನ್ಸ್ ಮತ್ತು ಸಿಟಿ ಕಾಲೇಜುಗಳಲ್ಲಿ ಈ ಸಂಖ್ಯೆ ಹಂಚಲ್ಪಟ್ಟಿದೆ. ಇವುಗಳಲ್ಲಿ ಸಿಟಿ ಕಾಲೇಜಿನಲ್ಲಿಯೇ ೩೩೦೦೦ ವಿದ್ಯಾರ್ಥಿಗಳಿದ್ದು, ೨೦೩೦೦ ವಿದ್ಯಾರ್ಥಿಗಳು ಡಿಗ್ರಿ ಪರೀಕ್ಷೆಗೆ ಓದುತ್ತಿದ್ದಾರೆ. ೧೨೦೦೦ ಮಂದಿ ಸೈನಿಕ ವಿದ್ಯಾರ್ಥಿಗಳು

ಫ್ಲೋರಿಡಾ ವಿಶ್ವವಿದ್ಯಾನಿಲಯದಲ್ಲಿ ಕೇವಲ ೧೦೦೦೦ ವಿದ್ಯಾರ್ಥಿಗಳಿಗೆ ಜಾಗವಿದ್ದು ಉಳಿದವರಿಗೆ ಜಾಗಕೊಡಲು ಸಾಧ್ಯವಿಲ್ಲದುದಕ್ಕೆ ವ್ಯಸನ ವ್ಯಕ್ತಪಡಿಸಿದ್ದಾರೆ ಕಾಲೇಜಿನ ಮುಖ್ಯಾಧಿಕಾರಿಗಳು.

ಇತ್ತ ಪಶ್ಚಿಮ ಭಾಗದಲ್ಲಿ ಕ್ಯಾಲಿಫೋರ್ನಿಯ ವಿಶ್ವವಿದ್ಯಾನಿಲಯವೇ ದೊಡ್ಡದು. ಇಲ್ಲಿ ೪೦೦೦೦ ವಿದ್ಯಾರ್ಥಿಗಳಿದ್ದಾರೆ. ಈ ಕಾಲೇಜಿನಲ್ಲಿರುವ ವಿದ್ಯಾರ್ಥಿಗಳು ಬರೀ ಕ್ಯಾಲಿಫೋರ್ನಿಯ ಸಂಸ್ಥಾನದವರೇ. ಉಳಿದ ಸಂಸ್ಥಾನದ ವಿದ್ಯಾರ್ಥಿಗಳಿಗೆ ಇಲ್ಲಿ ನಿರ್ಬಂಧವಿದೆ.

ಎಲ್ಲಾ ಕಡೆಯೂ ಕಾಲೇಜಿನಲ್ಲಿ ಜಾಗದ ಅಭಾವ ಅಲ್ಲದೆ, ವಿದ್ಯಾರ್ಥಿಗಳಿಗೆ ವಾಸದ ಕೊಠಡಿ ಸಿಕ್ಕುವುದಂತೂ ತುಂಬ ಕಷ್ಟ. ನಮ್ಮ ವಿಶ್ವವಿದ್ಯಾನಿಲಯದಲ್ಲಿ ಪ್ರವೇಶ ಸಿಕ್ಕುವುದಕ್ಕಿಂತ ಮುಂಚೆ, ವಾಸಮಾಡಲು ಜಾಗವಿದೆಯೆಂದು ರುಜುವಾತು ಮಾಡಿ ತೋರಿಸಿಕೊಡಬೇಕು ಹಾಗಿಲ್ಲದೆ ಪ್ರವೇಶವೇ ಸಿಕ್ಕುವುದಿಲ್ಲ.

ಸಿನ್‌ಸಿನಾಟಿ ವಿಶ್ವವಿದ್ಯಾನಿಲಯದಲ್ಲಿ ೧೯೦೦೧ ವಿದ್ಯಾರ್ಥಿಗಳಿದ್ದಾರೆ. ವಿಸ್‌ಕಾನ್‌ಸಿನ್‌ದಲ್ಲಿ ೨೬೫೦೦ ವಿದ್ಯಾರ್ಥಿಗಳು. ಟೆಕ್ಸಾಸ್ ವಿಶ್ವವಿದ್ಯಾನಿಲಯದಲ್ಲಿ ೩೧೦೦೦, ಮಿನ್ನೇಸೋಟದಲ್ಲಿ ೨೯೦೦೦, ಬೋಸ್ಟನ್ ವಿಶ್ವವಿದ್ಯಾನಿಲಯದಲ್ಲಿ ೨೬೦೦೦, ಚಿಕಾಗೋ ವಿಶ್ವವಿದ್ಯಾನಿಲಯದಲ್ಲಿ ೧೩೫೦೦, ಮಿಚಿಗನ್‌ದಲ್ಲಿ ೨೦೫೦೦, ವಾಶಿಂಗಟನ್ ವಿಶ್ವವಿದ್ಯಾನಿಲಯದಲ್ಲಿ ೧೭೫೦೦ ವಿದ್ಯಾರ್ಥಿಗಳು ಹೀಗೆ ಎಲ್ಲ ವಿಶ್ವವಿದ್ಯಾನಿಲಯಗಳು ತುಂಬಿಬಿಟ್ಟಿವೆ.

ವಿದ್ಯಾರ್ಥಿಗಳು ಹೀಗೆ ಮಿಕ್ಕಿದ್ದರಿಂದ ಕ್ಯಾನ್‌ಸಾಸ್ ವಿಶ್ವವಿದ್ಯಾನಿಲಯ ಕೆಲವು ನಿಯಮಗಳನ್ನು ಮಾಡಿ ಪ್ರವೇಶ ಕೊಡುತ್ತಿದೆ. (೧) ಸೈನಿಕ ವಿದ್ಯಾರ್ಥಿಗಳು ಮತ್ತು ಕ್ಯಾನ್‌ಸಾಸ್ ಹೈಸ್ಕೂಲಿನ ವಿದ್ಯಾರ್ಥಿಗಳು. (೨) ಕಾಲೇಜು ಬಿಟ್ಟು ಪುನಃ ಸೇರಲು ಇಚ್ಛಿಸಿದ ಅದೇ ಕಾಲೇಜಿನ ಹಿಂದಿನ ವಿದ್ಯಾರ್ಥಿಗಳು. (೩) ಕ್ಯಾನ್‌ಸಾಸ್ ವಿಶ್ವವಿದ್ಯಾನಿಲಯದ ಶಿಕ್ಷಕರ ಮತ್ತು ಕೆಲಸಗಾರರ ಮಕ್ಕಳು. (೪) ಕ್ಯಾನ್‌ಸಾಸ್ ನಗರದ ಸುತ್ತು ಮುತ್ತಲಿನ ಪಟ್ಟಣಗಳ ವಿದ್ಯಾರ್ಥಿಗಳು. (೫) ಇತರರು ಹೀಗೆ ಕ್ರಮವಾಗಿ ಪ್ರವೇಶದ ನಿಯಮಗಳನ್ನು ಇಟ್ಟುಕೊಂಡಿದ್ದಾರೆ.

ಮಿಸ್ಸಿಸ್ಸಿಪ್ಪಿ ವಿಶ್ವವಿದ್ಯಾನಿಲಯವು ಸಂಸ್ಥಾನದ ಆಡಳಿತದಲ್ಲಿದ್ದು ೪೦೦೦ ವಿದ್ಯಾರ್ಥಿಗಳನ್ನೊಳಗೊಂಡಿದೆ. ಅಲ್ಲಿ ನೂರಕ್ಕೆ ೨೦ ರಷ್ಟು ವಿದ್ಯಾರ್ಥಿಗಳು ಹೆಚ್ಚಿದ್ದಾರೆ. ಪರಸಂಸ್ಥಾನದ ವಿದ್ಯಾರ್ಥಿಗಳಿಗೆ ವಾಸಕ್ಕೆ ಯೋಗ್ಯವಾದ ಜಾಗ ಸಿಕ್ಕರೆ ಅವರಿಗೆ ಪ್ರವೇಶ ಕೊಡಲಾಗುವುದು. ಮುಕ್ಕಾಲುಭಾಗ ವಿದ್ಯಾರ್ಥಿಗಳೆಲ್ಲರೂ ಸೈನಿಕ ವಿದ್ಯಾರ್ಥಿಗಳೇ. ನಗರದ ಸಂಸಾರಗಳು ಕೆಲವು ವಿದ್ಯಾರ್ಥಿಗಳಿಗೆ ವಾಸಕ್ಕೆ ಜಾಗ ಕೊಡುತ್ತವೆ.

ಮಿನ್ನೇಸೋಟ, ವೈಮಿಂಗ್ ಮತ್ತು ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾನಿಲಯಗಳಲ್ಲಿ ಪ್ರವೇಶ ದೊರಕುವದು ಅಷ್ಟೇ ಕಷ್ಟವಾದರೂ ವಾಸದ ಜಾಗ ಸಿಕ್ಕುವುದು ಕಷ್ಟ.

ಸುಪ್ರಸಿದ್ಧವಾದ ಹಾರ್ವರ್ಡ್ ವಿಶ್ವವಿದ್ಯಾನಿಲಯದಲ್ಲಿ ೫೬೦೦ ವಿದ್ಯಾರ್ಥಿಗಳಿದ್ದಾರೆ. ಇದು ಎಂದಿಗಿಂತ ಹೆಚ್ಚಿನ ಸಂಖ್ಯೆ. ಪುಸ್ತಕ ಭಂಡಾರ, ಊಟದ ಸೌಲಭ್ಯಗಳು ಅತಿ ಕಷ್ಟವಾಗಿದೆ. ಅದರೂ ಹಾರ್ವರ್ಡ್ ವಿಶ್ವವಿದ್ಯಾನಿಲಯದ ವಿದ್ಯಾಮಟ್ಟ ಕೆಳಗಿಳಿಸಲ್ಪಡುವ ಸಂಭವವಿಲ್ಲವೆಂದು ಅಲ್ಲಿಯ ಅಧಿಕಾರಿಗಳು ತಿಳಿಸಿದ್ದಾರೆ.

ಇಂದು ಅಮೇರಿಕದಲ್ಲಿ ಪ್ರೌಢ ಕಾಲೇಜಿನ ಶಿಕ್ಷಣ ವಿಸ್ತರಣಾವಸ್ಥೆಯಲ್ಲಿದೆ. ಎಲ್ಲ ಕಾಲೇಜುಗಳೂ ಸಾಮಾನ್ಯವಾಗಿ ತಮ್ಮ ಹಿಂದಿನ ಮಟ್ಟದಿಂದ ಕೆಳಗಿಳಿದು ಈಗಿನ ವಾತಾವರಣಕ್ಕೆ ಹೊಂದಿಕೊಳ್ಳಬೇಕಾಗಿದೆ. ಕೆಲವು ವರ್ಷಗಳವರೆಗೆ ಕಾಲೇಜಿಗೆ ಸೇರುವ ವಿದ್ಯಾರ್ಥಿಗಳು ತಮಗೆ ಇಷ್ಟ ಬಂದ ಕಾಲೇಜಿಗೆ ಸೇರಲು ಸಾಧ್ಯವಾಗದೇ ಇರಬಹುದು. ಕೆಲವರಿಗೆ ಪ್ರವೇಶವೇ ಸಿಕ್ಕದಿರಬಹುದು. ಈ ಕೆಲವು ತೊಂದರೆಗಳು ಬೇಗನೇ ಮಾರ್ಪಾಡಾಗಬಹುದೆಂದು ಕೆಲವು ವಿದ್ಯಾಪ್ರವೀಣರು ಹೇಳುತ್ತಿದ್ದಾರೆ. ಪ್ರೌಢಶಿಕ್ಷಣ ಈ ದೇಶದಲ್ಲಿ ತನ್ನ ತುಟ್ಟ ತುದಿಯನ್ನು ಮುಟ್ಟಿದೆ. ಈ ಅಭಿವೃದ್ಧಿ ದೇಶದ ಏಳಿಗೆಗೆ ಕಾರಣವಾಗಬಹುದು.

ಅಮೇರಿಕದ ದೃಷ್ಟಿಯಲ್ಲಿ ಸ್ವತಂತ್ರ ಹಿಂದುಸ್ಥಾನ

(ಮೊದಲನೆಯ ಪುಟದಿಂದ)

ಅಸ್ತಿ ಎನಿಸಿತ್ತು. ಆದರಿಂದ ಅವರಿಗೆ ಅಲ್ಲಿಯ ಒಂದು ಅಂಗುಲವನ್ನು ಕೂಡ ಪಾಕಿಸ್ತಾನಿಗಳಿಗೆ ಬಿಟ್ಟುಕೊಡಬಾರದೆನಿಸಿದ್ದರೆ ಆಶ್ಚರ್ಯವಲ್ಲ. ಮಾಸ್ಟರ ತಾರಾಸಿಂಗರ ನೇತೃತ್ವದಲ್ಲಿ ಸಂಘಟಿತರಾದ ಅವರು ಅತಿ ಘೋರ ಪ್ರಮಾಣದಿಂದ ದಾಳಿಗಾರಂಭಿಸಿದ್ದು ಬಹು ಮುಖ್ಯ ಸಂಗತಿ. ಲಾಹೋರಿನ ಮುಸಲ್ಮಾನರು ಹಿಂದೆ ಶೀಖರನ್ನು ಓಡಿಸಿದರು. ಅಮೃತಸರದಿಂದ ಅವರು ಓಡಿ ಹೋಗಬೇಕಾಯಿತು. ಆದರೆ ನಗರಗಳಲ್ಲಿಯ ನಿಷ್ಪಾಪ ಪ್ರಜೆಗಳ ಕೊಲೆ ಆಗಿಂದಾಗ ಮುಗಿದರೆ ಹಳ್ಳಿಗೆ ಹಬ್ಬಿದ ಕೊಲೆ ಸುಲಿಗೆ ಕಾಳ್ಕಿಚ್ಚಿನಂತೆ ಹರಡುತ್ತಿದೆ. ಇದಕ್ಕೆ ಶೀಖ್ ಸಂಸ್ಥಾನಿಕರೂ ಹೊಣೆಗಾರರಾಗಿದ್ದಾರೆ. ಇದಕ್ಕೆ ಬ್ರಿಟಿಶರು ವಿಭಜನೆಯ ಮುನ್ನ ಶೀಖ ಸಿದ್ಧತೆಯನ್ನು ಅಲಕ್ಷಿಸಿದ್ದೇ ಕಾರಣ ಅಂತೂ ಅಧಿರಾಜ್ಯಗಳೆರಡರ ಪ್ರಜೆಗಳೂ ಈ ಪಿಡುಗಿನಿಂದ ನೋತು ಸುಣ್ಣವಾಗಿದ್ದಾರೆ.

ಹೊರ ಜಗತ್ತಿನಲ್ಲಿ, ಮುಖ್ಯವಾಗಿ ಅಮೇರಿಕದಲ್ಲಿ, ಭರತಖಂಡದ ಇಂದಿನ ಅರ್ಧ ರಾಜಕೀಯ ಅರ್ಧ ಧಾರ್ಮಿಕವೆನಿಸುವ ಘರ್ಷಣದ ಬಗ್ಗೆ ಹೆಚ್ಚಿನ ವಿಕ್ಷಿಪ್ತ ಅಭಿಪ್ರಾಯಗಳು ಹೊರಟಿರದಿದ್ದರೂ ಕೆಲವುಟ್ಟಿಗೆ ವಿಚಿತ್ರವೆನಿಸುವ ಮತ್ತು ಕೆಲವೆಡೆ ಸಹಜವಾಗಿಯೂ ತೋರುವ ಕಾರಣಗಳನ್ನು ಕೊಟ್ಟು ಜನತೆ ಒಟ್ಟಿನ ಮೇಲೆ ನಮ್ಮ ಅಧಿರಾಜ್ಯಗಳ ಮುನ್ನಡೆಯ ಬಗ್ಗೆ ಆಶೆಯನ್ನು ವ್ಯಕ್ತಪಡಿಸಿದೆಯಲ್ಲದೆ ನಿರಾಶೆಯನ್ನಲ್ಲವೆಂಬುದು ಮೇಲಿನ ಸಾಲುಗಳಿಂದ ವ್ಯಕ್ತವಾಗುತ್ತದೆ.

ಮೈಸೂರಿನಲ್ಲಿ ಲಷ್ಕರ ಮೊಹಲ್ಲಾದಲ್ಲಿ ೧೩ ಕ್ಕೆ ಪೋಟರ [illegible] ದೇವದಾಸರ ಮನೆಯಲ್ಲಿ ಪೆಟ್ರೋಲಿಗೆ ಬೆಂಕಿ ಹತ್ತಿ ಸಿಡಿದು ಮನೆಯಲ್ಲಿಯ ಮೂವರು ತಕ್ಷಣ ಮರಣಹೊಂದಿದರು.

ಮೈಸೂರು ವಿದ್ಯುತ್ ಕೆಲಸಗಾರರು ಸಭೆ ಸೇರಿ ತಮ್ಮ ಬೇಡಿಕೆಗಳು ಪೂರೈಸದಿದ್ದಲ್ಲಿ ಜಾನೇವರಿ ೧ ರಿಂದ ಸಂಪು ಹೂಡುವದಾಗಿ ನಿರ್ಧರಿಸಿದರು. ಸಂಘವನ್ನು ಮಾನ್ಯ ಮಾಡಬೇಕು. ಕೆಲಸಗಾರರಿಗೆಲ್ಲ ತುಟ್ಟಿಭತ್ತೆಯಲ್ಲದೆ ೫ ರೂ. ವಿಶೇಷ ಭತ್ತೆ ಕೊಡಬೇಕು ಮೊದಲಾದವು ಅವರ ಬೇಡಿಕೆಗಳಾಗಿವೆ.

ಸಾದರ ಸ್ವೀಕಾರ

ಶ್ರೀಕೃಷ್ಣ ಪಂಚಾಂಗ
(ಸರ್ವಧಾರಿ ಸಂವತ್ಸರ)

ಸಂಶೋಧಕರು ಶ್ರೀ ಲಕ್ಷ್ಮೀನಾರಾಯಣ ಅಡಿಗ ಮತ್ತು ಶ್ರೀ ಕೃಷ್ಣ ಉಪಾಧ್ಯಾಯ. ಪ್ರಕಾಶಕರು- ಮೆಜೆಸ್ಟಿಕ್ ಪ್ರೆಸ್. ರಥಬೀದಿ ಉಡುಪಿ. ಪಂಚಾಂಗವು- ಸರ್ವವಿಷಯಗಳ ಬಗ್ಗೆ ಸಮಾಧಾನಕಾರಕ ವಿಚಾರ ಗ್ರಹ ಬಲಗಳನ್ನೂ ಗ್ರಹಣಾದಿಗಳನ್ನೂ, ರಾಶಿಫಲಗಳನ್ನು ವಿವರವಾಗಿ ಕೊಟ್ಟಿದ್ದಾರೆ. ಪುಟಗಳು ೭೦ ಬೆಲೆ ೬ ಆಣೆ ಮಾತ್ರ

ವೇದಾಂತ ಕುಸುಮ

ಸೋಸಲೇ ಶ್ರೀ. ವ್ಯಾಸರಾಜ ಮಠಾಧೀಶ್ವರರಾದ ಶ್ರೀ ಮದ್ವಿದ್ಯಾಪ್ರಸನ್ನತೀರ್ಥ ಶ್ರೀಪಾದಂಗಳವರ ದ್ವಾದಶ ವಾರ್ಷಿಕ ಪಟ್ಟಾಭಿಷೇಕ ಮಹೋತ್ಸವದ ಕಾರ್ಯನಿರ್ವಾಹಕ ಮಂಡಲದವರ ಕಾಣಿಕೆ. ಪುಟಗಳು ೧೫೦. ಬೆಲೆ ೨—೪—೦

ಶ್ರೀ ಕೃಷ್ಣ ಸಂದೇಶ (ಉಡುಪಿ)

ಸಂಪಾದಕರು: ಮುದ್ರಾಡಿ ಜನಾರ್ದನಾಚಾರ್ಯ ಶಿರೋಮಣಿ ಅವರು. ಕರ್ನಾಟಕದ ಬಹಳ ಹಳೆಯ ಮಾಸಪತ್ರಿಕೆಗಳಲ್ಲಿ ಶ್ರೀಕೃಷ್ಣ ಸಂದೇಶವೊಂದು. ಇದೀಗ ಮತ್ತೆ ತಲೆಎತ್ತಿ ಕನ್ನಡಿಗರ ಸೇವೆಗೆ ಸನ್ನದ್ಧವಾದುದು ತುಂಬಾ ಸಂತೋಷದ ಸಂಗತಿ ನಾವು ಈ ಪತ್ರಿಕೆಯನ್ನು ಹೃತ್ಪೂರ್ವಕ ಸ್ವಾಗತಿಸಿ ಯಶ ಕೋರುತ್ತೇವೆ.

ಎಡೆಗಳು ಹೇಳುವ ಕಂನಾಡ ಕತೆ

ಲೇ—ಶ್ರೀ ಶಂ ಬಾ. ಜೋಶಿ ಪ್ರಕಾಶಕರು ಮಾಧವ ಬಲ್ಲಾಳ ಬಂಧುಗಳು ಕಾನ ಅಪಪತ್ರದ ೧೨+೨೩೪ ಪುಟಗಳು ಬೆಲೆ ೩ ರೂ.

ಸ್ತ್ರೀ (ದಿವಾಳೀ ಅಂಕ)

ಸಂಪಾದಕ, ಮುದ್ರಕ ಶ್ರೀ ಶಂ. ವಾ. ಕಿರ್ಲೋಸ್ಕರ. ಪುಟಗಳು ೧೬೩. ಬೆಲೆ ೧೦ ಆಣೆ.

ಮನೋಹರ (ದಿವಾಳೀ ಅಂಕ)

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ -ಶ್ರೀ ಶಂ. ವಾ. ಕಿರ್ಲೋಸ್ಕರ. ಪುಟಗಳು ೯೮. ಬೆಲೆ ೬ ಆಣೆ.

ಮನೋಹರ (ಮರಾಠಿ ಮಾಸಿಕ)
(ಗೋಮಾಂತಕ ಸಾಹಿತ್ಯ ವಿಶೇಷಾಂಕ)
ಸಂಪಾದಕರು-ಶಂ. ವಾ. ಕಿರ್ಲೋಸ್ಕರ—ಕಿರ್ಲೋಸ್ಕರವಾಡಿ.
ಪುಟಗಳು ಸುಮಾರು ೧೦೦ ಬೆಲೆ ೬ ಆಣೆ

ಪಾಲಿಸ್ತಾನದ ಗತಿ ?

ತಮ್ಮ ಸೈನಿಕರನ್ನು ಮೇ ೧೫ಕ್ಕೆ ಪಾಲಿಸ್ತಾನದಿಂದ ಹಿಂತೆಗೆದುಕೊಳ್ಳುವದಾಗಿ ಬ್ರಿಟಿಶರಿಂದು ಭೀಷ್ಮ ಪ್ರತಿಜ್ಞೆ ಮಾಡಿದ್ದಾರೆ. ಪಾಲಿಸ್ತಾನವನ್ನು ವಿಭಜಿಸಬೇಕೆಂದು ಸಂಯುಕ್ತ ರಾಷ್ಟ್ರಸಂಘದಲ್ಲಿ ಪಾಸಾಗಿದೆ. ಅರಬರು ವಿಭಜನೆಯನ್ನು ಪ್ರತಿಭಟಿಸಿ ಮನಬಂದಂತೆ ಬೆದರಿಕೆಗಳನ್ನು ಹಾಕಿದ್ದಾರೆ. ಯೆಹೂದಿಗಳು ಅವೆಲ್ಲ ಪೊಳ್ಳೆಂದು ಅಲ್ಲಗಳೆಯುತ್ತಿದ್ದಾರೆ. ಅವರ ಪ್ರಚಾರಗಳಲ್ಲಿ ಹುರುಳಿರುವುದು ಕಡಿಮೆ.

ಇಂಗ್ಲೀಷರು ಇಂಗ್ಲೆಂಡಿನಲ್ಲಿದ್ದುದಕ್ಕಿಂತ ಹೆಚ್ಚುಕಾಲ ತಾವು ಪಾಲಿಸ್ತಾನದಲ್ಲಿ ವಾಸಿಸುತ್ತಿದ್ದರೂ ತಮ್ಮ ಹಕ್ಕುಗಳಿಗೆ ಬೆಲೆಕೊಡದೆ ಹೆಚ್ಚಿನ ಭಾಗವನ್ನು ಯೆಹೂದಿಗಳಿಗೆ ಕೊಡಲಾಯಿತೆಂದು ಅರಬರ ದೂರು. ಸುಮಾರು ೫೬ರಷ್ಟು ಭಾಗವು ಯೆಹೂದಿಗಳಿಗೆಂದು ಸೂಚಿಸಲಾಗಿದೆ. ಅದರಲ್ಲಿ ಪಾಲಿಸ್ತಾನದ ಎರಡು ಬಂದರುಗಳೂ ಯೆಹೂದಿಗಳಿಗೆ ಹೋಗಿವೆ; ಜೊತೆಗೆ ತೋಟಗಳ ಪ್ರದೇಶವೂ ಅತ್ಯಂತ ಹೆಚ್ಚಾಗಿ ಹಂಚಲಾಗಿದೆ. ಅಲ್ಲಿ ೪,೯೮,೦೦೦ ಯೆಹೂದಿಗಳೂ ೩,೦೫,೦೦೦ ಅರಬರೂ ಇದ್ದಾರೆ. ಯೆಹೂದಿಗಳ ಭಾಗದಲ್ಲಿ ೧,೪೦,೦೦೦ ಯೆಹೂದಿಗಳೂ ಅವರ ಒಂದೂವರೆ ಪಟ್ಟು ಅರಬರೂ ವಾಸವಾಗಿದ್ದಾರೆ. ಇದೇ ಈ ವಿಭಜನೆಯ ವೈಲಕ್ಷಣ್ಯ !

ಮೊದಲು ಅರಬರು ಬ್ರಿಟಿಶರೊಡನೆ ಹೋರಾಡಬೇಕಾದೀತೆಂದು ಬಹಳ ಅಂಜಿದ್ದರು. ಆದರೀಗ ಅವರು ಗುಡ್ಡಿಚಾಪೆ ಕಟ್ಟುವರೆಂಬುದನ್ನು ಕೇಳಿ ಅರಬರಿಗೆ ಆನಂದವಾಗಿದೆ. ಯಾವ ಕಾರಣದಿಂದಲೂ ಬ್ರಿಟನ್ನು ವಾಪಸು ಹೋಗುವ ಮುನ್ನ ವಿಭಜನೆಯನ್ನು ಅಮಲಿನಲ್ಲಿ ತಂದು ಕೊಟ್ಟು ಹೋಗಬೇಕೆಂಬುದು ನ್ಯಾಯವಲ್ಲ. ಅಮೇರಿಕದ ಈ ಅಸ್ವಾಭಾವಿಕ ಸಲಹೆಯನ್ನು ಬ್ರಿಟನ್ನಿಂದೂ ಪುರಸ್ಕರಿಸದು. ಅಥವಾ ಅಮೇರಿಕ-ರಶಿಯಗಳ ಸಂಯುಕ್ತ ಸೇನೆಯಂತೆ ಸಂ. ರಾ. ಸಂಘದ ಪೋಲೀಸು ದಳವಾಗಿ ಬ್ರಿಟಿಶ ಸೈನ್ಯವು ಕೆಲಸ ಮಾಡಬೇಕೆಂಬುದಕ್ಕೂ ಬ್ರಿಟನ್ನು ಒಪ್ಪದು. ಬ್ರಿಟನ್ನು ಹೋದ ನಂತರ ಪಾಲಿಸ್ತಾನದ ಗತಿಯೇನೆಂಬುದು ಭಯಂಕರ ಊಹೆಗೆ ಎಡೆಗೊಡುತ್ತದೆ.

ಭಾವೀ ದುಷ್ಪರಿಣಾಮಗಳನ್ನು ತಡೆಗಟ್ಟಲು ಒಂದೇ ಒಂದು ಉಪಾಯವೆಂದರೆ, ಅರಬ್ಬೀ ಸೈನ್ಯದ ತುಂಡುಗಳನ್ನು ಬ್ರಿಟಿಶ ಸೈನ್ಯದ ನಿರ್ಗಮನಾನಂತರ ಪಾಲಿಸ್ತಾನದಲ್ಲಿ ನಿಗ್ಗಿಸಿ ತನ್ಮೂಲಕ ಶಾಂತಿಸುವ್ಯವಸ್ಥೆಗಳನ್ನು ಕಾಯುವುದು— ಎಂದು ಮೇಜರ್ ಜನರಲ್ ಸರ್ ಎಡ್ವರ್ಡ್ ಸ್ಪಿಯರ್ಸರು ಅಭಿಪ್ರಾಯ ಪಡುತ್ತಾರೆ. ಇವರು ಲೆಬನಾನ ಸಿರಿಯಾಗಳಲ್ಲಿ ಹಿಂದೆ ಬ್ರಿಟಿಶ ಮಂತ್ರಿಗಳಾಗಿದ್ದರು. ಅವರ ಅನುಭವದ ಪ್ರಕಾರ ಯೆಹೂದಿ ಸೈನ್ಯಗಳು ಹೀಗೆ ವ್ಯವಸ್ಥೆಯಾದರೆ ಅಷ್ಟು ವಿಶಾಲವಾದ ಮುಖದಲ್ಲಿ ವಾಳಿಮಾಡ ಹೊರಡುವಷ್ಟು ಅಪ್ರಬುದ್ಧವೆನಿಸಲಾರವೆಂದು ತೋರುವುದಾಗಿ ಹೇಳುತ್ತಾರೆ.

ಸದ್ಯ: ವಿಭಜನೆಯಿಂದ ಯೆಹೂದಿಗಳ ವಿರುದ್ಧ ಅರಬರ ದ್ವೇಷಭಾವ ಬಹಳ ಹೆಚ್ಚಿದೆ. ಈ ಭಾವ ದಿನೇ ದಿನೇ ಹೆಚ್ಚುತ್ತ ಹೋದರೆ ಯೆಹೂದಿ ಪಕ್ಷಪಾತಿಗಳ ದ್ವೇಷದಿಂದ ಯೆಹೂದಿ ದ್ವೇಷ, ತದನಂತರ ಕ್ರೈಸ್ತರ ದ್ವೇಷ-ಹೀಗೆ ಒಂದರಿಂದ ಒಂದು ಹುಟ್ಟುವುದು ಖಂಡಿತ. ಇದರಿಂದ ಕಟ್ಟಕಡೆಗೆ ಲಾಭಪಡೆವ ಒಂದೇ ಒಂದು ರಾಜ್ಯವೆಂದರೆ ರಶಿಯ. ಅದಕ್ಕಾಗಿ ಅದು ಕಾದಿದೆ. ವಿಭಜನೆಗೊಪ್ಪಿ ಅಮೇರಿಕದಲ್ಲಿಯ ಯೆಹೂದಿ ಮತಗಳ ಆಶೆಯಿಂದ ಅಮೇರಿಕನ್ನರು ರಶಿಯಕ್ಕೆ ಮಧ್ಯಪೂರ್ವದ ಬೀಗದ ಕೈಯೊಂದನ್ನ ಕೊಟ್ಟಂತಾಯಿತೆಂದು ರಾಜಕಾರಣಿಗಳ ಮತ.

ಅರಬರ ಬಲದ ವಿಚಾರ ಹೀಗಿದೆ: ಅವರ ಈಜಿಪ್ತದ ಸೈನ್ಯ ೫೦ ಸಾವಿರವಿದ್ದರೂ ಅದು ಅಷ್ಟು ಆಧುನಿಕ ಯುದ್ಧೋಪಕರಣಗಳಿಂದ ಸುಸಜ್ಜಿತವಾದುದಲ್ಲ. ಇರಾಕೀ ಸೈನ್ಯವು ೩೦ ಸಾವಿರವಿದೆಯೆಂದು ಹೇಳಲಾಗಿದೆ. ಇದೇ ಅರಬರಾಷ್ಟ್ರಗಳ ಸೈನ್ಯಗಳಲ್ಲಿ ಹೆಚ್ಚು ಸುಸಜ್ಜಿತ ಮತ್ತು ಅನುಭವ ಬಾಹುಳ್ಯವುಳ್ಳದ್ದೆಂದು ತಜ್ಞರ ಅಭಿಪ್ರಾಯ. ಅದರಲ್ಲಿ ಸಶಸ್ತ್ರ ದಳದವರು ೨೦ ಸಾವಿರವಿದ್ದಾರೆ; ೫೦ ಯುದ್ಧವಿಮಾನಗಳಿವೆ! ಅವುಗಳಲ್ಲಿ ಅರ್ಧದಷ್ಟಾದರೂ ಉಪಯೋಗಕ್ಕೆ ಬರುವಂಥವು. ಸಿರಿಯದ ಸೈನ್ಯ ೧೦ ಸಾವಿರವಿದೆ. ಇದು ನಿರುಪಯೋಗಿ; ಲೆಬನಾನಿನ ಬಲ ೪ ಸಾವಿರ ಸಾದಿ ಅರೇಬಿಯದ್ದು ೧೩ ಸಾವಿರ. ಇವುಗಳೂ ಅಷ್ಟಕ್ಕಷ್ಟೇ. ಟ್ರಾನ್ಸ್‌ಜೋರ್ಡನಿನ್ನ ಐದಾರು ಸಾವಿರ ಸೈನಿಕರು ತಕ್ಕಮಟ್ಟಿಗೆ ಸಮರ್ಥರಿದ್ದಾರೆ. ಅವರಲ್ಲಿ ಸುಮಾರು ೨ ಸಾವಿರ ಜನರು ಸದ್ಯದ ಸಂದರ್ಭದಲ್ಲಿ ನೆರವಾಗಬಹುದೆಂದು ಹೇಳಲಾಗುತ್ತದೆ. ಪಾಲಿಸ್ತಾನದ ಅರಬ ಯುವಕ ಬಲ ೨೦ ಸಾವಿರದಷ್ಟಿದೆ. ಕಳ್ಳಬಟ್ಟೆಗೆ ನಿಪುಣರಿದ್ದರೂ ಕಷ್ಟ ಸಹಿಷ್ಣುಗಳಲ್ಲ. ಇದನ್ನವಲೋಕಿಸಿದರೆ ಯೆಹೂದಿಗಳಿಗೆ ಸರಿಯಾದ ವಿಮಾನ ಸಹಾಯವಿಕ್ಕರೆ ಅಲ್ಲಲ್ಲಿ ಅಸಂಘಟಿತವಾಗಿ ಏಳಬಹುದಾದ ಅರಬ ದಾಳಿಗಳನ್ನು ಅಲ್ಪಕಾಲದಲ್ಲಿ ಬಡಿದು ಹಾಕಬಲ್ಲರೆಂಬುದು ಸ್ಪಷ್ಟವಾಗಿ ಕಾಣುತ್ತದೆ.

ಕೇವಲ ಸಂಖ್ಯಾಬಲದಿಂದ ಅರಬರು ಯುದ್ಧದಲ್ಲಿ ಜಯದೊರಕಿಸಿ ಕೊಳ್ಳಲಾರರು. ವೈಜ್ಞಾನಿಕ ತರಬೇತು ಪಡೆದ ಸಾಹಸಿಗಳೂ ಟಂಟಾಲಿಗಳೂ ಆದ ಅಲ್ಪಸಂಖ್ಯಾಕ ಯಹೂದಿ ಸೈನಿಕರು ಕೆಲಕಾಲದಲ್ಲಿ ಮಧ್ಯಪೂರ್ವದ ಗುಂಡಿಗೆಯನ್ನು ಆದುರಿಸಬಲ್ಲರೆಂದು ಯಾರಾದರೂ ಹೇಳಬಹುದು. ಇದರ ಮೇಲೆ ಮತ್ತೊಂದು ತಂತ್ರ ತಲೆಹಾಕಿದೆ. ಪಾಕಿಸ್ತಾನವೇನಾದರೂ ಅರಬರಿಗೆ ಯುದ್ಧ ಸಹಾಯ ಕೊಡ ಹೋದರೆ ರಶಿಯವು ಯೆಹೂದಿಗಳನ್ನು ಬೆಂಬಲಿಸಬಹುದಾಗಿ ಊಹಿಸಿದೆ. ಇದರಿಂದ ಪುನ: ಸಂ. ರಾ. ಸಂಘದಲ್ಲಿ ಮತ್ತು ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಹೊಸ ಸಮಸ್ಯೆಗಳುದ್ಭವಿಸದಿರವು.

ಚತುರ್ರಾಷ್ಟ್ರ ಸಮ್ಮೇಳನದಲ್ಲಿ ಚರ್ಚಿತ ಚರ್ವಣ

ಲಂಡನ್ನಿನಲ್ಲಿ ನಡೆಯುತ್ತಿರುವ ಚತುರ್ರಾಷ್ಟ್ರ ಸಮ್ಮೇಳನ ತಾ ೧೩ರ ಮಧ್ಯಾಹ್ನ ಮುಂದೂಡಲ್ಪಟ್ಟಿತು. ಎಡದ ಎತ್ತು ಎಡಕ್ಕೂ ಬಲದ ಎತ್ತು ಬಲಕ್ಕೂ ಎಳೆಯುತ್ತಿದ್ದುದರಿಂದ ಗಾಡಿ ಬೀಳುವ ಪರಿಸ್ಥಿತಿಯುಂಟಾಗಿ ಸದ್ಯಕ್ಕೆ ಮುನ್ನಡೆಯನ್ನು ನಿಲ್ಲಿಸಲಾಗಿದೆ.

ರಶಿಯದ ಧೋರಣ ಮೊದಲಿನಂತೆಯೇ ಉಗ್ರವಾಗಿದೆಯೆಂದೂ ಅಮೇರಿಕವು ತನ್ನ ಸ್ಥಾನವನ್ನು ಪುನರ್ನಿರ್ದೇಶನ ಮಾಡುತ್ತ, ಯಾವ ರಾಜಕೀಯ ಒಪ್ಪಂದವಾಗಬೇಕಾದರೂ ಅದಕ್ಕೆ ಪೂರ್ವದಲ್ಲಿ ಜರ್ಮನಿಯ ವಿವಿಧ ವಲಯಗಳಿಂದ ನಷ್ಟ ಭರ್ತಿಗಾಗಿ ಒಯ್ಯುವ ಪದಾರ್ಥಗಳ ವಿವರವನ್ನೊಳಗೊಂಡು ಒಂದು ಆರ್ಥಿಕ ಏಕಸೂತ್ರತೆಯನ್ನು ರಚಿಸುವ ಬಗ್ಗೆ ಒಪ್ಪಂದವಾಗಬೇಕೆಂದು ಆಗ್ರಹ ತೊಟ್ಟಿತೆಂದೂ ತಿಳಿಯುತ್ತದೆ.

ಸಭೆಯನ್ನು ಮುಂಬರಿಸಿದುದರಿಂದ ರಶಿಯದ ಪ್ರತಿನಿಧಿಯಾದ ಮೊಲೊಟೋವರಿಗೆ ಮಾಸ್ಕೋದೊಡನೆ ಪುನ: ವಿಚಾರವಿನಿಮಯ ಮಾಡಲವಕಾಶಕೊಟ್ಟಂತಾಗಿದೆ. ರಶಿಯದಲ್ಲಿ ಆಗಲೇ ಈ ಸಮ್ಮೇಳನ ಯಶಸ್ವಿಯಾಗುವ ಸಂಭವವಿಲ್ಲೆಂದು ಪ್ರಚಾರ ನಡೆದಿದೆ.

‘ಎಸೆದ ಕನ್ನಡಿ ಹರಳು ಬೆಸೆಯೆ ಕೂಡದು’ ಎಂಬ ಗಾದೆಯಂತೆ ರಶಿಯಕ್ಕೂ ಫ್ರಾನ್ಸ್, ಅಮೇರಿಕ, ಇಗ್ಲೆಂಡುಗಳಿಗೂ ಎಂದಿನಿಂದಲೂ ಇದ್ದ ಒಡಕು ಐಕಮತ್ಯ ಮುಚ್ಚಿ ಹೋಗಬಹುದೆಂದು ಯಾರಾದರೂ ಎಣಿಸಲು ಸಾಧ್ಯವೆ? ಈ ಎರಡು ಬಣಗಳು ಪರಸ್ಪರರನ್ನು ಸಂಶಯ ದೃಷ್ಟಿಯಿಂದ ನೋಡುವುದು ತೀರ ಹೆಚ್ಚಾಗಿ ಹೋಗಿರುವುದರಿಂದ ಸದ್ಯದ ಪರಿಸ್ಥಿತಿಯನ್ನವಲೋಕಿಸಿದರೆ ಸಮ್ಮೇಳನದ ಯಶಸ್ಸಿನ ಬಗ್ಗೆ ಆಶಾವಾದಿಗಳಾಗಲು ಅವಕಾಶ ಕಡಿಮೆ ಎಂದು ಬಲ್ಲವರ ಮತ.

ಒಂದೇ ಒಂದು ಒಪ್ಪತಕ್ಕ ಮಾತು ಹೊರಟದ್ದೆಂದರೆ, ಮಾರ್ಶಲ ಮತ್ತು ಬೆವಿನ್ನರಲ್ಲಿ. ಅಥವಾ ಆಂಗ್ಲೋ—ಅಮೇರಿಕನ್ನರಲ್ಲಿ. ಅದೆಂದರೆ, ಜರ್ಮನಿಯ ಪಾಲ್ಕು ವಲಯಗಳಲ್ಲಿ ಆರ್ಥಿಕ ಏಕಸೂತ್ರತೆಯನ್ನು ಸ್ಥಾಪಿಸಲು ಪ್ರಯತ್ನಿಸುವುದು. ಈ ಸಂಬಂಧದಲ್ಲಿ ಹೊರಡಬಹುದಾದ ಯೋಜನೆಗಳಿಗೆ ಫ್ರಾನ್ಸಿನ ಬೆಂಬಲ ಒಂದು ವೇಳೆ ದೊರೆತರೂ ರಶಿಯದ ಅಭಿಪ್ರಾಯ ಎಲ್ಲ ಮುದ್ದೆಗಳ ಮೇಲೂ ಅನುಕೂಲವಾಗಿ ಪರಿಣಮಿಸುವುದೆಂದು ಹೇಳುವುದು ದು:ಸಾಧ್ಯ. ಈ ಸಮ್ಮೇಳನದ ಪರಿಣಾಮ ಅಷ್ಟೇನೂ ಪ್ರಯೋಜನಕಾರಿಯೆನಿಸುವಂತೆ ತೋರುವುದಿಲ್ಲ; ಕೇವಲ ವಾಗ್ಬಾಣ ವಿನಿಮಯದಲ್ಲೇ ಮುಕ್ತಾಯವಾದೀತೆನ್ನಬಹುದು.

ದ. ಆಫ್ರಿಕದಲ್ಲಿ ನಾಝೀ ಪದ್ಧತಿ

ದ. ಆಫ್ರಿಕ ಒಕ್ಕೂಟದ ಪಾರ್ಲಿಮೆಂಟಿನ ಮುಂದಿನ ಸಭೆಯಲ್ಲಿ ‘ಔದ್ಯೋಗಿಕ ಸೌಹಾರ್ದ ಗೊತ್ತುವಳಿ’ಯನ್ನು ಚರ್ಚೆಗೆ ತೆಗೆದುಕೊಳ್ಳುವುದಾಗಿ ತಿಳಿಯುತ್ತದೆ. ಆ ಗೊತ್ತುವಳಿಯ ಮುಖ್ಯ ಭಾಗಗಳು ಇಂತಿವೆ:

೧) ಯುರೋಪಿಯನ್ನನಿರಲಿ, ಕರ್ಮನಿರಲಿ, ಭಾರತೀಯನಿರಲಿ, ಯಾರೇ ಇರಲಿ— ಅವನು ಆಫ್ರಿಕನ್ನನಲ್ಲವಾದರೆ ಆಫ್ರಿಕನ್ ಟ್ರೇಡ್ ಯೂನಿಯನ್ನಿಗೆ ಸೇರಲಾರನು, ಅದನ್ನು ಸಂಘಟಿಸಲಾರನು.

ಸರಕಾರದಿಂದ ಅಧಿಕೃತವಾಗದ ಯಾವನೂ ಆಫ್ರಿಕನ್ ಟ್ರೇಡ್ ಯೂನಿಯನ್ನೊಂದನ್ನು ಸಂಘಟಿಸಲಾರನು

೨) ಸರಕಾರದ ಅಪ್ಪಣೆ ಪಡೆದಲ್ಲದೆ ಯಾವನೂ ಆಫ್ರಿಕನ್ ಟ್ರೇಡ್ ಯೂನಿಯನ್ನಿನಲ್ಲಿ ಅಧಿಕಾರಿಯಾಗಿ ಕೆಲಸ ಮಾಡಲಾರನು. (ಆಫ್ರಿಕದ ಗಣಿ ಕೆಲಸಗಾರರ ಯೂನಿಯನ್ನನ್ನು ಬಹಿಷ್ಕರಿಸಲಾಗಿದೆ.)

೪) ಯಾವ ಆಫ್ರಿಕನ್ ಟ್ರೇಡ್ ಯೂನಿಯನ್ನೂ ಮುಷ್ಕರ ಹೂಡಲಾರದು.

೫) ಕೂಲಿಯ ದರ ಮತ್ತು ಕೇಳಿಕೆಗಳನ್ನು ಕೇಂದ್ರ ಮಧ್ಯಸ್ಥ ಸಮಿತಿಯೊಂದು ತೀರ್ಮಾನಿಸುವುದು.

೬) ಈ ಸಮಿತಿಯನ್ನು ಸರಕಾರವೇ ನಿಯಮಿಸುವುದು; ಮತ್ತು ಅದರಲ್ಲಿ ಸರಕಾರಿ ಅಧಿಕಾರಿಗಳು ಮತ್ತು ಕೂಲಿಕಾರ ಪ್ರತಿನಿಧಿಗಳು ಮಾತ್ರ ಇರತಕ್ಕದ್ದು. (ಸಮಿತಿಯು ಸಂಪೂರ್ಣವಾಗಿ ಶುಕ್ಲ ವರ್ಣರದ್ದಾಗಿರುವುದು.)

೭) ಈ ಕಾಯದೆಯ ಪ್ರಕಾರ ರಿಜಿಸ್ಟರಾಗದೆ ಕೆಲಸ ಮಾಡುವ ಎಲ್ಲ ಆಫ್ರಿಕನ್ ಯೂನಿಯನ್ನುಗಳೂ ಕಾಯದೆಗೆ ವಿರುದ್ಧವೆನಿಸಿ ಶಿಕ್ಷಾರ್ಹವಾಗುವುವು.

ಈ ಗೊತ್ತುವಳಿಯನ್ನು ಕಂಡು ಟ್ರೇಡ್ ಯೂನಿಯನ್ ಮತ್ತು ಇತರ ಕೂಲಿಕಾರ ವರ್ಗಗಳಲ್ಲಿ ಗಲಿಬಿಲಿಯುಂಟಾಗಿದೆ. ಏಕೆಂದರೆ ಇದರ ಮುಖ್ಯ ಧ್ಯೇಯವು ಹಿಂದೀಯ ಮತ್ತು ಆಫ್ರಿಕ ಕೂಲಿಕಾರರನ್ನು ನಿಂಗ್ರಹಿಸುವದೇ ಆಗಿದೆ. ಔದ್ಯೋಗಿಕ ಸೌಹಾರ್ದ ಕಾಯಿದೆಯನ್ನು ಯುದ್ಧಕಾಲದ ವಿಶೇಷ ಕಾಯಿದೆಯಂತೆ [illegible] ಆಫ್ರಿಕನ್ ಟ್ರೇಡ್ ಯೂನಿಯನ್ನುಗಳು ಕಿಕ್ಕಿರಿದು ಎಲ್ಲೆ ಸಿಕ್ಕಿಕೊಂಡಿವೆ. ಐರೋಪ್ಯ, ಕರಿಯ, ಆಫ್ರಿಕೇತರ ಮತ್ತು ಹಿಂದೀ ಕೆಲಸಗಾರರನ್ನು ಈ ಗೊತ್ತುವಳಿಯು ನ್ಯಾಯ್ತಿಯ ಹೊರಗಿಡಲಾಗಿದೆ.

ಈ ಕಾಯಿದೆ ಮನ್ನಣೆಯ ಕೊನೆಯಾದೊಡನೆ ಸರಕಾರ ನಡೆಯು ಮತ್ತು ಸಂಧಾನ ಮುರಿದರೆ ಮುಷ್ಕರ ಹೂಡಲು ಆಫ್ರಿಕನ್ ಟ್ರೇಡ್ ಯೂನಿಯನ್ನುಗಳಿಗೆ ಅವಕಾಶವಿಲ್ಲದಾಗಿ ಅವರು ಕೆಲಸ [illegible] ಇದು ಕೇವಲ ಆಫ್ರಿಕನ್ನರಿಗೆ ಅನ್ಯಾಯಕರ ಕಾಯಿದೆಯಾದರೂ ಇದರ [illegible]

ಮೈಲುಗಳು
ಏಕರ
ಹೈಫಾ
ಗ್ಯಾಲಿಲಿ ಸಮುದ್ರ
ಟೇಲ ಅವಿವ
ಜಾಫಾ
ಜೆರುಸಲೇಮ
ಗಾಝಾ
ಮೃತ ಸಮುದ್ರ
ಪಾಲಿಸ್ತಾನ
ಎಲ್ ಹೆಬರ
ಅರಬ
ಯೆಹೂದ್ಯ

[illegible] ಬ್ರಿಟನ್ ಯಹೂದ್ಯರ ... ಮುಂದೆ ಬಂದಿರುವರೆಂದು ... ಅವರು ಹೇಳಿದರು ... [illegible]

ಅಮೇರಿಕನ್ನರು ... ಭಾರತ ... ಆಂಗ್ಲೋ-ಅಮೇರಿಕನ್ ... ಅವರ ಧ್ಯೇಯವು ... ಅದಕ್ಕೆ ಬುದ್ಧಿ ಬರದೆಂದು ತೋರುತ್ತದೆ. [illegible]

ಭಾರತ ಜರ್ಮನಿಗಳ ವ್ಯಾಪಾರ ಸಂಬಂಧ

ಭಾರತೀಯ ವ್ಯಾಪಾರಿಗಳು ಜರ್ಮನಿಯ ... ಸಂಬಂಧ ಬೆಳೆಸಿರುವರೆಂದೂ ಉತ್ತಮ ಪತ್ರಗಳಲ್ಲಿ ... ರೇಡಿಯೋ, ಬೆಲೆಯ ವೈಜ್ಞಾನಿಕೋಪಕರಣಗಳು, ರಾಸಾಯನಗಳು, ಛಾಯಾಯಂತ್ರ, ಒಕ್ಕಲುತನದ ಸಾಧನಗಳು, ಮೆಡಿಕಲ್ ಯಂತ್ರ ಸಾಮಗ್ರಿಗಳು ಮುಂತಾದವನ್ನು ... ಭಾರತಕ್ಕೆ ನಿರ್ಯಾತ ಮಾಡುವರೆಂದೂ ತಿಳಿಯುತ್ತದೆ.

ಈ ಒಡಂಬಡಿಕೆಯನ್ನು ಆಂಗ್ಲೋ-ಅಮೇರಿಕನ್ ಆಯಾತ ನಿರ್ಯಾತ ಸಂಸ್ಥೆಯ ... ರ ಸಾಧಿಸಲಾಯಿತು.

ಹಿಂದೀ ಸೈನ್ಯ ಶಿಷ್ಟಮಂಡಲದ ಆರ್ಥಿಕ ಸಲಹೆಗಾರರಾದ ಶ್ರೀ ಕೆ. ವಿ. ... ಅವರ ಹೇಳಿಕೆಯಿಂದ ಜರ್ಮನ್ ವ್ಯಾಪಾರಿಗಳು ಎಲ್ಲೆಡೆಯಲ್ಲೂ ಭಾರತದ ಸಕ್ಕರೆ ಮತ್ತು ... ವ್ಯಾಪಾರದ ಸ್ಥಿತಿಗತಿಗಳನ್ನು ವಿಚಾರಿಸುತ್ತಿರುವುದಲ್ಲದೆ, ಹತ್ತಿ, ಚರ್ಮ, ಬಂಗಾರ, ... ಮೊದಲಾದ ಸರಕುಗಳನ್ನು ಭಾರತದಿಂದ ... ಸಲು ಉತ್ಸುಕರಾಗಿರುವರೆಂದು ತಿಳಿದು ಬರುತ್ತದೆ. ಈ ವ್ಯಾಪಾರವು ಸದ್ಯಕ್ಕೆ ಆಂಗ್ಲೋ-ಅಮೇರಿಕನ ಸಂಸ್ಥೆಯ ಮೂಲಕ ನಡೆದಿದೆ.

ಯುದ್ಧ ಪೂರ್ವದಲ್ಲಿ ಭಾರತಕ್ಕೆ ... ಲಕ್ಷ ರೂ. ಬೆಲೆಬಾಳುವ ಸರಕುಗಳು ಜರ್ಮನಿಯಿಂದ ಪ್ರತಿವರ್ಷ ಬರುತ್ತಿದ್ದವು ಮತ್ತು ಭಾರತದಿಂದ ... ಲಕ್ಷ ರೂ. ... ಸರಕುಗಳು ಜರ್ಮನಿಗೆ ಹೋಗುತ್ತಿದ್ದವು. ಪಾಕಿಸ್ತಾನದಿಂದ ಕೇವಲ ... ವ್ಯಾಪಾರಿಗಳು ಜರ್ಮನಿಗೆ ಹೋಗಿರುವರೆಂದೂ ಪಾಕಿಸ್ತಾನ ಸರಕಾರವು ಜರ್ಮನಿಯಲ್ಲಿ ಇನ್ನೂ ತನ್ನ ಕಚೇರಿಯನ್ನು ತೆರೆದಿಲ್ಲವೆಂದೂ ತಿಳಿದು ಬರುತ್ತದೆ.

ನಾಡಿಗ—ವ್ಯಾಲೇಸರ ಭೆಟ್ಟಿ

ಕಳೆದ ನವೆಂಬರ ೯ರಲ್ಲಿ, ವೃತ್ತಪತ್ರ ವ್ಯವಸಾಯವನ್ನು ಅಭ್ಯಸಿಸಲು ಹೋಗಿರುವ ... ಶ್ರೀ ನಾಡಿಗ ಕೃಷ್ಣಮೂರ್ತಿಗಳು ಸೆಂಟ್ ಲೂಯಿಸ್ ಪಟ್ಟಣದಲ್ಲಿ ಅಮೇರಿಕದ ಹಿಂದಿನ ಉಪಾಧ್ಯಕ್ಷರಾದ ಶ್ರೀ ಹೆನ್ರಿ ವ್ಯಾಲೇಸರನ್ನು ಭೆಟ್ಟಿಯಾದರು. ಆ ಭೆಟ್ಟಿಯಲ್ಲಿ ವ್ಯಾಲೇಸರಿಗೆ ಗಾಂಧಿಯವರ ಬಗ್ಗೆ ಗೌರವವಿದೆಯೆಂದೂ “ಅವರು ಪ್ರಪಂಚದ ಮಹಾಪುರುಷರಲ್ಲೊಬ್ಬರೆಂ” ದು ಅವರು ತಿಳಿದಿರುವರೆಂದೂ ತಿಳಿದು ಬಂದಿತು. ಅಹಿಂಸೆಯನ್ನು ಯುದ್ಧವನ್ನು ನಿಲ್ಲಿಸಲು ಪರಿಣಾಮಕಾರಿಯಾಗಿ ಉಪಯೋಗಿಸಲು ವ್ಯಾಲೇಸರು ಒಪ್ಪರಿಲ್ಲ. ಭಾರತ ಮತ್ತು ಪಾಕಿಸ್ತಾನಗಳ ಬಗ್ಗೆ ಅವರ ಬುದ್ಧಿಗಳು ಹೆಚ್ಚಾಗಿ ... ನಿರಾಧಾರವಾದವುಗಳೆಂದು ಒಂದು ಪ್ರಶ್ನೆಗೆ ಉತ್ತರವಾಗಿ ಅವರು ಹೇಳಿದರು.

ಶ್ರೀ ನಾಡಿಗ ಕೃಷ್ಣಮೂರ್ತಿಗಳು ಈಚೆ ... ಅಧ್ಯಕ್ಷ ಟ್ರೂಮನ್ನರನ್ನು ವಾಶಿಂಗ್ಟನ್ ವೈಟ್‌ಹೌಸಿನಲ್ಲಿ ಭೆಟ್ಟಿಯಾಗಿ ... ಪ್ರವಾಸ ... ರೆಂದು ತಿಳಿಯುತ್ತದೆ.

ಅಖಿಲ ಭಾರತ ಮುಸ್ಲಿಮ್ ಲೀಗಿನ ... ಪಾಕಿಸ್ತಾನಕ್ಕೊಂದು ಹಿಂದುಸ್ಥಾನಕ್ಕೊಂದು ಹೀಗೆ ಎರಡು ಮುಸ್ಲಿಮ್ ಲೀಗ ... [illegible] ... ಭಾರತಕ್ಕೆ ... [illegible]

ವಿವಿಧ ಪ್ರಪಂಚ

ಬ್ರಹ್ಮಚಾರಿಯ ದೂರು

ಪೂನಾ ನಗರದಲ್ಲಿ ಹೊಸದಾಗಿ ಹೋಗಿ ವಾಸಿಸಲು ಪ್ರಯತ್ನಿಸುವ ಬ್ರಹ್ಮಚಾರಿಗಳಿಗೆ ಒದಗುವ ತೊಂದರೆ ಬಹಳ ಸ್ವಾರಸ್ಯವಾದದ್ದು. ಬಾಡಿಗೆ ಮನೆಗಳ ಬಗ್ಗೆ ವಿಚಾರಿಸುತ್ತ ಹೋದಲ್ಲಿ ಒಡೆಯರು ಕೇಳುತ್ತಾರೆ— ಏನ್ರೀ, ನೀವು ಸಂಸಾರ ತಂದಿದ್ದೀರಾ? ಎಂದು. ಹೀಗೆ ಪ್ರಶ್ನಿಸುವವರ ಅರ್ಥ ಹೀಗೆ: ಬಂದವನು ಬ್ರಹ್ಮಚಾರಿಯಿದ್ದರೆ ಹೇಗೂ 'ಕುಟುಂಬ'ವೇ ಇಲ್ಲವೆನ್ನುತ್ತಾನೆ. ಅವನು ಗಂಡನಿದ್ದು ತನ್ನ ಹೆಂಡತಿಯನ್ನು ಕರೆತರದಿದ್ದರೆ ಇಲ್ಲವೆನ್ನುತ್ತಾನೆ. ಮದುವೆಯಾದವನಿರಲಿ, ಆಗದವನಿರಲಿ—ತನ್ನವಳಾದ ಒಬ್ಬಳನ್ನು ಕರೆತರದವನಿಗೆ ಮನೆ ಬಾಡಿಗೆಗೆ ದೊರಕಲಾರದು. ಕಾರಣವೇನೆಂದರೆ, ಅಂಥವರು ಅಪಾಯಕಾರಿಗಳು!

Happy Dog - ಉಂಡಾಡಿಭಟ್ಟನೆನಿಸಿಕೊಂಡ ಬ್ರಹ್ಮಚಾರಿಯ ಬಗ್ಗೆ ವೆಲ್ಬ್ರೂಕ್ ಪೆಗ್ಲರರು ಹಾಸ್ಯಮಾಡುತ್ತಾರೆ: Free and Footloose Bachelor ಸ್ವಚ್ಛಂದ ಬ್ರಹ್ಮಚಾರಿಯನ್ನು ಕಂಡರೆ ಸ್ವಲ್ಪ ಎಚ್ಚರಿಕೆಯಿಂದಿರಬೇಕು. ತನ್ನ ಉದರಭರಣ ಮಾಡಿಕೊಂಡರೆ ಸರಿ, ಮತ್ತೇನವನಿಗೆ ಖರ್ಚು? ಸೋಚೀಲಾಲ!

ಅಂತೂ ಬ್ರಹ್ಮಚಾರಿಗೆ ಸುಖವಿಲ್ಲ. ಹೊರಗೆ ಹೋದರೆ ರೂಮಿಲ್ಲ; (ಮನೆಯಲ್ಲಿ) ಒಳಗೆ ಕುಳಿತರೆ ಅನ್ನವಿಲ್ಲ!

ನಾಳಿನ ಮನುಷ್ಯ

ಡಾರ್ವಿನ್ನನ ವಿವರ್ತವಾದವಿಂದು ಸುಪ್ರಸಿದ್ಧವಾಗಿದೆ. ನಾವೆಲ್ಲರೂ ಮೊದಲು ವಾನರರಿದ್ದು ಅನಂತರ ನರರಾದೆವೆಂದು ಒಪ್ಪಿಕೊಂಡು ಬಿಟ್ಟಿದ್ದೇವೆ. ಮೊದಲು ಜಲಚರ, ಅನಂತರ ಜಲಸ್ಥಲಚರ, ಆ ಮೇಲೆ ಸ್ಥಲಚರ ಮತ್ತು ಆಕಾಶಚರ ಪ್ರಾಣಿಗಳು ವಿವರ್ತಿಸುತ್ತ ಬೆಳೆದುಬಂದವೆಂದು ಇಂದು ವಿಜ್ಞಾನಿಗಳ ನಂಬಿಗೆ. ಜಲಚರಸ್ಥಿತಿಯಿಂದ ಮನುಷ್ಯತ್ವಕ್ಕೆ ಬರಬೇಕಾದರೆ ಅನೇಕ ಕೋಟಿ ವರ್ಷಗಳು ಸಂದವಂತೆ. ಬೆನ್ನೆಲುಬುಳ್ಳ ಪ್ರಾಣಿಗಳು ಐನೂರು ಕೋಟಿ ವರ್ಷಗಳ ವಿವರ್ತದಿಂದ ರೂಪಿಸಲ್ಪಟ್ಟವೆಂದೂ ಮನುಷ್ಯನು ಮನುಷ್ಯನಾಗಲು ೬೦ ಲಕ್ಷ ವರ್ಷಗಳು ತಾಗಿದವೆಂದೂ ಊಹಿಸಲಾಗಿದೆ.

ಈಗ ಜಗತ್ತಿನಲ್ಲಿ ನಾನಾ ಕುಲಕ್ಕೆ ಸೇರಿದ ಸುಮಾರು ೨೦೦ ಕೋಟಿ ಮನುಷ್ಯರಿದ್ದಾರೆ. ಅವರೆಲ್ಲರೂ ಮುಂದೆಯೂ ಹೀಗೇ ಇರುವರೆ? ಮತ್ತೆ ವಿವರ್ತಕ್ಕೊಳಗಾಗಿ ರೂಪಾಂತರ ಹೊಂದುವರೇ? ಎಂಬುದು ಸಹಜವಾಗಿ ಏಳುವ ಪ್ರಶ್ನೆ. ಈ ಪ್ರಶ್ನೆಗೆ ಉತ್ತರ ಕೊಡಲು ಅನೇಕ ಧೀಮಂತರಾದ ಪ್ರಕೃತಿ ಶಾಸ್ತ್ರಕಾರರು ಪ್ರಯತ್ನಿಸಿಟ್ಟಿದ್ದಾರೆ. ಅಂಥವರಲ್ಲಿ ಡಾ. ಶಾಪಿರೋ ಎಂಬವರು ಪ್ರಮುಖರು. ಅವರ ಊಹೆಯ ಪ್ರಕಾರ ನಾಳಿನ ಮನುಷ್ಯನು ಇನ್ನೂ ಎತ್ತರವಾಗಿ ಸಮ ತೋಲದ ನಿಲುವಿಗೆ ಭಂಗ ತರುವ ಭಯವಿದೆ. ಅಮೇರಿಕದ ಪ್ರಕೃತಿ ಶಾಸ್ತ್ರಜ್ಞ ವಿಲಿಯಂ ಹಾವೆಲ್ಸರು, ನಾವು ನಾಳೆ ಇನ್ನೂ ದೃಢಕಾಯರಾಗಿ ಹೆಚ್ಚು ಹೆಚ್ಚಾಗಿ ತಿನ್ನುವವರಾಗುತ್ತೇವೆನ್ನುತ್ತಾರೆ. ತಲೆ ಬುರುಡೆಯು ಮತ್ತೂ ಗುಂಡಾಗಿಯೂ ಮಿದುಳು ಗಾತ್ರದಲ್ಲಿ ದೊಡ್ಡದಾಗಿಯೂ ಪರಿವರ್ತಿಸಬಹುದು. ಅಲ್ಲದೆ ಶರೀರದ ತಲೆ ಅದಕ್ಕನುಸಾರವಾಗಿ ದಿನೇ ದಿನೇ ಬೋಳಾಗುತ್ತ ಹೋಗುವುದೆಂದು ಊಹಿಸಲಾಗಿದೆ. ಇದಕ್ಕೆ ಬಹುಶಃ

:Baldness is a sign of wisdom ಬೊಕ್ಕತಲೆ ಬುದ್ಧಿವಂತಿಕೆಯ ಲಕ್ಷಣ ಎಂಬ ಗಾದೆಯೇ ಆಧಾರವಿರಬಹುದು. ಬೆನ್ನೆಲುಬಿನ ಮೇಲು ಭಾಗವು ಗಿಡ್ಡ ಮತ್ತು ದಪ್ಪನಾಗುವುದು. ಮುಖ ಚಿಕ್ಕದಾಗುವುದು. ಗದ್ದ ಚೂಪಾಗಿ ಮೂಗು ಮೊನಚಾಗಿ ಬದಲಾವಣೆ ಹೊಂದಬಹುದು. ಹಲ್ಲುಗಳ ಸಂಖ್ಯೆ ಕಡಿಮೆಯಾಗಬಹುದು. ಇದರಿಂದ ಬಹಳ ಅನುಕೂಲವೇ ಆಗುವುದಂತೆ! ಕಾಲಿನ ಕಿರಿ ಬೆರಳುಗಳು ಕ್ರಮೇಣ ಲೋಪವಾಗಿ ನಾಲ್ಕೇ ಬೆರಳುಗಳು ಒಂದೊಂದು ಪಾದದಲ್ಲಿ ಉಳಿಯಬಹುದು. ಏಕೆಂದರೆ ಅವು ಆಗಲೇ ನಿರುಪಯೋಗಿಗಳೆನಿಸಿವೆ. ಹೀಗೆ ನಿರುಪಯುಕ್ತ ಅಂಗಗಳು ಲೋಪವಾಗಿ ಮನುಷ್ಯನು ಮತ್ತೊಂದು ಅವತಾರ ತಾಳಿ ಇಂದಿನ ನಾವು ಅಳಿದ ಹಳೆಯ ಕಾಲದ ಮಾದರಿಗಳೆಂದು ಮುಂದಿನ ಇತಿಹಾಸದಲ್ಲಿ ನಮೂದಿಸಲ್ಪಡಬಹುದು! ಅಂದರೆ ಇಂದಿನ ನಮ್ಮಲ್ಲಿಯ ಒಬ್ಬನ ಅಸ್ಥಿಪಂಜರ ಅಂದು ಉಳಿದರೆ ಅದನ್ನು ಆ ಮನುಷ್ಯರು ಪ್ರಾಣಿಪ್ರದರ್ಶನಾಲಯದಲ್ಲಿಟ್ಟು ೨ ಆಣೆ ತಿಕೀಟಿನ ಮೂಲಕ ಜಗತ್ತಿನ ಜನರಿಗೆ ತೋರಿಸಬಹುದಲ್ಲವೆ? ಇದೆಂತಹ ವ್ಯಾಪಾರ! ವಾನರಬಾಲ ಕಳೆದುಕೊಂಡು ನರನಾದ, ನರ ಹೋಗಿ ಇನ್ನು ಬರಿಯ 'ರ' ಆಗುವನೆ?

ಐಚ್ಛಿಕ ವಂಧ್ಯಾವ್ರತ

ಜಗತ್ತಿನಲ್ಲಿ—ಅದರಲ್ಲೂ ಭಾರತ ಮತ್ತು ಚೀನಗಳಲ್ಲಿ—ಜನಸಂಖ್ಯೆ ಬಹಳ ಜಾಸ್ತಿಯಾಗಿರುವುದರಿಂದ ಅಲ್ಲಿಯ ಪ್ರಜೆಗಳು ಐಚ್ಛಿಕ ವಂಧ್ಯಾವ್ರತವನ್ನು ಕೈಗೊಳ್ಳಬೇಕೆಂದು ಸಮಾಜ ಶಾಸ್ತ್ರಜ್ಞರಾದ ಬರ್ಕ್ ಮತ್ತು ಪೆಂಡೆಲ್ಲರು ಹೇಳಿದ್ದಾರೆ.

ಸಂತತಿ ನಿರೋಧಕ ಉಪಕರಣದ ಅಭಾವದಲ್ಲಿ ಈ ಐಚ್ಛಿಕ ಸಂತತಿ ಪ್ರತಿಬಂಧನ ಕ್ರಮವೇ ಒಳ್ಳೆಯದೆಂದೂ ಸಂ. ರಾ. ಸಂಘವು ಅದರ ಬಗ್ಗೆ ಕಾಯದೆಗಳನ್ನು ಪಾಸು ಮಾಡುವಂತೆ ಸದಸ್ಯ ರಾಷ್ಟ್ರಗಳಿಗೆ ಆದೇಶ ಮಾಡಬೇಕೆಂದೂ ಮೇಲೆ ಹೇಳಿದ ತಜ್ಞರು ಅಭಿಪ್ರಾಯಪಡುತ್ತಾರೆ. ದೈಹಿಕ ಅಥವಾ ಮಾನಸಿಕ ನ್ಯೂನತೆಗಳುಳ್ಳ ವ್ಯಕ್ತಿಗಳೂ ಬೇಕಾದಷ್ಟು ಮಕ್ಕಳಿದ್ದು ಮತ್ತೆ ಬೇಡಾದವರೂ ಈ ಕ್ರಮವನ್ನು ಅನುಸರಿಸುವುದು ಒಳ್ಳೆಯದೆಂದು ಹೇಳಲಾಗಿದೆ.

ಇಲಿಯ ಮಹತ್ವ

ಹೆಂಡತಿಗೆ ಹೆದರುವ ಬಾಯಿಬಡಿಕನನ್ನು— ಹೊರಗೆ ಹುಲಿ, ಒಳಗೆ ಇಲಿ— ಎಂದು ಹಾಸ್ಯ ಮಾಡುತ್ತಾರೆ. ಅಂಜಿಕೆ, ಹೇಡಿತನ, ಸದ್ದಿಲ್ಲದೆ ಸಂಚುಮಾಡುವ ಬುದ್ಧಿ ಇವುಗಳೆಲ್ಲ ಇಲಿಯಂತಹ ಮನುಷ್ಯನಲ್ಲಿವೆಯೆಂದು ಜನರು ನಂಬಿದ್ದಾರೆ.

ಇಂತಹ ಬಿಲ ತೋಡುವ ಇಲಿಗೆ ಮಹತ್ವವಿದೆಯೆಂದರೆ ಬಹಳ ಜನ ಆಶ್ಚರ್ಯಪಡಬಹುದು. ಪುರಾಣ ತೆರೆದರೆ, ಅದು ಗಣೇಶವಾಹನ; ಚೌತಿಯಲ್ಲಿ ಗಣೇಶನೊಡನೆ ಪೂಜೆ ಮಾಡಿಸಿಕೊಳ್ಳುವುದು; ಅವನಿಗಾಗಿ ತಯಾರಿಸಿ, ಮಕ್ಕಳಿಗಾಗಿ ತಿನ್ನಲಿಟ್ಟಿದ್ದ ತಿಂಡಿಗಳನ್ನೆಲ್ಲ ಗುಪ್ತವಾಗಿ ಗಣೇಶ ಲೋಕಕ್ಕೊಯ್ಯುತ್ತದೆ; ದೇವರ ನೈವೇದ್ಯವನ್ನು ದೇವರಿಗೆ ಮುಟ್ಟಿಸಿ ಮನುಷ್ಯನ ಪ್ರಾಮಾಣಿಕತೆಗೆ ಸಾಕ್ಷಿ ಹೇಳುತ್ತದೆ!

ಕಂಟ್ರೋಲು ಕಾಲದಲ್ಲಿ ನರರೂಪದಲ್ಲಿ ಅವತರಿಸಿ ಕಳ್ಳಪೇಟೆಯಲ್ಲಿ ಇಲಿಯು ಕದ್ದೊಯ್ಯುವುದನ್ನು ಕಾಣದವರು ವಿರಳ. ಕಳ್ಳರು ಕನ್ನ ಕೊರೆಯುವುದನ್ನು ಇದರಿಂದ ಕಲಿತಂದಿನಿಂದ ಇಂದಿನವರೆಗೆ ಅನೇಕ ಜಾತಿಯ ಕಳ್ಳರಿಗೆ ಇಲಿಯೇ ಕುಲಗುರುವಾಗಿದೆಯೆಂದರೆ ತಪ್ಪಾಗದು. ಎಂದ ಮೇಲೆ ಇದರ ಐತಿಹಾಸಿಕ ಮಹತ್ವ ಕಡಿಮೆಯದೇ?

ಇದರ ಮೇಲೆ ಅಮೇರಿಕದ ವಿಜ್ಞಾನಿಗಳಿಂದು —ಇಲಿ ಇಲಿ, ಇಲಿ ಬೇಕು— ಎಂದು ದೇಶದಾದ್ಯಂತ ಸಂಶೋಧನ ನಡೆಸುತ್ತಿದ್ದಾರೆಂದು ತಿಳಿಯುತ್ತದೆ. ಅವರ ಜೀವವಿಜ್ಞಾನದ ಪ್ರಯೋಗಗಳನ್ನು ನಡೆಸಲು ಇಲಿ ಇಲ್ಲದೆ ಸಾಧ್ಯವಿಲ್ಲವಾಗಿದೆ. ಆದುದರಿಂದ ಕಳೆದ ನವೆಂಬರಿನ ಪ್ರಥಮ ವಾರದಲ್ಲಿ ಅಮೇರಿಕದ ಸಂಯುಕ್ತ ಸಂಸ್ಥಾನದಲ್ಲಿ ಕೌಡು ಬಣ್ಣದ, ಬಿಳಿಯ, ಹಳದಿ, ಕೂದಲಿಲ್ಲದ ಮತ್ತು ವಕ್ರಪುಚ್ಛವುಳ್ಳ ಇಲಿಗಳಿಗಾಗಿ ಎಲ್ಲೆಲ್ಲೂ ಹುಡುಕಾಟ ನಡೆಯಿತೆಂದು ತಿಳಿದುಬರುತ್ತದೆ. ಏಕೆಂದರೆ ಜಾತಿಯ ಇಲಿಯೆಂದರೆ ಸಂಶೋಧಕನಿಗೆ ಅಚ್ಚುಕಟ್ಟಾದ ಒಂದು ಪ್ರಯೋಗ ಸಾಧನ. ನಿರ್ದಿಷ್ಟ ಸನ್ನಿವೇಶದಲ್ಲಿ ಆ ಇಲಿಯಲ್ಲದೆ ಇನ್ನಾವುದೂ ಅಪೇಕ್ಷಿತ ರೀತಿಯಲ್ಲಿ ಪ್ರತಿಕ್ರಿಯೆಯನ್ನು ತೋರಲಾರದು. ಆದರಿಂದ ಅಕ್ಟೋಬರದಲ್ಲಿ ಕಾಳ್ಗಿಚ್ಚು ಹೊತ್ತಿ ಪ್ರಸಿದ್ಧವಾದ ರೊಸ್ಕೋ ಬಿ. ಜಾಕ್ಸನ್ ಪ್ರಯೋಗ ಶಾಲೆಯಲ್ಲಿಯ ೩೦ ಜಾತಿಯ ೯೦ ಸಾವಿರ ಇಲಿಗಳಲ್ಲಿ ಕೇವಲ ೫೫ ಬದುಕಿ ಉಳಿದುದು ತಾಳಲಾರದ ನಷ್ಟವಾಗಿ ಪರಿಣಮಿಸಿತೆಂದು ಹೇಳಲಾಗಿದೆ. ಕಳೆದ ವರ್ಷ ಸಂಸ್ಥಾನದ ಮತ್ತು ಪರದೇಶದ ಪ್ರಯೋಗ ಶಾಲೆಗಳಿಗೆ ಮೇಲಿನ ಪ್ರಯೋಗ ಶಾಲೆಯು ೩॥ ಲಕ್ಷ ಜಾತಿಯ ಇಲಿಗಳನ್ನು ಕಳುಹಿತ್ತು. ಈಗ ನಷ್ಟ ಇಲಿಗಳ ಭರ್ತಿಗಾಗಿ ಶಾಲೆ ಕಾಲೇಜು ಮುಂತಾದೆಡೆಯಲ್ಲಿರುವ ವಿಶಿಷ್ಟ ಜಾತಿಯ ಇಲಿಗಳನ್ನು ಸಂಬಂಧಿಸಿದ ಅಧಿಕಾರಿಗಳು ಮೇಲಿನ ಪ್ರಯೋಗ ಶಾಲೆಗೆ ಕಳುಹಿ ಕೊಟ್ಟು ಉಪಕರಿಸಬೇಕೆಂದು ಬಿನ್ನವಿಸಿಕೊಂಡಿದ್ದಾರೆ. ಎಂದ ಮೇಲೆ ಇಲಿಯ ಮಹತ್ವ ವೈಜ್ಞಾನಿಕವಾಗಿ ಸಿದ್ಧವಾದಂತಾಯಿತಲ್ಲವೆ? ಇನ್ನು ಮೇಲೆ ಇಲಿಯೆಂದರೊಂದು ಕ್ಷುದ್ರ, ಅಪ್ರಯೋಜಕ ಇಲ್ಲವೆ ನಷ್ಟ ಕೊಡುವ ಜಂತುವೆಂದು ತಿಳಿದುಕೊಳ್ಳುವುದು ತಪ್ಪೆಂದು ತಾರ್ಕಿಕರು ತಿಳಿದುಕೊಳ್ಳಬೇಕು!

ಅತಿಮಧುರ

ಇಂದು ಸಕ್ಕರೆಯ ಅಭಾವ ಇಡೀ ಜಗತ್ತನ್ನೇ ವ್ಯಾಪಿಸಿದೆ. ಇಂತಹ ದುಷ್ಕಾಲದಲ್ಲಿ ಕಬ್ಬಿನ ಸಕ್ಕರೆಗಿಂತ ೪ ಸಾವಿರ ಪಾಲು ಮಧುರತಮವಾದ ಒಂದು ವಸ್ತುವನ್ನು ಕಂಡುಹಿಡಿಯಲಾಗಿದೆಯೆಂಬುದನ್ನು ಕೇಳಿದರೆ ಮಧುರಪ್ರಿಯರಿಗೆ ಸ್ವರ್ಗಕ್ಕೆ ಮೂರೇ ಅಂಗುಲ ಉಳಿಯುವಂತಾಗದೆ?

ಯುದ್ಧ ಕಾಲದಲ್ಲಿ ನೆದರ್‌ಲೆಂಡಿನ ಪ್ರೊ. ಪೀಟರ್ ಎಡ್ವರ್ಡ್ ವರ್ಕಡೆಯವರು ಬೆಂಜೀನ್ ಎಂಬ ದ್ರವ್ಯದಿಂದ ಈ 'ಅತಿಮಧುರ'ವನ್ನು ತಯಾರಿಸಿದರು. ಒಂದು ರವೆಯಷ್ಟನ್ನು ಬಾಯಿಗೆ ಹಾಕಿಕೊಂಡರೂ ಇದರ ರುಚಿ ಅರ್ಧ ಗಂಟೆಯವರೆಗೆ ಬಾಯಲ್ಲಿ ಉಳಿಯುವುದಂತೆ.

ಕಲ್ಲಿದ್ದಲಿನ ಡಾಮರಿನಿಂದ ತೆಗೆದ 'ಸ್ಯಾಕರಿನ್' ಎಂಬುದು ಸಕ್ಕರೆಗಿಂತ ೨೦೦ ರಿಂದ ೭೦೦ ಪಟ್ಟು ಸಿಹಿಯಿರುತ್ತದೆ. ಡಲ್ಸೀನ್ ಎಂಬ ಮತ್ತೊಂದು ದ್ರವ್ಯ ೭೦ ರಿಂದ ೨೫೦ ರಷ್ಟು ಮಾತ್ರ ಸಿಹಿಯಿದೆ. ಊಟಕ್ಕೆ ಬಳಸಲು ಈ ಅತಿಮಧುರವನ್ನು ಹಾಲು-ಸಕ್ಕರೆಯೊಡನೆ ಬೆರಸಿದಾಗ ಅದು ಸಕ್ಕರೆಗಿಂತ ೫೦೦ ಪಟ್ಟು ಸಿಹಿಯಾಗಿ ತೋರುವುದು. ಈ "ಮಧುರಾದಪಿ ಮಧುರತರಂ" ಎನಿಸಿದ ವಸ್ತುವು ಶುದ್ಧರೂಪದಲ್ಲಿ ಬಹು ಸುಲಭವಾಗಿ ದೊರಕುತ್ತದೆ ಮತ್ತು ಈ ಮಧುರೀಕರಣ ದ್ರವ್ಯವು ನೀರಿನಲ್ಲಿ ಸ್ವಲ್ಪ ಮಾತ್ರ ಕರಗುವುದಂತೆ. ದೇವತೆಗಳ ಅಮೃತವೆಂದೂ ಇದಕ್ಕೆ ಸರಿದೂಗಲಾರದೆಂದು ಮಾಧುರ್ಯ ಪರೀಕ್ಷಕರು ಅಭಿಪ್ರಾಯಪಟ್ಟರೆ ಸನಾತನಿಗಳಿಗೆ ಕೋಪಬರಬಹುದೆ?

ನೆಗಡಿಗೆ ಮದ್ದೇ ಇಲ್ಲ!

ಒಂದು ಸಲ ನೆಗಡಿಯಾಗಿ ಬಿಟ್ಟರೆ ಬೇರಾವ ಕಾಹಿಲೆಯೂ ತಲೆಹಾಕದೆಂದು ಹಿರಿಯರ ಹೇಳಿಕೆ. ಆದರೆ ನೆಗಡಿ ಹಿಡಿದವರನ್ನು ಮಾತ್ರ, ಅದರಿಂದುಂಟಾಗುವ ವೇದನೆಗಿಂತ ಹೆಚ್ಚಾಗಿ ಬಾಹ್ಯಪರಿಣಾಮಗಳಾದ ಶೀನು ಸಿಂಬಳಗಳ ಹಾವಳಿಯೇ ಸಾಕೋ ಸಾಕೆನಿಸಿಬಿಡುತ್ತದೆ.

ಈ ನೆಗಡಿಯೆಂದರೆ ರೋಗಗಳಲ್ಲಿ ಒಂದು ವಿದೂಷಕರತ್ನ. ಅದರಿಂದಲೇ ತೆನ್ನಾಲ ರಾಮಕೃಷ್ಣ ಚಂಡಿಯನ್ನು ಸಾಕ್ಷಾತ್ಕರಿಸಿಕೊಂಡಾಗ ಅವಳು ಸಾವಿರ ಮುಖಗಳಿಂದ ಶೀನತೊಡಗಿದರೆ ಅವಳಿಗೆಷ್ಟು ವೇದನೆಯಾದೀತೆಂದು ಹೇಳಿ ಅವಳನ್ನು ನಗಿಸಿ ವಿಕಟಕವಿಯಾಗೆಂದು ವರ ಪಡೆದ.

ನೆಗಡಿಗೆ ನಾನಾ ಔಷಧಗಳಿವೆಯೆಂಬುದನ್ನು ಜಾಹೀರಾತುಗಳ ಸಹಸ್ರನಾಮ ಪಠನದಿಂದ ತಿಳಿಯಬಹುದು. ನೆಗಡಿಯ ಚಿಕಿತ್ಸೆಗಾಗಿ ನೂರಕ್ಕೆ ೩೨ ಸಂದರ್ಭಗಳಲ್ಲಿ ಮನೆಗೂ ೧೫ ಸಂದರ್ಭಗಳಲ್ಲಿ ಕಾರ್ಯಾಲಯಕ್ಕೂ ವೈದ್ಯರು ಭೆಟ್ಟಿ ಕೊಡುತ್ತಾರೆಂದು ಡಾ. ರೋಬಾರ್ಟ್ ಎ. ರೀಮನ್ನರ ಲೆಕ್ಕಮಾಡಿ ತೋರಿಸಿದ್ದಾರೆ.

ನೆಗಡಿ ಮತ್ತು ಅದರ ಭ್ರಾತೃರೋಗಗಳು 'ವೈರಸ್' ಎಂಬ ಜೀವಕಣಕ್ಕೆ ರೋಗಾಣು ಕಚ್ಚುವುದರಿಂದುಂಟಾಗುವುವು. ಇದರ ನಿವಾರಣೆಗೆಂದು ಬೆವರು ಹೆಚ್ಚಿಸಲು, ನಂಜು ತೆಗೆಯಲು, ತಲೆಹಗುರ ಮಾಡಲು ನಾನಾ ಔಷಧಗಳನ್ನು ತೆಗೆದುಕೊಳ್ಳುತ್ತಾರೆ; ಗುಳಿಗೆಗಳಿಗಂತೂ ಲೆಕ್ಕಸಂಖ್ಯೆಯಿಲ್ಲ. ಜ್ವರ ಇಳಿದರೆ ಹಲವರು ನೆಗಡಿ ಗುಣವು ಖವಾಯಿತೆಂದು ತಿಳಿಯುತ್ತಾರೆ, ಅದು ತಪ್ಪು. ಕೆಲವುಟ್ಟಿಗೆ ಜ್ವರವಿದ್ದರೆ ನೆಗಡಿಗೊಳ್ಳೆಯದೆ. ಇನ್ನು ಕೆಮ್ಮು ನಿಲ್ಲಿಸಲು ನಾನಾ ಮಿಶ್ರಣಗಳನ್ನು ತೆಗೆದುಕೊಳ್ಳುತ್ತಾರೆ. ಆದರೆ ಇದೂ ತಪ್ಪು. ಬಹಳ ಹೆಚ್ಚಿಲ್ಲದಿದ್ದರೆ ಸಾಮಾನ್ಯ ಕೆಮ್ಮು ದೇಹಕ್ಕೆ ಆರೋಗ್ಯವನ್ನೇ ಉಂಟು ಮಾಡುತ್ತದೆಯೆಂದು ತಜ್ಞರ ಅಭಿಪ್ರಾಯ. ಕೆಲ ಕೆಮ್ಮಿನ ಮದ್ದುಗಳಲ್ಲಿ ನಿದ್ರಾಜನಕ ಪದಾರ್ಥಗಳಿರುತ್ತವೆ. ಅವು ಹಾನಿಕರ. ನೆಗಡಿಯನ್ನು ಗುಣಪಡಿಸಲು ಯಾವ ಬಗೆಯ ಉರಿಮದ್ದೂ ಪ್ರಯೋಜನವಿಲ್ಲ. ವಿಶಿಷ್ಟ 'ಗ್ಯಾಸ್' ಸೇವನೆಯೂ ಹಿತಕರವಲ್ಲ. ಇನ್ನು ವೈರಸ್ಸಿನ ಕಾಹಿಲೆಯನ್ನು ಗುಣಪಡಿಸಲು ಮೈಲಿಮದ್ದು ಚುಚ್ಚುತ್ತಾರೆ; ಇದು ವ್ಯರ್ಥ.

ದೈಹಿಕ ಆರೋಗ್ಯ, ಮನಃಶಾಂತಿ, ಸಾಕಷ್ಟು ಆಹಾರ, ಹಿತಕರ ಹವೆ ಇಷ್ಟಿದ್ದರೆ ನೆಗಡಿ ಹತ್ತಿರ ಸುಳಿಯದು. ಆದರೆ ಶ್ವಾಸಕೋಶಕ್ಕೆ ಸಂಬಂಧಿಸಿದ ರೋಗಗಳು ಧೂಳೀಪಾನ, ಆಯಾಸ, ಒಮ್ಮೆಲೆ ಥಂಡಿ ಬಡಿಯುವುದು, ತೋಯಿಸಿಕೊಳ್ಳುವುದು ಇವುಗಳಿಂದ ಸಂಭವಿಸುವುದುಂಟು. ಅವುಗಳಿಂದ ರಕ್ಷಿಸಿಕೊಳ್ಳಬೇಕು. ಇಲ್ಲವೆ ವಿಶ್ರಾಂತಿಯಿಂದ ಸುಧಾರಿಸಿಕೊಳ್ಳಬೇಕು.

ಇಲ್ಲಿಯ ವರೆಗೆ ವೈಜ್ಞಾನಿಕವಾಗಿ ನೆಗಡಿಯನ್ನು ಗುಣಪಡಿಸುವ ಒಂದು ಮದ್ದನ್ನು ಯಾರೂ ತಯಾರಿಸಿಲ್ಲವೆಂದು ಡಾ. ಎಚ್. ಎ. ರೀಮನ್ನರ ಅಭಿಪ್ರಾಯ. ನೆಗಡಿಯೆಂಬುದಿಂಥ ಗಟ್ಟಿಗ ರೋಗವೆಂದು ಯಾರಿಗಾದರೂ ಗೊತ್ತಿದೆಯೇ? ಅದು ಧನ್ವಂತರಿಗಳ ತಲೆಯನ್ನೇ ಮಂಕುಗೊಳಿಸಿದೆಯೆಂಬುದೀಗ ಸ್ಪಷ್ಟವಾಯಿತು. ಅಬ್ಬಾ ನೆಗಡಿಯೇ!

ಸಂಪಾದಕೀಯ ಟೀಕೆಟಿಪ್ಪಣಿಗಳು

ಕಾಸರಗೋಡಿನ ಸಮ್ಮೇಲನಗಳು

ಇದೇ ೨೮ ನೆಯ ತಾರೀಕಿನಿಂದ ಮೂರು ದಿನ ದಕ್ಷಿಣ ಕನ್ನಡ ಜಿಲ್ಲೆಯ ಕಾಸರಗೋಡಿನಲ್ಲಿ ವಿವಿಧ ಸಮ್ಮೇಲನಗಳು ಕೂಡುತ್ತಿರುವುವು. ಇವುಗಳ ಸಂಬಂಧದ ಪ್ರಕಟನೆ ಇದೇ ಸಂಚಿಕೆಯಲ್ಲಿ ಬೇರೆ ಕಡೆ ಕೊಟ್ಟಿದ್ದೇವೆ. ಈ ಸಲದ ಈ ಸಮ್ಮೇಲನಗಳು ಸ್ವತಂತ್ರ ವಾತಾವರಣದಲ್ಲಿ ಕೂಡುತ್ತಿರುವುದರಿಂದ ವಿಶೇಷ ಮಹತ್ವದ್ದಾಗಿವೆ. ಭಾರತ ಸ್ವತಂತ್ರವಾಗಿದ್ದರೂ ನಮ್ಮ ಕರ್ನಾಟಕ ಇನ್ನೂ ಸ್ವತಂತ್ರ ಪ್ರಾಂತವಾಗದ್ದರಿಂದ ಅದನ್ನು ಸಾಧಿಸಿಕೊಳ್ಳಲು ಕನ್ನಡಿಗರು ಸರ್ವವಿಧ ಪ್ರಯತ್ನಿಸಬೇಕಾಗಿದೆ. ಅದಕ್ಕಾಗಿಯೆ ಮಾನ್ಯ ಎ. ಬಿ. ಶೆಟ್ಟರ ಅಧ್ಯಕ್ಷತೆಯಲ್ಲಿ ಕರ್ನಾಟಕ ಏಕೀಕರಣ ಪರಿಷತ್ತನ್ನು ಕರೆಯಲಾಗಿದೆ. ಭಾರತದ ಮುಖ್ಯ ಮಂತ್ರಿಗಳು ಇತ್ತೀಚೆ ಹಿರಿಯೋಲಗದಲ್ಲಿ ಕೊಟ್ಟ ಉತ್ತರವನ್ನು ಲಕ್ಷಿಸಿ ಕನ್ನಡಿಗರು ಸ್ವತಂತ್ರ ಪ್ರಾಂತರಚನೆಗಾಗಿ ಮುಂದೆ ಯಾವ ಕ್ರಮ ಕೈಕೊಳ್ಳಬೇಕೆಂಬುದನ್ನು ನಿರ್ಧರಿಸಬೇಕಾಗಿದೆ. ಕನ್ನಡ ನಾಡಿನ ಪರಂಪರೆಗೆ ತಕ್ಕದಾದ ರೀತಿಯಲ್ಲಿಯೆ ಕನ್ನಡಿಗರು ಆಚರಿಸಬೇಕಾಗಿದೆ. ಸ್ವತಂತ್ರ ಪ್ರಾಂತವನ್ನು ಕಟ್ಟುವದರ ಜತೆಯಲ್ಲಿಯೆ ಕನ್ನಡ ಸಾಹಿತ್ಯದ ಅಭಿವೃದ್ಧಿಗೂ ಹೆಣಗಬೇಕಾಗಿದೆ. ಈ ಕಾರ್ಯವನ್ನು ಸಾಹಿತ್ಯ ಪರಿಷತ್ತು ಕಳೆದ ಮೂವತ್ತು ವರುಷಗಳಿಂದ ಮಾಡುತ್ತ ಬಂದಿದೆ. ಸಾಹಿತಿಗಳಿಗೆ ಪ್ರೋತ್ಸಾಹ ಕೊಡುವದಕ್ಕಾಗಿ ಸಾಹಿತ್ಯಗೋಷ್ಠಿಯೂ ನೆರವೇರಲಿದೆ. ಈ ಸಲದ ಸಾಹಿತ್ಯ ಸಮ್ಮೇಲನವನ್ನು ನ್ಯಾಯಮೂರ್ತಿ ಜಾಗಿರದಾರರು ಪ್ರಾರಂಭಿಸುವದೂ ಒಂದು ವೈಶಿಷ್ಟ್ಯವಾಗಿದೆ. ಇವುಗಳ ಜತೆಗೆ ವಿಜ್ಞಾನಗೋಷ್ಠಿ, ಮಹಿಳಾಗೋಷ್ಠಿಗಳೂ ನಡೆವುವು. ಪರಿಷತ್ತಿನ ವಾರ್ಷಿಕ ಅಧಿವೇಶನವೂ ಇದೇ ಸಮಯದಲ್ಲಿ ಇದೆ. ಭಾರತ ಸ್ವಾತಂತ್ರ್ಯವನ್ನು ಪಡೆದ ಈ ಪರ್ವಕಾಲದಲ್ಲಿ ಕೂಡುತ್ತಿರುವ ಈ ಸಮ್ಮೇಲನಗಳಿಗೆ ಕನ್ನಡ ನಾಡಿನ ಮೂಲೆ ಮೂಲೆಗಳಿಂದ ಜನಹೋಗಿ ಅವುಗಳನ್ನು ಯಶಸ್ವಿ ಮಾಡುವುದಲ್ಲದೆ ಕನ್ನಡಿಗರ ಧ್ಯೇಯ ಸಾಧ್ಯ ಮಾಡಿಕೊಳ್ಳುವ ನಿಚ್ಚಳ ಮಾರ್ಗವನ್ನು ಗೊತ್ತುಪಡಿಸುವರೆಂದು ನಂಬುತ್ತೇವೆ.

ಸಂಸ್ಥಾನಗಳ ವಿಲೀನೀಕರಣ

ಸದ್ಯದ ಪರಿಸ್ಥಿತಿಯಲ್ಲಿ ಸಣ್ಣ ಸಣ್ಣ ಪ್ರಾಂತಗಳು ಆಡಳಿತವನ್ನು ಸರಾಗವಾಗಿ ಸಾಗಿಸಿಕೊಂಡು ಹೋಗಲಾರವೆಂಬುದು ಅನುಭವದಿಂದ ಸಿದ್ಧವಾಗಿದೆ. ದೊಡ್ಡ ರಾಷ್ಟ್ರಗಳೆ ಮಣ್ಣುಮುಕ್ಕುತ್ತಿರುವಾಗ ಸಣ್ಣ ರಾಷ್ಟ್ರಗಳ ಪಾಡೇನು? ಅಂತೆಯೆ ಸಣ್ಣ ಸಣ್ಣ ಭಾಗಗಳನ್ನು ಒಂದುಗೂಡಿಸಿ ಅವನ್ನು ಹೆಚ್ಚು ಭದ್ರ ಮಾಡುವ ಯೋಜನೆಗಳು ಕೈಕೊಳ್ಳಲ್ಪಡುತ್ತಿವೆ. ಹಿಂದುಸ್ಥಾನದಲ್ಲಿಯ ಸಂಸ್ಥಾನಗಳ ಸಮಸ್ಯೆ ಇದೇ ಬಗೆಯದಾಗಿದೆ. ಐದು ನೂರಕ್ಕಿಂತ ಹೆಚ್ಚಿಗಿರುವ ಈ ಸಂಸ್ಥಾನಗಳೆಲ್ಲ ಯೋಗ್ಯ ರೀತಿಯಿಂದ ಆಡಳಿತವನ್ನು ಸಾಗಿಸಿಕೊಂಡು ಹೋಗಲಾರವು. ಆತ್ಮರಕ್ಷಣೆ ಮಾಡಿಕೊಳ್ಳಲಾರವು. ಅಂತೆಯೆ ಸಣ್ಣ ಸಣ್ಣ ಸಂಸ್ಥಾನಗಳನ್ನು ಕೂಡಿಸುವ ಪ್ರವೃತ್ತಿಯುಂಟಾಗಿದೆ. ಇಂಥ ಸಣ್ಣ ಸಣ್ಣ ಸಂಸ್ಥಾನಗಳು ಭಾರತದ ಆಯಾ ಪ್ರಾಂತಗಳಲ್ಲಿ ವಿಲೀನಹೊಂದುವುದು ಹೆಚ್ಚು ಸುಖಕರ. ಈ ದೃಷ್ಟಿಯಿಂದಲೆ ಆಯಾ ಸಂಸ್ಥಾನಗಳು ಮುಂದಡಿಯಿಡಹತ್ತಿವೆ. ಜಮಖಂಡಿ ಸಂಸ್ಥಾನಿಕರು ಈ ದಿಸೆಯಲ್ಲಿ ಮುಂದಡಿಯಿಟ್ಟದ್ದು ಕರ್ನಾಟಕಸ್ಥರಿಗೆ ಹೆಮ್ಮೆಯ ವಿಷಯವಾಗಿದೆ. ಅವರ ಪಂಕ್ತಿಯನ್ನೆ ಹಿಡಿದು ಉತ್ಕಲದ ಸಂಸ್ಥಾನಗಳು ವಿಲೀನೀಕರಣದ ಯೋಜನೆಗೆ ಒಪ್ಪಿಕೊಂಡದ್ದು ಅಭಿನಂದನೀಯವಾಗಿದೆ. ಈ ಸಂಬಂಧದಲ್ಲಿ ಭಾರತ ಸರಕಾರ ಮತ್ತು ಈ ಸಂಸ್ಥಾನಗಳಲ್ಲಿ ಒಡಂಬಡಿಕೆಯಾಗಿದೆ. ಬರುವ ಒಂದನೇ ತಾರೀಕಿನಿಂದ ಈ ಸಂಸ್ಥಾನಗಳು ತಮ್ಮ ಪೂರ್ಣ ಅಧಿಕಾರವನ್ನು ಭಾರತ ಸರಕಾರಕ್ಕೆ ಬಿಟ್ಟುಕೊಡುವವು. ಸಂಸ್ಥಾನದ ಉತ್ಪನ್ನ ಒಂದು ಲಕ್ಷ ಇದ್ದರೆ ನೂರಕ್ಕೆ ೧೫ ರಷ್ಟು ಒಂದರಿಂದ ಐದು ಲಕ್ಷದವರೆಗಿದ್ದರೆ ನೂರಕ್ಕೆ ೧೦ ರಷ್ಟು ಮತ್ತು ಐದು ಲಕ್ಷ ಮಿಕ್ಕಿದರೆ ೭½ ಯಷ್ಟು ರಾಜರಿಗೆ ಖಾಸಗಿ ವೆಚ್ಚಕ್ಕಾಗಿ ಬಿಟ್ಟುಗೊಡಬೇಕೆಂದು ಗೊತ್ತಾಗಿದೆ. ಈ ರೀತಿ ವಿಲೀನೀಕರಣಕ್ಕೆ ಒಪ್ಪದಿದ್ದ ಸಣ್ಣ ಸಣ್ಣ ಸಂಸ್ಥಾನಗಳು ತಮ್ಮಲ್ಲಿಯೆ ಒಕ್ಕೂಟ ಮಾಡಿಕೊಂಡು ಪ್ರಜೆಗಳಿಗೆ ಹೊಣೆಗಾರ ಸರಕಾರ ಕೊಟ್ಟು ಆಡಳಿತವನ್ನು ಸಾಗಿಸುವದು ಇಷ್ಟು. ಸಣ್ಣ ಸಂಸ್ಥಾನಗಳಿಗೆ ಇವೆರಡು ಮಾರ್ಗಗಳನ್ನು ಬಿಟ್ಟರೆ ಬೇರೆ ಮಾರ್ಗವಿಲ್ಲ. ದೊಡ್ಡ ಸಂಸ್ಥಾನಗಳಾದರೂ ಮೊದಲಿನಂತೆ ಸ್ವಚ್ಛಂದ ವೃತ್ತಿಯಿಂದ ನಡೆಯಲಾರವು. ಪ್ರಜೆಗಳಿಗೆ ಹೊಣೆಗಾರ ಆಡಳಿತವನ್ನು ಕೊಡಲಿಕ್ಕೆ ಬೇಕಾಗುವದು. ಅವು ಹಿಂದುಸ್ಥಾನ ಅಥವಾ ಪಾಕಿಸ್ತಾನ ಸಾಮಂತ ರಾಷ್ಟ್ರಗಳಲ್ಲಿ ಕೂಡಬೇಕಾಗುವದು. ಸಂಸ್ಥಾನಿಕರು ಈ ಬಗೆಯ ಸಮಂಜಸ ಧೋರಣವನ್ನು ವಹಿಸಿ ತಮ್ಮ, ತಮ್ಮ ಪ್ರಜೆಗಳ ಮತ್ತು ದೇಶದ ಹಿತವನ್ನು ಸಾಧಿಸಿಕೊಳ್ಳಬೇಕೆಂದು ಸೂಚಿಸುತ್ತೇವೆ.

ಬೆಂಗಳೂರಿನ ಗಲಭೆ

ಮೈಸೂರಿನಲ್ಲಿ ಹೊಣೆಗಾರ ಸರಕಾರ ಸ್ಥಾಪಿತವಾಗಿ ಎಲ್ಲ ಜಾತಿ ಸಂಗಡಗಳ ಸಹಾಯ ಸಹಕಾರ ಒಪ್ಪಿಗೆಯಿಂದ ಆಡಳಿತ ಸಾಗಿರುವಾಗ ಗಲಭೆಗಳು ಪ್ರಾರಂಭವಾದುದು ದುರ್ದೈವದ ಸಂಗತಿ. ಶಿವಮೊಗ್ಗೆಯಲ್ಲಿ ಸಂಭವಿಸಿದ ದುರ್ಘಟನೆಗಳ ಅನಿಷ್ಟ ಪರಿಣಾಮದ ಗಾಯಗಳು ಇನ್ನೂ ಮಾಯದಿರುವಾಗ ಬೆಂಗಳೂರಿನಲ್ಲಿಯೆ ಗಲಭೆಗಳು ಪ್ರಾರಂಭವಾಗಿವೆ. ಕೇವಲ ಕ್ಷುದ್ರ ಕಾರಣಗಳಿಗಾಗಿ ಪ್ರಾರಂಭವಾದ ಈ ಗಲಭೆ ಈ ವರೆಗೆ ತಿಳಿದಮಟ್ಟಿಗೆ ೧೧ ಜನರ ಮರಣದಲ್ಲಿ ಮತ್ತು ನೂರಕ್ಕಿಂತ ಹೆಚ್ಚು ಜನರನ್ನು ಗಾಯಗೊಳಿಸುವದರಲ್ಲಿ ಪರ್ಯವಸಾನ ಹೊಂದಿದ್ದು ಅತ್ಯಂತ ವಿಷಾದಕರವಾಗಿದೆ. ಇದರಿಂದ ಬೆಂಗಳೂರಿನ ಶಾಂತತೆಗೆ ಭಂಗಬಂದಂತಾಗಿದೆ. ಯಾವಾಗಲೂ ಜನದಟ್ಟಣೆಯಿಂದ ಕೂಡಿದ್ದ ನಗರವೀಗ ನಿರ್ಜನವಾದುದನ್ನು ನೋಡಿದರೆ ಯಾರ ಹೃದಯದಲ್ಲಿಯೂ ತಳಮಳವುಂಟಾಗದಿರದು. ಮಂತ್ರಿಗಳು ಅಧಿಕಾರಿಗಳು ಪರಿಸ್ಥಿತಿಯನ್ನು ಹಿಡಿತದಲ್ಲಿ ತರಲು ಎಲ್ಲ ಬಗೆಯಿಂದ ಪ್ರಯತ್ನಮಾಡುತ್ತಿರುವರು. ಹಿಂದುಸ್ಥಾನ ಸ್ವತಂತ್ರವಾಗುವ ಮುನ್ನ ಇಲ್ಲಿ ಮೈಸೂರಿನಲ್ಲಿ ಪ್ರಜಾಪ್ರಭುತ್ವದ ಆಡಳಿತ ಸ್ಥಾಪಿತವಾಗುವ ಮುಂಚೆ ಮುಸ್ಲಿಂ ಲೀಗಿನವರು ಇಟ್ಟುಕೊಂಡ ಧೋರಣವನ್ನು ಈಗ ಬಿಟ್ಟುಗೊಡಲಾಗಿದೆಯೆಂದು ಅಲ್ಲಿಂದ ಬರುವ ಸುದ್ದಿಗಳಿಂದ ತಿಳಿಯುತ್ತದೆ. ಬೆಂಗಳೂರಿನ ಮುಸಲ್ಮಾನರಾದರೂ ವಂದೇಮಾತರಂಕ್ಕೆ ವಿರೋಧ ಪ್ರದರ್ಶಿಸುವದಿಲ್ಲವಾಗಿ ಸಾರಿದ್ದಾರೆ. ಅಲ್ಲದೆ ಹಿಂದೀ ರಾಷ್ಟ್ರಧ್ವಜಕ್ಕೂ ಗೌರವ ಕೊಡುವದಾಗಿಯೂ ಘೋಷಿಸಿದ್ದಾರೆ. ಇದು ಶುಭಚಿನ್ಹ. ಬಾಯಿಂದ ಹೊರಟ ಈ ಉದ್ಗಾರಗಳು ಬೇಗ ಕಾರ್ಯರೂಪದಲ್ಲಿ ಬಂದರೆ ಇಂದು ಅಲ್ಲಲ್ಲಿ ಸಂಭವಿಸುತ್ತಿರುವ ಘಟನೆಗಳು ನಿಲ್ಲುವವು. ಇದನ್ನು ಮನದಂದು ಮುಸ್ಲಿಂ ಲೀಗಿನವರು ತಮ್ಮ ಧೋರಣವನ್ನು ಸರಿಪಡಿಸಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇವೆ.

ಮುಸ್ಲಿಂ ಲೀಗಿನ ಇಬ್ಭಾಗ

ಪಾಕಿಸ್ತಾನ ಪಡೆವುದಕ್ಕಾಗಿ ತಾಯ್ನಾಡಾದ ಭಾರತದ ಹಿತವನ್ನು ಕೂಡ ಲಕ್ಷಿಸದೆ ಹೋರಾಡಿದ ಮುಸ್ಲಿಂ ಲೀಗಿನ ಅನುಯಾಯಿಗಳಿಗೆ ಈಗ ಬುದ್ಧಿ ಬಂದಂತಾಗಿದೆ. ವಿಶೇಷವಾಗಿ ಭಾರತದಲ್ಲಿ ಉಳಿದ ಮುಸ್ಲಿಂ ಲೀಗಿನ ಅನುಯಾಯಿಗಳು 'ನಂಬಿ ಕೆಟ್ಟೆವು' ಎಂಬುದಾಗಿ ಭಾವಿಸುತ್ತಿರುವರು. ಆ ಬಗೆಯ ಪಶ್ಚಾತ್ತಾಪವನ್ನೂ ಅವರು ವ್ಯಕ್ತಪಡಿಸುತ್ತಿರುವರು. ಹಿಂದುಸ್ಥಾನವೀಗ ಎರಡು ಹೋಳಾಗಿ ಬಿಟ್ಟದ್ದರಿಂದ ಮುಸ್ಲಿಂ ಲೀಗನ್ನು ಎರಡು ಭಾಗಗಳಾಗಿ ಮಾಡಬೇಕೆಂಬ ನಿರ್ಣಯವನ್ನು ಕರಾಚಿಯಲ್ಲಿ ಕೂಡಿದ್ದ ಮುಸ್ಲಿಂ ಲೀಗಿನ ಕೌನ್ಸಿಲ್ಲು ಮೊನ್ನೆ ತಾನೆ ಸ್ವೀಕರಿಸಿತು. ಬರೀ ಲೀಗು ಇಬ್ಭಾಗವಾದರೆ ತೀರದು. ಲೀಗಿನ ಗೊತ್ತು ಗುರಿಗಳಲ್ಲಿಯೂ ಅವಶ್ಯಕ ಮಾರ್ಪಾಡಾಗಲಿಕ್ಕೆ ಬೇಕು. ಮುಸಲ್ಮಾನೇತರರನ್ನು ಹತ್ತಿಕ್ಕಬೇಕು, ಎಲ್ಲೆಲ್ಲಿಯೂ ಮುಸಲ್ಮಾನರ ಪ್ರಶಸ್ತಿಯನ್ನು ಬೆಳೆಸಬೇಕು ಎಂಬುದಾಗಿ ಪಾಕಿಸ್ತಾನವಾದಿಗಳು ಕಾಣುತ್ತಿದ್ದ ಕನಸುಗಳನ್ನು ಇನ್ನು ಮುಂದೆಯಾದರೂ ಬಿಟ್ಟುಗೊಡಬೇಕಾಗುವುದು. ಹಿಂದುಸ್ಥಾನದಲ್ಲಿಯ ಮುಸಲ್ಮಾನೇತರರೊಡನೆ ಪೂರ್ಣ ಸಮರಸವಾಗಿ ನಡೆದುಕೊಳ್ಳಬೇಕಾಗಿದೆ. ಯಾವದೆ ಕ್ಷುಲ್ಲಕ ಕಾರಣಗಳಿಗಾಗಿ ತಲೆ ಕೆಡಿಸಿಕೊಂಡು ಒಮ್ಮೆಲೆ ದೊಂಬಿಗೆಳಸುವುದು ಹಿತಪ್ರದವಾಗದು. 'ನಗನಗುತ್ತ ಪಾಕಿಸ್ತಾನ ಪಡೆದೆವು, ಹೋರಾಡುತ್ತ ಹಿಂದುಸ್ಥಾನವನ್ನು ಪಡೆವೆವು' ಎಂಬ ಕಾಗೆನ್ನಂತೂ ಅವರು ಬಿಟ್ಟುಗೊಡಲಿಕ್ಕೆ ಬೇಕು. ಹೀಗೆ ಅವರು ತಮ್ಮ ಧೋರಣವನ್ನು ಮಾರ್ಪಡಿಸಿಕೊಂಡರೆ ಮಾತ್ರ ಎಲ್ಲರೂ ಸರಾಗವಾಗಿ ಸಾಗುವದು. ಇಲ್ಲವಾದರೆ ಅವರು ತಮ್ಮ [illegible] ಕಾಲ ಮೇಲೆ ತಾವೇ ಕಲ್ಲು ಹಾಕಿಕೊಂಡಂತಾಗುವುದು. ಅಲ್ಪಸಂಖ್ಯಾಕರ ಹಕ್ಕುಬಾಧ್ಯತೆಗಳನ್ನು ರಕ್ಷಿಸುವ ಹೊಣೆಯನ್ನು ಹಿಂದುಸ್ಥಾನ ಸರಕಾರ ಹೊತ್ತುಕೊಂಡಿದೆ. ಅದರ ಪೂರ್ಣ ಲಾಭವನ್ನು ಪಡೆದು ಮುಸ್ಲಿಂ ಲೀಗಿನವರು ಸಮಯಾನುಸಾರವಾಗಿ ತಮ್ಮ ಧೋರಣವನ್ನು ಮಾರ್ಪಡಿಸಿಕೊಂಡು ಸ್ವಮತ್ತು ದೇಶದ ಹಿತವನ್ನು ಸಾಧಿಸಬೇಕೆಂದು ಸೂಚಿಸುತ್ತೇವೆ.

ಹಿಂದುಸ್ಥಾನದ ಆರ್ಥಿಕ ಧೋರಣೆ

ಕಲಕತ್ತೆಯ ಅಸೋಸಿಯೇಟೆಡ್ ಕಾಮರ್ಸ ಚೇಂಬರದ ವಾರ್ಷಿಕಾಧಿವೇಶನದಲ್ಲಿ ಭಾಷಣ ಮಾಡುತ್ತ ಹಿಂದುಸ್ಥಾನದ ಮುಖ್ಯ ಮಂತ್ರಿಗಳಾದ ಪಂಡಿತ ಜವಾಹರಲಾಲ ನೆಹರುಗಳು ಸ್ವತಂತ್ರ ಹಿಂದುಸ್ಥಾನ ಸರಕಾರದ ಆರ್ಥಿಕ ಧೋರಣವನ್ನು ವಿವರಿಸಿದರು. ಈ ವರೆಗೆ ಹಿಂದುಸ್ಥಾನ ಅಸ್ವತಂತ್ರವಾಗಿದ್ದರಿಂದ ಪರಕೀಯ ಸರಕಾರವು ತನಗೆ ಅನುಕೂಲವಾಗುವ ರೀತಿಯಲ್ಲಿ ಹಿಂದುಸ್ಥಾನ ಸರಕಾರದ ಆರ್ಥಿಕ ಧೋರಣವನ್ನು ವಹಿಸುತ್ತಿದ್ದಿತು. ಆದರೀಗ ಎಲ್ಲವೂ ಬದಲಾಗಿದೆ. ಯುರೋಪಿಯನ್ ವರ್ತಕರಿಂದಲೆ ತುಂಬಿದ ಈ ವ್ಯಾಪಾರೀ ಸಂಸ್ಥೆಯು ಹಾಕಿಕೊಟ್ಟ ಆರ್ಥಿಕ ಧೋರಣವನ್ನು ಅನುಸರಿಸುತ್ತಿದ್ದ ಹಿಂದುಸ್ಥಾನ ಸರಕಾರ ಇನ್ನು ಮುಂದೆ ತನ್ನದೇ ಆದ ವಿಶಿಷ್ಟ ಆರ್ಥಿಕ ಧೋರಣದಂತೆ ನಡೆಯಬೇಕೆಂದು ಈ ವಣಿಕ್ ಸಂಸ್ಥೆಗೆ ಆದೇಶಿಸುತ್ತಿದೆ. ಮುಖ್ಯ ಮಂತ್ರಿಗಳಾದರೂ ಹಿಂದುಸ್ಥಾನದ ಘನತೆಗೆ ತಕ್ಕ ರೀತಿಯಲ್ಲಿ ಸರಕಾರದ ಆರ್ಥಿಕ ಧೋರಣವನ್ನು ಸಾರಿದ್ದಾರೆ. ಹಿಂದಿನಂತೆ ಇನ್ನು ಮುಂದೆ ಸ್ವತಂತ್ರ ಹಿಂದುಸ್ಥಾನದಲ್ಲಿ ಯಾವದೊಂದು ಜಾತಿಯ ಜನರಿಗೆ ವಿಶಿಷ್ಟ ಹಕ್ಕುಬಾಧ್ಯತೆಗಳಾವುವೂ ದೊರೆಯಲಾರವು. ಎಲ್ಲರಿಗೂ ಸಮಾನವಾದ ಸುಖ ಸೌಕರ್ಯ ಹಕ್ಕುಬಾಧ್ಯತೆಗಳನ್ನು ಒದವಿಸಿ ಕೊಡಲಾಗುವದು. ಪರದೇಶೀ ವ್ಯಾಪಾರಸ್ಥರಿಗೆ ಇನ್ನು ಮುಂದೆಯೂ ಯೋಗ್ಯ ಅವಕಾಶ ಕಲ್ಪಿಸಿ ಕೊಡಲಾಗುವುದೆಂದೂ ಆಶ್ವಾಸಿಸಲಾಗಿದೆ. ಒಮ್ಮೆಲೆ ರಾಷ್ಟ್ರೀಕರಣ ಧೋರಣವನ್ನು ಸರಕಾರ ಇಟ್ಟುಕೊಂಡಿಲ್ಲ. ಇನ್ನು ಕೆಲ ವರ್ಷಗಳವರೆಗಾದರೂ ವೈಯಕ್ತಿಕ ಸಾಹಸ ಪರಿಶ್ರಮಗಳಿಗೆ ಸ್ಥಾನವಿದೆಂದೂ ಅವರು ಹೇಳಿದ್ದಾರೆ. ಮೂಲಭೂತ ಉದ್ಯೋಗಗಳಲ್ಲಿ ರಾಷ್ಟ್ರೀಕರಣವನ್ನು ಸರಕಾರ ಮಾಡಬಲ್ಲುದು, ಉಳಿದ ಉದ್ಯೋಗ ಧಂದೆಗಳೆಲ್ಲ ಖಾಸಗಿ ವ್ಯಕ್ತಿಗಳ ದುಡಿಮೆಯಿಂದಲೆ ಇನ್ನು ಹಲವಾರು ವರ್ಷಗಳವರೆಗೆ ಪ್ರಗತಿ ಹೊಂದಬೇಕಾಗುವದು. ಇದನ್ನು ನೆನೆದು ಆಯಾ ವ್ಯಕ್ತಿ ಮತ್ತು ಸಂಘಗಳೂ ಪರಿಶ್ರಮಿಸಬೇಕಾಗಿದೆ. ಗ್ರಾಮ ಮತ್ತು ನಾಗರಿಕ ಆರ್ಥಿಕ ರಚನೆ ಗ್ರಾಮೋದ್ಯೋಗ ಮುಂತಾದವುಗಳಲ್ಲಿ ಹೆಚ್ಚು ಭೇದವನ್ನು ಕಲ್ಪಿಸದೆ ಹಿಂದುಸ್ಥಾನ ಸರಕಾರವು ಎಲ್ಲವನ್ನೂ ಸಮತೂಕದಿಂದ ನೋಡಿಕೊಳ್ಳುವದೆಂದು ಜವಾಹರಲಾಲರು ಹೇಳಿದರು. ಸರಕಾರದ ಈ ಧೋರಣಕ್ಕನುಗುಣವಾಗಿ ವ್ಯಾಪಾರಸ್ಥರು ವರ್ತಿಸಬೇಕೆಂದು ಕೇಳಿಕೊಳ್ಳುವೆವು.

ಉತ್ಪಾದನೆ ಹೆಚ್ಚಿಸುವದು

ಹಿಂದುಸ್ಥಾನದಲ್ಲಿ ವಿವಿಧ ಸರಕುಗಳ ಉತ್ಪಾದನೆಯನ್ನು ಹೆಚ್ಚಿಸುವ ವಿಷಯವನ್ನು ಮುಖ್ಯ ಮಂತ್ರಿಗಳು ಅನುಷಂಗಿಕವಾಗಿ ಹೇಳಿದರು. ಹಿಂದುಸ್ಥಾನ ಈ ವರೆಗೆ ಪರದೇಶಗಳಿಗೆ ಕೇವಲ ಕಚ್ಚಾ ಸರಕುಗಳನ್ನು ಕಳಿಸಿಕೊಡುವ ರಾಷ್ಟ್ರವಾಗಿದ್ದಿತು. ಅದಕ್ಕಾಗಿ ಹೊನ್ನಿನ ಹೊಳೆಯನ್ನೇ ಪರದೇಶಗಳಿಗೆ ಹಾಸಬೇಕಾಗಿದ್ದಿತು. ಆದರೆ ಸ್ವತಂತ್ರ ಹಿಂದುಸ್ಥಾನ ಸರಕಾರ ಈ ಹೊನ್ನಿನ ಹೊಳೆಗೆ ತಡೆಯನ್ನು ಒಡ್ಡಬೇಕಾಗುವದು. ಈ ಮಾತನ್ನು ಪಂಡಿತ ಜವಾಹರಲಾಲರು ಹೇಳಿರುವರು. ಉತ್ಪಾದನ ಹೆಚ್ಚಬೇಕಾದರೆ ಕೂಲಿಕಾರರು ಮತ್ತು ಒಡೆಯರಲ್ಲಿ ಏಕಮತ್ಯವಿರುವದು ಅವಶ್ಯ. ಕೂಲಿಕಾರರಲ್ಲಿ [illegible] ಉತ್ಪಾದನೆ ಹೆಚ್ಚಳಕ್ಕೆ ಅಡ್ಡಿಯಾಗಿದೆಯೆಂದು ಪಂ. ಜವಾಹರಲಾಲರು ಹೇಳಿದ್ದು ಸೂಕ್ತವಾಗಿದೆ. ಕೂಲಿಕಾರರು ಮತ್ತು ಒಡೆಯರು ಪರಸ್ಪರ ತಿಳಿವಳಿಕೆಯಿಂದ ವಿವಾದಗಳನ್ನು ಬಗೆಹರಿಸಿಕೊಳ್ಳಬೇಕು. ಸರಕಾರದ ನ್ಯಾಯಾಸನಕ್ಕೆ ತಲೆಬಾಗಿ ವರ್ತಿಸಬೇಕು ಎಂಬುದಾಗಿ ಅವರು ಹೇಳಿದರು. [illegible] ವಿಶಿಷ್ಟ ಪರಿಸ್ಥಿತಿಯನ್ನು ಲಕ್ಷಿಸಿ ಕೂಲಿಕಾ[illegible] ದರು ತಮ್ಮ ಧೋರಣವನ್ನು [illegible] ಬೇಕಾದರೆ [illegible] ಬಳಸಿದ್ದು [illegible] ಹಿಂದುಸ್ಥಾನಕ್ಕೆ [illegible]. ಹಿಂದುಸ್ಥಾನ ಸರಕಾರ [illegible] ಉತ್ಪಾದನೆಯ ಹೆಚ್ಚಳದ [illegible] ಕಾಯಕ [illegible] ಅವರು [illegible] ರಿಂದ ಸಾಧಿಸಲಾರದು. ಉದ್ಯೋಗ [illegible] ಗಳಾದ ಡಾ. ಶ್ಯಾಮಪ್ರಸಾದ ಮುಖರ್ಜಿ [illegible] ಉತ್ಪಾದನೆಯನ್ನು ಹೆಚ್ಚಿಸಲು [illegible] ವನ್ನು ಔದ್ಯೋಗಿಕ ಪರಿಷತ್ತಿನ [illegible] ಇದರಲ್ಲಿ ಹೇಳಿರುವರು. ಇದನ್ನು [illegible] ಆಯಾ ಉದ್ಯೋಗಗಳು [illegible] ಉತ್ಪಾದನೆಯನ್ನು ಹೆಚ್ಚಿಸಲಿಕ್ಕಾಗಿ [illegible] ಮುಂದೆ ಪ್ರಯತ್ನ ನಡೆಯಬೇಕೆಂದು [illegible] ಬಯಸುತ್ತೇವೆ. [illegible] ಈ ಪರಿಷತ್ತಿನಲ್ಲಿ [illegible] ಉತ್ಪಾದನೆ ಕಡಿಮೆಯಾಗುತ್ತಿರುವದನ್ನು [illegible] ಬೇಕೆಂದು ಅಭಿಪ್ರಾಯ ಪಟ್ಟರು. ಉತ್ಪಾದನೆ ಹೆಚ್ಚಳಕ್ಕೆ ಔದ್ಯೋಗಿಕ ಶಾಂತಿ [illegible] ಬೇಕೆಂಬ [illegible] ಸಂಘಗಳನ್ನು [illegible] ರುವ ಉತ್ಪಾದನೆಯನ್ನು [illegible] ಮೂರು ವರುಷಗಳ ಔದ್ಯೋಗಿಕ ಶಾಂತಿ [illegible] ಮಾಡಿಕೊಳ್ಳಬೇಕೆಂದು ಔದ್ಯೋಗಿಕ [illegible] ಒಡೆಯರಿಗೂ ಕೂಲಿಕಾರರಿಗೂ [illegible] ಇದು ಅತ್ಯಂತ ಮಹತ್ವದ್ದು. [illegible] ಒಡೆಯರಲ್ಲಿ ಮತ್ತು ಕೆಲಸಗಾರರಲ್ಲಿ [illegible] ನಡೆದರೆ ಉತ್ಪಾದನೆ ಹೆಚ್ಚುವದು [illegible] ಒಂದು ವೇಳೆ ಒಡೆಯರು-ಕೂಲಿಕಾರರಲ್ಲಿ [illegible] ಬಂದರೆ ನ್ಯಾಯಮಂಡಲಗಳ [illegible] ಅವನ್ನು ಬಗೆಹರಿಸಿಕೊಳ್ಳಬೇಕು. [illegible] ಯೋಗ್ಯ ಕೂಲಿ ದರ ಹಾಗು [illegible] ಯೋಗ್ಯ ಪ್ರತಿಫಲ ದೊರೆಯುವಂತೆ [illegible] ಮಾಡಬೇಕೆಂದೂ ಈ ಗೊತ್ತುವಳಿಯಲ್ಲಿ [illegible] ಸಮಂಜಸವಾಗಿದೆ. ಇನ್ನೊಂದು [illegible] ಬಹುಮಟ್ಟಿಗೆ ಅಶ್ವಂತಿಕರವಾಗಿಯೆ ನಮ್ಮ ಉದ್ಯೋಗಗಳನ್ನು ಬೆಳೆಸಿಕೊಂಡು ನಾವು [illegible] ದ್ದರೆ ಆ ಮುಂದಿನ ಪ್ರವಾಸ [illegible] ಮುಖ್ಯ ಮಂತ್ರಿಗಳು ಹೇಳಿದರು. ಇದನ್ನು ನೆನೆದು ಭಾರತೀಯರು ಉತ್ಪಾದನೆಯನ್ನು ಹೆಚ್ಚಿಸುವತ್ತ ಎಲ್ಲ ಬಗೆಯ ಗಮನವನ್ನು ಕೊಡಬೇಕೆಂದು ಒತ್ತಾಯಪಡಿಸುತ್ತೇವೆ.

ಹೈದರಾಬಾದ ನಡುಗಾಲ ಸರಕಾ[illegible]

ಹೈದರಾಬಾದ—ಹಿಂದುಸ್ಥಾನಗಳಲ್ಲಿ [illegible] ಸ್ಥಿತಿ ಒಪ್ಪಂದದ ನಂತರ ಅಲ್ಲಿನ ಪರಿಸ್ಥಿತಿ ಸು[illegible] ರಿಸಬಹುದೆಂದು ಅನೇಕರು ಬಗೆದಿದ್ದರು. ನಿಜಾಮ ಸಾಹೇಬರು ಸಂಸ್ಥಾನದಲ್ಲಿ ಬಹುಸಂಖ್ಯ ಪ್ರಜೆ[illegible] ಏಕಮೇವ ಪ್ರಾತಿನಿಧಿಕ ಸಂಸ್ಥೆಯಾದ [illegible] ಸ್ಸಿನ ಸಹಕಾರವನ್ನು ಪಡೆದು ಅದರ ಮೂಲಭೂತ ಬೇಡಿಕೆಗಳನ್ನು ಪೂರೈಸಿ ಆಡಳಿತವನ್ನು ಸಾಗಿಸುವರೆಂದು ಆಶಿಸಲಾಗಿತ್ತು. [illegible] ನಿಜಾಮ ಸಾಹೇಬರು ಇತ್ತ [illegible] ಜಾತೀಯ ಪ್ರತಿಗಾಮೀ ಸಂಸ್ಥೆಯಾದ [illegible] ಹಾಮುಲ್ ಸಂಸ್ಥೆಯ ಸಹಕಾರದಿಂದ [illegible] ನಡುಗಾಲ ಸರಕಾರವನ್ನು ಸ್ಥಾಪಿಸಿಕೊಂಡಿರುವರು. [illegible] ಮೊದಲು ಹನ್ನೆರಡು ಜನ ಮಂತ್ರಿಗಳಿರಬೇಕೆಂದು ಗೊತ್ತಾಗಿದ್ದರೂ ಈಗ [illegible] ಜನರನ್ನು [illegible] ಮಂಡಳದಲ್ಲಿ ಸೇರಿಸಿಕೊಳ್ಳಲಾಗಿದೆ. ಕಾಂಗ್ರೆಸ್ಸಿಗರೂ ಇದರಲ್ಲಿ ಸೇರಿರುವರೆಂದು ಮುಖ್ಯ [illegible] ಅಲ್ಲಿಯವರು ಪ್ರಕಟಿಸಿದ್ದನ್ನು ಸುಳ್ಳೆಂದು ಸಂಸ್ಥಾನ ಕಾಂಗ್ರೆಸ್ಸಿನ ಅಧ್ಯಕ್ಷರಾದ ಸ್ವಾಮಿ ರಮಾನಂದ ತೀರ್ಥರು ಸಾರಿದ್ದಾರೆ. ಕಾಂಗ್ರೆಸ್ ಸಂಸ್ಥೆ ಅಧಿಕೃತವಾಗಿ ಈ ಮಂತ್ರಿಮಂಡಳದಲ್ಲಿ ಭಾಗವಹಿಸಿಲ್ಲ. ವೈಯಕ್ತಿಕವಾಗಿಯೂ ಯಾರಿಗೂ ಭಾಗವಹಿಸಲು ಅಪ್ಪಣೆಕೊಟ್ಟಿಲ್ಲ ಎಂದೂ ಸ್ವಾಮೀಜಿ ಹೇಳಿದ್ದಾರೆ. ಪರಿಸ್ಥಿತಿ ಹೀಗಿರುವಾಗ ಹೈದರಾಬಾದಿನ ಮುಖ್ಯ ಮಂತ್ರಿಗಳು ಕಾಂಗ್ರೆಸ್ಸಿನ ಪ್ರತಿನಿಧಿಗಳು [illegible] ದು ಅವರನ್ನು ಹೇಗೆ ಆರಿಸಿರುವರೊ ತಿಳಿಯದು. [illegible] ಹೈದರಾಬಾದ ಪ್ರಜಾ ಸಮಿತಿಯು [illegible] ಮೂಲಭೂತ ಬೇಡಿಕೆಗಳು ಮಾನ್ಯವಾಗದೆ [illegible] ತದಲ್ಲಿ ಭಾಗವಹಿಸುವದು ಶಕ್ಯವಿಲ್ಲ [illegible] ಘಂಟಾಘೋಷವಾಗಿ ಸಾರಲಾಗಿದೆ. ಪರಿಸ್ಥಿತಿ [illegible] ವಾಗ ನಿಜಾಮ ಪ್ರಭುಗಳು ನಡುಗಾಲ ಸರ[illegible] ದದ ಪ್ರಹಸನ [illegible] ಏಕೆ ನಡೆಸಿರುವರೆ [illegible] ಮತ್ತೆ ರಜಾಕಾರರ ಮಾತು ಮಾಡುವವರು ಯಾಕೆ [illegible] ಮಾಡಬೇಕು. ಈ ಬಗೆಯ ಅನ್ಯಾಯ [illegible] ಧೋರಣವನ್ನು ಬಿಟ್ಟುಕೊಟ್ಟು [illegible] ಕಾಂಗ್ರೆಸ್ಸಿನ ಬೇಡಿಕೆಗಳನ್ನು ಪೂರೈಸಿ [illegible] ಕೈಯ ಆಶಾಂತಿ ಮತ್ತು ಅತ್ಯಾಚಾರವನ್ನು [illegible] ಪ್ರಯತ್ನಿಸ ಎಲ್ಲಬಗೆಯ ಪ್ರಗತಿ [illegible] ಅವರ ಕರ್ತವ್ಯವಾಗಿದೆ.

ಂದೀ ಧುರೀಣರ ಕಾಲೋಚಿತ ಹಿತೋಕ್ತಿಗಳು

ಶ್ಯಾಮಪ್ರಸಾದರ ಉದ್ಯೋಗ ಸುಧಾರಣೆ— ಜವಾಹರರ ಅರ್ಥನೀತಿ— ರಾಜೇಂದ್ರಪ್ರಸಾದರ ಅಧ್ಯಾತ್ಮವಾದ--

ಉದ್ಯೋಗ ಮಂತ್ರಿಗಳ ಉತ್ಸಾಹವಾಣಿ

ನೊಸದಿಲ್ಲಿಯಲ್ಲಿ ಮೊನ್ನೆ ನಡೆದ ಔದ್ಯೋಗಿಕ ಷತ್ತಿನಲ್ಲಿ ಉದ್ಯೋಗ ಮಂತ್ರಿಗಳಾದ ಡಾ. ಮಪ್ರಸಾದ ಮುಖರ್ಜಿಯವರು ಭಾರತದ ಕ ಬಿಕ್ಕಟ್ಟನ್ನು ಬಿಡಿಸಲು ಪರಿಸ್ಥಿತಿಗನುಗುಣ ಗಿ ಯಾವ ಯಾವ ಕ್ರಮವನ್ನು ಕೈಕೊಳ್ಳ ಕೆಂಬುವನ್ನು ತಮ್ಮ ಸುದೀರ್ಘವಾದ ಭಾಷಣ ಲ್ಲಿ ವಿವರಿಸಿದರು. ಸರಕಾರವು ಒಂದು ಯಂತ್ರ ದ ಸಮಿತಿಯನ್ನು ರಚಿಸುವುದೆಂದೂ ಅದು ದೀರ್ಘಕಾಲಿಕ ಉತ್ಪಾದನಕ್ಕಾಗಿ ನಾಡಿನಲ್ಲಿಯ ರಕಾರಿ ಯಂತ್ರಸಾಮಗ್ರಿಗಳನ್ನು ಪರಿಶೀಲಿಸಿ ಗಳಲ್ಲಿ ಅನವಶ್ಯಕವಾದುವನ್ನು ಖಾಸಗಿ ದ್ಯಮಿಗಳಿಗೆ ಕೊಡುವ ಬಗ್ಗೆ ವಿಚಾರ ಮಾಡುವು ದೂ ಮಂತ್ರಿಗಳೆಂದರು.

ಮುಂಬರಿಯುತ್ತ, ಮಂತ್ರಿಗಳು— ಮನುಷ್ಯ ಮತ್ತು ಭೂಸಂಪತ್ತಿಯಿಂದ ಸುಸಮೃದ್ಧ ವ ಭಾರತದಂಥ ನಾಡು ಬಡತನದ ತವ ರುಮನೆ ದುಃಖದಾಯಕ; ದೇಶದ ಅಭ್ಯುದಯ ಗಿ ನಾವು ಎಲ್ಲ ಬಂಡವಾಳ, ಭೂಸಂಪತ್ತು, ಬುದ್ಧಿ, ವಾಣಿಜ್ಯ, ಆಡಳಿತ, ಯಂತ್ರಶಾಸ್ತ್ರ ಇವುಗಳ ಪೂರ್ಣ ಉಪಯೋಗವನ್ನು ಮಾಡಿ ಳ್ಳಬೇಕು; ಹಾಗೆ ಮಾಡಿಕೊಂಡರೆ ಮಾತ್ರ ಬಡತನ ನೀಗೀತು, ನಮ್ಮ ನಾಡು ಸಂಪ ನ್ನ ಬೀಡಾದೀತು—ಎಂದರು.

ಉತ್ಪಾದನೆಯ ಇಳಿತಾಯ

೧೯೪೫ರಲ್ಲಿ ೪೮೦೦ ದಶಲಕ್ಷ ಗಜ ಬಟ್ಟೆ ನಮ್ಮಲ್ಲಿ ಯಾಗುತ್ತಿತ್ತು. ಅದು ಯುದ್ಧಾನಂತರ ೦೦ ದಶಲಕ್ಷ ಗಜಕ್ಕಿಳಿಯಿತು. ಉಕ್ಕು ರ್ಕೆ ೧,೧೪೦,೦೦೦ ಟನ್ನಿನಿಂದ ೮,೭೫೦೦೦ ದಿದೆ. ಈ ಉತ್ಪಾದನೆಯ ಇಳಿತ ಭಯಂಕರ ಗಿದೆ. ಇದರ ಮೇಲೆ ದರಗಳು ಮಿತಿ ರಿ ಏರತೊಡಗಿವೆ. ಜನರ ಕೊಳ್ಳುವ ಶಕ್ತಿ ತ್ತು ಉತ್ಪಾದನೆಗಳ ನಡುವಣ ಅಂತರ ಚ್ಚಾಗುತ್ತ ಹೋಗಿದೆ. ಇದಕ್ಕೆ ಸ್ಟರ್ಲಿಂಗ ಗ ಹದ ಮೇಲೆ ಭಾರ ಹಾಕಿ ರಿಜರ್ವ್ ಂಕು ರೂಪಾಯಿ ನೋಟುಗಳನ್ನು ಹೊರ ನಾಡಿನಲ್ಲಿ ನೋಟಿನ ಹಣ ಹೆಚ್ಚಿಸಿದ್ದೇ ರಣ. ಇದರ ನಿವಾರಣೆಗಾಗಿ ಕೂಲಿ ಏರಿಸಿ ಯಿತು. ಉತ್ಪಾದನದ ಅಧೋಗತಿ ಮತ್ತು ಗಳ ಊರ್ಧ್ವಗತಿ ಇವುಗಳ ವಿಷಮಚಕ್ರ ದ ತಪ್ಪಿಸಿಕೊಳ್ಳಬೇಕಾದರೆ ಉತ್ಪಾದನೆ ನ್ನು ಹೆಚ್ಚಿಸುವುದೊಂದೇ ಉಪಾಯ.

ಉತ್ಪಾದನೆಯ ಇಳಿತಾಯಕ್ಕೆ ಕೂಲಿಕಾರ ತ್ತು ಒಡೆಯರ ನಡುವಣ ವೈಮನಸ್ಯ, ಕಚ್ಚಾ ಕುಗಳ ಕೊರತೆ ಮತ್ತು ಅವುಗಳ ಅಕ್ರಮ ರಣ, ಸಾರಿಗೆಯ ದುಃಸ್ಥಿತಿ, ಯಂತ್ರೋಪಕರ ಳ ಮತ್ತು ಅವುಗಳ ಸ್ಥಾಪನಾ ಸಾಧನಗಳ ಾವ, ಅಲ್ಲದೆ ಆಯಾತದ ಮೇಲೆ ವಿನಿಮಯದ ಬಂಧವಿದ್ದುದು—ಕಾರಣಗಳೆನಿಸಿವೆ. ಪರಿ ತ್ತಿ ಈ ಎಡರುಗಳ ಪರಿಹಾರೋಪಾಯವನ್ನು ಚಿಸಬೇಕು.

ಸೆಂಬರ ೧೮ಕ್ಕೆ ಒಡೆಯರ ಮತ್ತು ಕೂಲಿ ರರ ಸಭೆ ಕರೆದು ಅವರ ಸ್ನೇಹಭಾವವನ್ನು ಸಲು ಅಗತ್ಯ ಕಾರ್ಯವನ್ನು ಮಾಡುವ ಬಂಧದಲ್ಲಿ ಚರ್ಚೆ ನಡೆಯುವುದೆಂದು ಪ್ರಸಾ ಸಾರಿದರು. ಕೂಲಿಕಾರ ಮಂತ್ರಿಗಳು ಇದ ವಿಶೇಷ ಶ್ರದ್ಧೆಯಿಂದ ಲಕ್ಷ್ಯಗೊಟ್ಟು ತಮ್ಮ ವೀವರೆಂದೂ ಅವರು ಹೊರಗೆಡಹಿದರು.

ಸರಕಾರದ ಹೊಸ ಯೋಜನೆ

೩ ಲಕ್ಷ ಟನ್ನಿನ ೨ ಹೊಸ ಉಕ್ಕಿನ ಕಾರಖಾನೆ ನ್ನು ಸ್ಥಾಪಿಸಲು ಸರಕಾರ ನಿಶ್ಚಯಿಸಿದೆ. ಇವು ಉತ್ಪಾದನೆ ೧ ಲಕ್ಷ ಟನ್ನಿನ ವರೆಗೇರಬ ಹುದು. ಉಕ್ಕಿನ ಉದ್ಯೋಗಿಗಳ ಪ್ರತಿನಿಧಿ ಮಂಡಲವೊಂದು ಈ ವಿಷಯದಲ್ಲಿ ಸರಕಾರಕ್ಕೆ ಹೆ ಕೊಡುವುದೆಂದು ಮಂತ್ರಿಗಳು ತಿಳಿಸಿ ರು. ಯುದ್ಧ ಕಾಲದಲ್ಲಿ ಮಿತಿಮೀರಿ ಬೆಳೆದ ಮದ್ದಿನ ರಖಾನೆಗಳನ್ನು ಔದ್ಯೋಗಿಕ ಬೆಳವಣಿಗೆಗಾಗಿ ಸಬೇಕೆಂದು ಕೇಂದ್ರ ಸರಕಾರ ಬಯಸುವು ದು ಡಾಕ್ಟರರು ಉತ್ತರಿಸಿದರು. ಹಿಂದೀ ಉದ್ಯ ಗಳಿಗೆ ಸ್ಥಾಯಿತ್ವ ದೊರಕಬೇಕಾದರೆ ಅವುಗಳ ಲೆ ಗುಣನಿಯಂತ್ರಣವಿರಬೇಕು. ಇದಕ್ಕಾಗಿ ಕಾರದವರು ಒಂದು ಗುಣನಿರ್ಣಾಯಕ ಸಮಿತಿಯನ್ನು ಸ್ಥಾಪಿಸಿದ್ದಾರೆ. ಬೆಲ್ ಟೆಲಿಫೋನ ಯೋಗಶಾಲೆಯ ಡಾ. ಶ್ಯೂವರ್ಟರು ಗುಣ ನಿಯಂತ್ರಣ ಪದ್ಧತಿಯಲ್ಲಿ ನಿಷ್ಣಾತರೆಂದು ಜಗತ್ತಿ ... ಹದ ಮೇ ರಿಗೆ ಅವರು ಅತಿಥಿಗಳಾಗಿ ಹಿಂದುಸ್ತಾನಕ್ಕೆ ಬಂದಿದ್ದಾರೆ— ಎಂದು ಪ್ರಸಾದರು ವಿವರಿಸಿದರು.

ಮುಂದೆಸಾಗಿ ಮಂತ್ರಿಗಳು— ಪ್ರಾಂತಿಕ ಪದ್ಧತಿಯ ಸುಧಾರಣೆಯ ಸಲುವಾಗಿ ಸರಕಾರದವರು ವೈಜ್ಞಾನಿಕ ಮತ್ತು ಔದ್ಯೋಗಿಕ ಸಂಶೋಧನೆಗೆ ದೊಡ್ಡ ಪ್ರಮಾಣದಲ್ಲಿ ಹಣಕೊಡಮಾಡಿದ್ದಾರೆಂದೂ ಸದ್ಯದ ಪೇಂಟೆಂಟ್ ಕಾಯದೆಯನ್ನು ಪುನರ್ವಿಮರ್ಶಿಸಿ ವಿದೇಶಗಳಂತೆ ಹಿಂದುಸ್ತಾನಕ್ಕೂ ಪೇಟೆಂಟುಗಳ ಲಾಭದೊರೆವಂತೆ ಮಾಡಲಾಗುವುದೆಂದೂ ಆಶ್ವಾಸನವಿತ್ತರು.

ಗ್ರಾಮೋದ್ಯೋಗಗಳು ಬೆಳೆಯಬೇಕಾದರೆ ಅಗ್ಗದ ವಿದ್ಯುತ್ಪೂರಯಿಕೆ, ಯೋಗ್ಯ ದರಕ್ಕೆ ಕಚ್ಚಾಮಾಲು ಇವು ಸಿಗಬೇಕು. ಮಾರಾಟ ಮತ್ತು ಸಾರಿಗೆಗಳ ವ್ಯವಸ್ಥೆ ಉತ್ತಮಗೊಳ್ಳಬೇಕು.

ದೀರ್ಘಕಾಲಿಕ ಯೋಜನೆ ೧೯೪೮ರೊಳಗಾಗಿ ಸಿದ್ಧವಾದರೆ ಅದಕ್ಕಗತ್ಯವಾದ ಯಂತ್ರಸಾಮಗ್ರಿಗಳನ್ನು ಹೊರನಾಡುಗಳಿಂದ ತರಿಸಲವಕಾಶ ದೊರಕುವುದು. ಕೂಡಲೆ ಮಾಡತಕ್ಕ ಕಾರ್ಯವೆಂದರೆ ನಮ್ಮ ಅಲ್ಪಕಾಲಿಕ ಯೋಜನೆಯನ್ನು ಕಾರ್ಯರೂಪಕ್ಕಿಳಿಸುವುದು ಮತ್ತು ಈಗಿರುವ ಕಾರಖಾನೆಗಳ ಉತ್ಪಾದನೆಯನ್ನು ಹೆಚ್ಚಿಸುವುದು ಎಂದು ಹೇಳಿ, ಮಂತ್ರಿಗಳು ದಾರಿದ್ರ್ಯನಿವಾರಣೆಗಾಗಿ ಸರ್ವಪ್ರಯತ್ನ ಮಾಡಲಾಗುವುದೆಂದು ತಮ್ಮ ಮಾತನ್ನು ಮುಕ್ತಾಯಗೊಳಿಸಿದರು.

ಪಂಡಿತರ ಅರ್ಥವ್ಯಾಖ್ಯೆ

ಹಿಂದುಸ್ತಾನದ ಮಹಾಪ್ರಧಾನರಾದ ಪಂಡಿತ ಜವಾಹರಲಾಲರು ತಾ. ೧೫ರ ಮುಂಜಾವದಲ್ಲಿ ಕಲಕತ್ತದ ಐರೋಪ್ಯ ವಣಿಜ್ಯಮಹಾಮಂಡಲದ ವಾರ್ಷಿಕ ಸಭೆಯಲ್ಲಿ ಮಾತನಾಡುತ್ತ ಕೆಳಗಿನ ಅಭಿಪ್ರಾಯವನ್ನು ಸ್ಪಷ್ಟವಾಗಿ ಸಭೆಯ ಮುಂದಿಟ್ಟರು.

ನಾವು ಈಗ ಗಮನಿಸತಕ್ಕ ಮುಖ್ಯ ವಿಷಯವೆಂದರೆ, ನಾಡಿನ ವಿಭಜನೆಯಿಂದ ಉದ್ಭೂತವಾದ ವಿವಿಧ ಸಮಸ್ಯೆಗಳು. ಅವುಗಳಲ್ಲಿ ಮುಖ್ಯವಾದುದು ಕೊಲೆ, ಸುಲಿಗೆಯ ಹಾವಳಿ. ಆದರಿಂದ ಹಿಂದುಸ್ತಾನದ ಆರ್ಥಿಕ ರಚನೆ ತಲೆ ಕೆಳಗಾಗಿದೆ. ವಿಭಜನೆಯಿಂದ ಹಿಂದುಸ್ತಾನಕ್ಕೆ ಸ್ವಾವಲಂಬಿಯಾಗಿರಬಹುದಾದ ಸಂದರ್ಭ ತಪ್ಪಿಹೋಯಿತು. ಈ ೭೦-೮೦ ಲಕ್ಷ ಜನ ನಿರಾಶ್ರಿತರ ವಿನಿಮಯಕ್ಕಾಗಿ ಬಹಳ ಹಣ ಸುರಿಯಬೇಕಾಗಿರುವುದರಿಂದ ಔದ್ಯೋಗಿಕ ಪುನರ್ರಚನೆ ಮುಂದೆ ಬೀಳಬಹುದು. ಆದರೆ ಶಾಂತಿಸ್ಥಾಪನೆಗಾಗಿ ಭಗೀರಥ ಪ್ರಯತ್ನ ನಡೆಸಿ ವಾದಗ್ರಸ್ತ ವಿಷಯಗಳಲ್ಲಿ ಹಿಂದುಸ್ತಾನವು ಪಾಕಿಸ್ತಾನದೊಡನೆ ಒಪ್ಪಂದ ಮಾಡಿಕೊಂಡಿರುತ್ತದೆ.

ಭಾರತವು ರಶಿಯದೊಡನೆ ಸ್ನೇಹದಿಂದಿರುವಾಗ ಮಂಡಲದ ಅಧ್ಯಕ್ಷರಾದ ಶ್ರೀ ಕಂಬರ್ ಬ್ಯಾಚರು ಕಮ್ಯುನಿಜಮ್ಮಿನ ವಿರುದ್ಧ ಆಡಿದ ನಾಲ್ಕು ಮಾತುಗಳು ಅಸಮಂಜಸವೆಂದು ನಡುವೆ ಆ ಮಾತನ್ನೆತ್ತಿ ಪಂಡಿತರು ಉತ್ತರಿಸಿದರು.

ರೈತ ಮತ್ತು ಕೂಲಿಕಾರರ ಹಿತ

ಪಂಡಿತರು ಮುಂದುವರಿಯುತ್ತ, ರೈತ, ಕೂಲಿಕಾರ ಮತ್ತು ಇನ್ನಿತರ ಎಲ್ಲರ ಹಿತಸಂವರ್ಧನೆಯ ವಿಚಾರವನ್ನು ಕಣ್ಣೆದುರಿಗಿಟ್ಟುಕೊಂಡು ನೀರಾವರಿ ಮತ್ತು ಉದ್ಯೋಗಗಳಿಗಾಗಿ ವಿದ್ಯುಚ್ಛಕ್ತಿಯ ಯೋಜನೆಯನ್ನು ಸರಕಾರ ಕೈಕೊಳ್ಳಲಿದೆ. ದಾಮೋದರ ಮೊದಲಾದ ದೊಡ್ಡ ಯೋಜನೆಗಳನ್ನು ಸಿದ್ಧಗೊಳಿಸಲಾಗಿದೆ ಎಂದರು.

ಸದ್ಯದ ಉತ್ಪಾದನೆಯ ಇಳಿತಾಯಕ್ಕೆ ಕೂಲಿಕಾರರಲ್ಲಿ ಶಿಸ್ತು ಸಡಿಲಿದ್ದೊಂದೇ ಕಾರಣವೆಂದು ಶ್ರೀ. ಕಂಬರ್ ಬ್ಯಾಚ್‌ರೆಂದುದು ಸಮರ್ಥನೀಯವಲ್ಲ. ಒಡೆಯರು ವಿಶೇಷ ಲಾಭ ಪಡೆದು ಕೂಲಿಕಾರರಿಗೆ ಅದರಲ್ಲಿ ಯಾವ ಪಾಲನ್ನೂ ಕೊಡದುದು ತಪ್ಪು. ರೈತ ಜಮೀನುದಾರರ ಸಂಬಂಧವೂ ಇದೇರೀತಿ ಕೆಟ್ಟುಹೋಗಿದೆ. ಇವುಗಳನ್ನು ನಾವೇ ಸುಧಾರಿಸಬೇಕಲ್ಲದೆ ಅನ್ಯರು ಕೈಹಾಕದಂತೆ ನೋಡಿಕೊಳ್ಳಬೇಕು. ಕೂಲಿಕಾರ ಮತ್ತು ಒಡೆಯರ ನಡುವಣ ಕಲಹವನ್ನು ಸರಕಾರ ನಿಯಮಿಸುವ ನ್ಯಾಯಮಂಡಲಗಳ ಮೂಲಕ ನಿರ್ಣಯಿಸಿಕೊಳ್ಳುವ ವ್ಯವಸ್ಥೆ ಬರಲೇಬೇಕು. ಹಿಂದುಸ್ತಾನದಲ್ಲಿ ಬಂಡವಾಳಶಾಹಿ ಬರಲಿ, ಸಾಮ್ಯವಾದ ಉದಯಿಸಲಿ — ಗ್ರಾಮ ಮತ್ತು ನಗರಗಳ ಆರ್ಥಿಕ ರಚನೆಯ ಸಮತೋಲವನ್ನು ಉಳಿಸಿಕೊಳ್ಳದಿರಲಾಗದು.

ನಿಯಂತ್ರಣಗಳ ವಿಷಯವಾಗಿ ಆಹಾರ ಮಂತ್ರಿಗಳು ಇತ್ತೀಚೆಗೆ ಸರಕಾರದ ಧೋರಣವನ್ನು ಸ್ಪಷ್ಟಮಾಡಿದ್ದಾರೆ. ಕೆಲವು ಮೂಲ ಉದ್ಯೋಗಗಳನ್ನು ರಾಷ್ಟ್ರೀಕರಣ ಮಾಡಬೇಕಾಗಬಹುದು, ಅಥವಾ ಸರಕಾರದ ಒಡೆತನದಲ್ಲಿಟ್ಟುಕೊಳ್ಳಬೇಕಾಗಬಹುದು. ಸಾರ್ವಜನಿಕ ಕಂಪನಿಗಳನ್ನು ಸ್ಥಾಪಿಸಿ ಅವುಗಳ ಮುಖಾಂತರ ಸರಕಾರವು ಕೆಲವು ಉದ್ಯೋಗಗಳನ್ನು ತನ್ನ ಅಂಕೆಯಲ್ಲಿಟ್ಟುಕೊಳ್ಳಬಹುದು. ಸರಕಾರದ ನಿಯಂತ್ರಣ ಮತ್ತು ನಿರ್ದೇಶಗಳು ಅನಿವಾರ್ಯ. ಆದರೂ ಖಾಸಗಿ ಪ್ರಯತ್ನಗಳಿಗೆ ಬೇಕಾದಷ್ಟು ಅವಕಾಶ ಉಳಿಯುತ್ತದೆ.

ಪರಕೀಯರಿಗೆ ವಿಶೇಷ ಸವಲತ್ತಿಲ್ಲ

ಹಿಂದುಸ್ತಾನದಲ್ಲಿ ಆದಷ್ಟು ಬೇಗ ಔದ್ಯೋಗಿಕ ಅಭಿವೃದ್ಧಿಯನ್ನು ಸಾಧಿಸಬೇಕಾಗಿರುವುದರಿಂದ ನಮ್ಮ ಆರ್ಥಿಕ ಸ್ವಾತಂತ್ರ್ಯವನ್ನುಳಿಸಿಕೊಂಡು ವಿದೇಶೀಯ ವರ್ತಕರ ಸಹಾಯವನ್ನೂ ಹೊರನಾಡಿನ ಯಂತ್ರಜ್ಞರ ನೆರವನ್ನೂ ತೆಗೆದುಕೊಳ್ಳಲಾಗುತ್ತದೆ — ಎಂದು ಮುಂತಾಗಿ ಪಂಡಿತರು ಹಿಂದುಸ್ತಾನದ ಭಾವೀ ಆರ್ಥಿಕ ಮತ್ತು ಔದ್ಯೋಗಿಕ ಚಟುವಟಿಕೆಗಳತ್ತ ಬೆಳಕನ್ನು ಬೀರಿದರು; ಮತ್ತು 'ಹಿಂದುಸ್ತಾನದಲ್ಲಿ ಇನ್ನು ಮೇಲೆ ವಿದೇಶೀಯ ವರ್ತಕರಿಗೆ ವಿಶೇಷ ಸವಲತ್ತುಗಳು ಸಿಕ್ಕಲಾರವು. ಆದರೆ ಮುಂಬರುವ ಕೆಲವು ವರ್ಷಗಳಲ್ಲಿ ಅವರ ವ್ಯಾಪಾರಕ್ಕೆ ಇಲ್ಲಿ ಆಸ್ಪದವಿದೆ. ಹಿಂದುಸ್ತಾನದ ಔದ್ಯೋಗಿಕ ಅಭಿವೃದ್ಧಿಯಲ್ಲಿ ಅವರ ಸಹಕಾರ ನಮಗೆ ಬೇಕು. ಈ ದೇಶದಲ್ಲಿರುವ ಬ್ರಿಟಿಶ ಮತ್ತು ಬೇರೆ ರಾಷ್ಟ್ರಗಳ ಉದ್ಯಮಿಗಳು ಇವುಗಳ ಲಾಭ ಪಡೆಯಬಹುದು. ಅವರು ಹಿಂದಿನಂತೆ ವ್ಯವಹರಿಸುವರೋ ಅಥವಾ ಅವರ ದೃಷ್ಟಿಕೋನದಲ್ಲಿ ಬದಲಾವಣೆಯಾಗುವುದೋ ನಾನು ಹೇಳಲಾರೆ. ನಮ್ಮ ಆರ್ಥಿಕ ಧೋರಣವು ವಿದೇಶೀಯ ವರ್ತಕರ ದೃಷ್ಟಿಯನ್ನು ಬದಲಿಸಿದಂತೆ ಹಿಂದೀಯ ಉದ್ಯೋಗಿಗಳ ಧೋರಣವನ್ನೂ ಪಲ್ಲಟಿಸುವುದು. ಅವರಿಬ್ಬರೂ ಸಹಕರಿಸಿ ಕಾರ್ಯ ಮಾಡಲು ಬೇಕಾದಷ್ಟು ಅವಕಾಶವಿದೆ- ಎಂದು ಪಂಡಿತರು ಭಾರತದ ಭಾವೀ ಆರ್ಥಿಕ ಧೋರಣವನ್ನು ವಿಶದಪಡಿಸಿದರು.

ರಾಜೇಂದ್ರರ ರಾಜಮಾರ್ಗ ನಿರ್ದೇಶ

ಇತ್ತೀಚೆಗೆ ನಡೆದ ಅಲಹಾಬಾದ್ ವಿಶ್ವವಿದ್ಯಾನಿಲಯದ ಪದವೀದಾನ ಸಮಾರಂಭದಲ್ಲಿ ರಾಷ್ಟ್ರಪತಿ ಡಾ- ರಾಜೇಂದ್ರ ಪ್ರಸಾದರು ಹಿಂದೀಯರ ಇಂದಿನ ದುಃಸ್ಥಿತಿಯತ್ತ ಸಭೆಯ ಲಕ್ಷ್ಯಸೆಳೆದು ಭಾರತ ಮತ್ತು ಜಗತ್ತು ಉದ್ಧಾರವಾಗಬೇಕಾಗಿದ್ದರೆ ಪದವೀಧರರಿಂದು ಭೌತಿಕವಾದ ಶರಣರಾಗದೆ ಆಧ್ಯಾತ್ಮಿಕ ಮಾರ್ಗಗಾಮಿಗಳಾಗಬೇಕೆಂದು ಮನಸೀಯವಾಗಿ ಉಪದೇಶಿಸಿದರು. ಆ ಉಪದೇಶದ ಸಾರ ಹೀಗಿದೆ:—

ಜಗತ್ತಿನ ಪಂಚಭೂತಗಳ ಮೇಲೆ ಒಂದೆ ದೇವತೆಗಳು ಅಧಿಕಾರ ನಡೆಸುತ್ತಿದ್ದರು. ಆ ಅಧಿಕಾರವಿಂದು ನರಹಸ್ತಗತವಾಗಿದೆ. ಆದರಾತನಿಂದು ತನ್ನ ಪಾವಿತ್ರ್ಯವನ್ನುಳಿಸಿಕೊಳ್ಳಲು ಮತ್ತು ತನ್ನನ್ನು ರಕ್ಷಿಸಿಕೊಳ್ಳಲು ಅಸಮರ್ಥನಾಗಿಯೇ ಉಳಿದಿದ್ದಾನೆ. ಇದೆಂತಹ ದೈವದುರ್ವಿಪಾಕ! ನಿಸರ್ಗವನ್ನು ದುರುಪಯೋಗಪಡಿಸಿಕೊಂಡು ಮಾನವನಿಂದು ಕೊಡಲಿಯ ಕಾವು ಕುಲಕ್ಕೆ ಮೃತ್ಯುವೆಂಬಂತೆ ಸಾಗಿದ್ದಾನೆ. ಇಂದು ಪ್ರಲಯದ ಲಕ್ಷಣಗಳಾದ ಯುದ್ಧ, ದ್ವಂದ್ವ, ಕ್ಷಾಮ ಡಾಮರ, ರೋಗರುಜೆ, ಉಪವಾಸ ವನವಾಸ, ಅರ್ಥಹಾನಿ ಧರ್ಮಹಾನಿ ಮುಂತಾದ ಚಂಡೀತಾಂಡವ ಪರಿಣಾಮಗಳು ಮತ್ತು ರುದ್ರಲೀಲೆಯ ದುರಂತ ನಾಟಕಗಳು ಪ್ರಾರಂಭವಾಗಿವೆ. ಅಯ್ಯೋ!

ದುರ್ಘಟನೆಗೆ ಕಾರಣ

ಇಂಥ ದುರ್ಘಟನೆ ನಡೆಯಲಿಂದು ಕಾರಣವೇನು? ಇದಕ್ಕೆ ನೀತಿ ಶಾಸ್ತ್ರಕ್ಕೂ ಭೌತಿಕಶಾಸ್ತ್ರಕ್ಕೂ ತಾಳಮೇಳವಿಲ್ಲದುದೇ ಮುಖ್ಯ ಕಾರಣ. ಈ ಕಾರಣದಿಂದಲೇ ನಮ್ಮ ಭಾರತ ವರ್ಷದ ಪ್ರಾಚೀನ ಮಹರ್ಷಿಗಳು ಆತ್ಮನಿಗ್ರಹವೇ ಮನುಷ್ಯನ ಮಹಾವಿಜಯವೆಂದು ಸಾರಿದರು. ಇದೇ ನಮ್ಮ ಪುಣ್ಯಭೂಮಿಯಲ್ಲಿ ೨ಸಾವಿರ ವರ್ಷಗಳ ಪೂರ್ವದಲ್ಲಿ ಅಶೋಕಚಕ್ರವರ್ತಿಯು ತಾನು ಗೆದ್ದುದನ್ನೆಲ್ಲ ತ್ಯಾಗಮಾಡಿ ಧರ್ಮಕ್ಕೆ ಮಾತ್ರ ಶರಣಾದನು. ಇಂದು ಮಹಾತ್ಮಾ ಗಾಂಧಿಯವರಾದರೂ ಅದೇ ತ್ಯಾಗದ ಮತ್ತು ಧರ್ಮದ ಮಾರ್ಗವನ್ನೇ ಪುನಃ ಜಗತ್ತಿಗೆ ನಿರ್ದೇಶಿಸಿದ್ದಾರೆ. ಈ ಧರ್ಮಪಥ ಹಿಡಿಯದಿದ್ದರೆ ಮಾನವನ ನಾಶ ಕಟ್ಟಿಟ್ಟದ್ದು. ವ್ಯಾಪಾರ ವಾಣಿಜ್ಯಗಳ ನಿಯಂತ್ರಣ ನಿಯಮಗಳಿಗಿಂತಲೂ ಇಂದು ಜಗತ್ತಿಗೆ ನೈತಿಕ ವಿಜಯದ ಸಾಧನಗಳು ಅತ್ಯಗತ್ಯವಾದುವು. ಆಧ್ಯಾತ್ಮ, ತ್ಯಾಗ, ಆತ್ಮನಿಗ್ರಹಗಳೇ ಮಾನವನನ್ನಿಂದು ಉಳಿಸಿ ಉನ್ನತಿಯ ಮಾರ್ಗಕ್ಕೊಯ್ಯಬಲ್ಲವು.

ಮದ್ದು

'ಸರ್ವೇಜನಾಃ ಸುಖಿನೋಭವಂತು; ಸಮಸ್ತ ಸನ್ಮಂಗಳಾನಿಭವಂತು' ಎಂಬ ನಮ್ಮ ಹಿರಿಯರ ಹಾರೈಕೆ ಪೂರ್ಣವಾಗಬೇಕಾದರೆ ಅವರು ಹೇಳಿದ ಮೇಲಿನ ಮಾರ್ಗವಲ್ಲದೆ ಗತ್ಯಂತರವಿಲ್ಲವೆಂಬುದನ್ನು ಸ್ವತಂತ್ರ ಹಿಂದುಸ್ತಾನದ ಸ್ವಾತಂತ್ರ್ಯಯುಗದ ಸಂದೇಶವೆಂಬಂತೆ ಡಾ. ರಾಜೇಂದ್ರರಿಂತು ಸಾರಿರುವುದು ನಮ್ಮ ನಾಡಿನ ಹಿರಿಮೆಗೆ ಕಿರೀಟಪ್ರಾಯವಾಗಿದೆ. ವಿಷಯಭೋಗ, ಸ್ವಾರ್ಥಲಾಲಸೆಗಳ ಸಂಧಿಯಲ್ಲಿ ಸಿಕ್ಕಿ ಸ್ವಪರ ವಿನಾಶದ ಹಾದಿಯಲ್ಲಿ ಮಾನವ ಕೋಟಿಯಿಂದು ವಿಜ್ಞಾನವನ್ನು ಬಳಸಿಕೊಂಡು ಮುಂದಡಿಯಿಡುತ್ತಿರುವುದನು ಖಂಡಿಸಿ ಹಿಂದುಸ್ತಾನದ ಇಂಥ ಹಿರಿಯ ದಾರ್ಶನಿಕ ಜ್ಞಾನಸಂಪನ್ನರಿಂದ, ಅಂಧತಮಸ್ಸಿನಲ್ಲಿರುವ ನಾಗರಿಕರನ್ನು ಬಡಿದೆಬ್ಬಿಸಲು ಇನ್ನೂ ಹೆಚ್ಚಾಗಿ ಪ್ರಯತ್ನಿಸಬೇಕಾಗಿದೆ. ನಮ್ಮ ನಾಡಿನ ತರುಣ ವಿದ್ಯಾವಂತರು ಜಗತ್ಕುಟುಂಬಿಗಳಾಗಿ ಬಾಳಿ ಸರ್ವಹಿತವನ್ನೂ ತನ್ಮೂಲಕ ಸ್ವಹಿತವನ್ನೂ ಸಾಧಿಸುವಂತೆ ಸನ್ಮಾರ್ಗ ದರ್ಶನ ಮಾಡಿಕೊಡುವ ಸದ್ಗುರುಗಳಿಂದು ಮುಂದೆ ಬರಬೇಕಾಗಿದೆ. ಪಾಶ್ಚಾತ್ಯ ನಾಗರಿಕತೆಯ ದುರ್ವ್ಯಾಮೋಹ ಪ್ರಶಮನಕ್ಕೆ ಡಾಕ್ಟರರು ಕೊಟ್ಟ ಮೊದಲ ಗುಳಿಗೆಯನ್ನಿಂದು, ಸರ್ವರೂ ಸೇವಿಸಿ ಕೃತಕೃತ್ಯರಾಗುವುದು ಕರ್ತವ್ಯ.

ಹೈದರಾಬಾದ ಸಂಸ್ಥಾನದಲ್ಲಿ ಕರ ನಿರಾಕರಣ

ಕಾಂಗ್ರೆಸ ಕ್ರಿಯಾ ಸಮಿತಿಯ ನಿರ್ಧಾರ

ಹೈದರಾಬಾದ ಸಂಸ್ಥಾನ ಕಾಂಗ್ರೆಸಿನ ಕ್ರಿಯಾಸಮಿತಿಯು ತಾ. ೧೪ರಂದು ಮುಂಬಯಿಯಲ್ಲಿ ಸೇರಿ, ಸಂಸ್ಥಾನದಲ್ಲಿಯ ಹೋರಾಟವನ್ನು - ಕರನಿರಾಕರಣ ಚಳವಳಿ ಹೂಡಿ - ಬಲಿಸಬೇಕೆಂದು ನಿರ್ಧರಿಸಿತು.

ಹಿಂದೀ ಒಕ್ಕೂಟದಲ್ಲಿ ಸೇರ್ಪಡೆ ಮತ್ತು ಹೊಣೆಗಾರ ಸರಕಾರದ ಸ್ಥಾಪನೆ ಈ ಎರಡು ಪ್ರಮುಖ ವಿಷಯಗಳಲ್ಲಿ ನಿಜಾಮರೊಡನೆ ಸಂಧಾನ ಮಾಡಿಕೊಳ್ಳತಕ್ಕದ್ದಲ್ಲವೆಂದೂ ಸಮಿತಿಯು ತೀರ್ಮಾನಿಸಿತು.

ಹೈದರಾಬಾದ ಸಂಸ್ಥಾನ ಕಾಂಗ್ರೆಸ್ಸಿನ ಅಧ್ಯಕ್ಷರಾದ ಸ್ವಾಮಿ ರಮಾನಂದ ತೀರ್ಥರು ತಾ. ೧೪ರಂದು ಭಾಷಣ ಮಾಡುತ್ತ ಹೀಗೆ ಹೇಳಿದರು:

ಹೈದರಾಬಾದವು ಭಾರತದೊಡನೆ ಯಥಾಸ್ಥಿತಿ ಒಪ್ಪಂದ ಮಾಡಿಕೊಂಡಿದ್ದರಿಂದ ಸಂಸ್ಥಾನ ಕಾಂಗ್ರೆಸು ತನ್ನ ಮೂಲ ಬೇಡಿಕೆಗಳ ಬಗೆ ನಿಜಾಮರೊಡನೆ ಯಾವದೆ ಬಗೆಯ ಒಪ್ಪಂದವನ್ನು ಹೇಗಾದರೂ ಮಾಡಿಕೊಳ್ಳಲೇಬೇಕೆಂಬ ಒತ್ತಾಯದ ಪರಿಸ್ಥಿತಿಯೇನು ಇಂದು ಇಲ್ಲ. ಹೈದರಾಬಾದು ಹಿಂದೀ ಒಕ್ಕೂಟದಲ್ಲಿ ಸೇರಬೇಕು ಮತ್ತು ಸಂಸ್ಥಾನದಲ್ಲಿ ಹೊಣೆಗಾರ ಸರಕಾರ ಸ್ಥಾಪಿಸಬೇಕು. ಅಂದರೆ ಮಾತ್ರ ಸಮಸ್ಯೆ ಬಗೆಹರಿಯುವದು.

ಹೈದರಾಬಾದ ಸಂಸ್ಥಾನದಲ್ಲೆಲ್ಲ ಇಂದು ಸೈನಿಕರ-ಪೋಲೀಸರ ಪುಂಡರ ಸ್ವೈರಾಚಾರಕ್ಕೆ ಎಣೆಯಿಲ್ಲದಾಗಿದೆ. ಹಳ್ಳಿಯ ಬಡವರನ್ನು ಮಾತ್ರವಲ್ಲ ನಿರಾಯುಧರಾದ ಶ್ರೀಮಂತರನ್ನೂ ಪರಿಪರಿಯಾಗಿ ಪೀಡಿಸಿ ಸ್ತ್ರೀಯರ ಮಾನಭಂಗ ಮಾಡುತ್ತಿದ್ದಾರೆ ಮತ್ತು ಅಪಹರಿಸಿಕೊಂಡೂ ಹೋಗುತ್ತಿದ್ದಾರೆ. ಈ ಪುಂಡಾಟಿಕೆಯನ್ನು ಎದುರಿಸಲು ಜನತೆಯನ್ನು ಹೇಗೆ ಅಣಿಮಾಡಬೇಕೆಂಬುದೇ ಮಹತ್ವದ ಪ್ರಶ್ನೆಯಾಗಿದೆ.

ಸರಕಾರದ ಈ ಅಸೀಮ ಹಿಂಸಾಚಾರವನ್ನು ಸಂಸ್ಥಾನದ ಜನತೆಯು ಅಹಿಂಸೆಯಿಂದ ಎದುರಿಸಿ ತಮ್ಮ ಹೋರಾಟ ಸಾಗಿಸುತ್ತಿರುವದಕ್ಕೆ ಅವರನ್ನು ಎಷ್ಟು ಹೊಗಳಿದರೂ ಕಡಮೆಯೇ. ಭಾರತದ ಒಕ್ಕೂಟ ಧ್ವಜವೇ ನಮ್ಮ ವಿಮೋಚನೆಯ ಪತಾಕೆ. ಈ ಧ್ವಜದ ಮರ್ಯಾದೆಗಾಗಿ ಮತ್ತು ಹೊಣೆಗಾರ ಸರಕಾರದ ಸ್ಥಾಪನೆಗಾಗಿ ಪ್ರಾಣಾರ್ಪಣೆ ಸಹ ಮಾಡಲು ನಾವು ಹಿಂದು ಮುಂದು ನೋಡುವದಿಲ್ಲ.

ಕರ್ಮವೀರ
ಹರಿಜನ ಪುರವಣಿ

ವಿಲೀನೀಕರಣ ತತ್ವ

ಇಲ್ಲಿ ಉಪಯೋಗಿಸಿದ ವಿಲೀನೀಕರಣ ಶಬ್ದಕ್ಕೆ ಕಾಯದೆಬದ್ಧವಾದ ಮಹತ್ವವೇನೂ ಇಲ್ಲ. ದಕ್ಷಿಣ ಒಕ್ಕೂಟದಲ್ಲಿಯ ಕೆಲ ಸಂಸ್ಥಾನಗಳಲ್ಲಿಯ ಪ್ರಜೆಗಳು ತಮ್ಮ ಸಂಸ್ಥಾನಗಳನ್ನು ಪ್ರಾಂತಗಳಲ್ಲಿ ಸಮಾವೇಶ ಮಾಡಿ ಬಿಡಬೇಕೆಂಬ ಉತ್ಕಟ ಇಚ್ಛೆಯನ್ನು ಪ್ರದರ್ಶಿಸುತ್ತಿರುವರೆಂದು ಸುದ್ದಿ ಹಬ್ಬಿದೆ. ಹೀಗೆ ಮಾಡುವದೆಂದರೆ ಬ್ರಿಟಿಶ ಹಿಂದುಸ್ತಾನದಲ್ಲಿ (ಬ್ರಿಟಿಶರಾಳಿಕೆಯಲ್ಲಿ ಹಾಗೆ ಕರೆಯಲಾಗುತ್ತಿದ್ದಿತು) ಅವನ್ನು ವಿಲೀನ ಮಾಡಿದಂತೆ; ಹಿಂದೀ ಸಂಸ್ಥಾನಗಳು ಮತ್ತು ಇವುಗಳಲ್ಲಿಯ ಭೇದವಿದು.

ಅಹಿಂಸೆಯ ತಳಹದಿಯ ಮೇಲೆ ಸ್ಥಾಪಿತವಾದ ಸಮಾಜದಲ್ಲಿ ಯಾವನೊಬ್ಬನು ಮತ್ತೊಬ್ಬನನ್ನು ಹಿಂದೆ ಮುಂದೆ ನೋಡದೆ ನಾಶ ಮಾಡತಕ್ಕದ್ದಲ್ಲ. ಏಕೆಂದರೆ ದುಷ್ಕೃತ್ಯ ಮಾಡುವ ಪ್ರತಿಯೊಬ್ಬನು ತನ್ನ ರೀತಿ ನೀತಿಗಳನ್ನು ಸುಧಾರಿಸಿಕೊಳ್ಳದಿದ್ದರೆ ಆತ್ಮನಾಶಹೊಂದುವದು ನಿಸ್ಸಂದೇಹ. ಅಸತ್ಯವೆಂದಿಗೂ ತಾನಾಗಿಯೆ ನಿಲ್ಲಲಾರದು. ಆದುದರಿಂದ ಸಂಸ್ಥಾನಗಳ ಆಡಳಿತವನ್ನು ಸುಧಾರಿಸುವದೆ ಕಾಂಗ್ರೆಸ್ಸಿನ ಈ ವರೆಗಿನ ಧೋರಣವಾಗಿತ್ತಲ್ಲದೆ ಅದನ್ನು ಕೊನೆಗೊಳಿಸುವದಾಗಿರಲಿಲ್ಲ; ಸಂಸ್ಥಾನಿಕರು ತಮ್ಮ ಪ್ರಜೆಗಳ ವಿಶ್ವಸ್ತರು ನಿಃಸ್ವಾರ್ಥದಲ್ಲಿ ಸೇವಕರು ಆಗಿ ವರ್ತಿಸುವಂತೆ ಅವರ ಮನವೊಲಿಸುವದೇ ಕಾಂಗ್ರೆಸ್ಸಿನ ಧೋರಣವಾಗಿತ್ತು. ತನ್ನ ಈ ಧೋರಣಕ್ಕನುಸಾರವಾಗಿಯೆ ಕಾಂಗ್ರೆಸ್ ಸರಕಾರ ಸಂಸ್ಥಾನಿಕರ ಆಡಳಿತವನ್ನು ಕೊನೆಗೊಳಿಸಿ ಹಿಂದೀ ಒಕ್ಕೂಟ ಪ್ರಾಂತಗಳಲ್ಲಿಯ ಭಾಗಗಳನ್ನಾಗಿ ಮಾರ್ಪಡಿಸಿಕೊಳ್ಳುವ ಧೋರಣವನ್ನು ವಹಿಸದೆ ಹಿಂದೀ ಒಕ್ಕೂಟದಲ್ಲಿ ಅವು ಸೇರುವಂತೆ ಪ್ರಯತ್ನಿಸಿ ಯಶಸ್ವಿಯಾದುದುಂಟು. ಆದುದರಿಂದ ವಿಲೀನೀಕರಣವು ಎರಡು ಸಂದರ್ಭಗಳಲ್ಲಿ ಮಾತ್ರ ಆಗಬಲ್ಲದು: ಮೊದಲನೆಯದಾಗಿ ಯಾವನೊಬ್ಬ ಸಂಸ್ಥಾನಿಕನ ಆಡಳಿತ ಸರಿಯಾಗಿಲ್ಲೆಂದು ಸಿದ್ಧವಾಗಿ ಅದನ್ನು ಸುಧಾರಿಸುವದು ಶಕ್ಯವಾಗಿರದಿದ್ದರೆ ಆ ಸಂಸ್ಥಾನವನ್ನು ತನ್ನ ಪ್ರಾಂತದಲ್ಲಿ ವಿಲೀನ ಮಾಡಿಕೊಳ್ಳುವದು ಇಲ್ಲವೆ ಕೂಡಿಸಿಕೊಳ್ಳುವದು ಜನತೆಯ ಹಕ್ಕಾಗಿದೆಯಲ್ಲದೆ ಕರ್ತವ್ಯವೂ ಆಗಿ ಪರಿಣಮಿಸುವದು. ಎರಡನೆಯದಾಗಿ ಸಂಸ್ಥಾನಿಕರು ಮತ್ತು ಪ್ರಜೆಗಳಿಬ್ಬರೂ ವಿಲೀನೀಕರಣವನ್ನು ಬಯಸುತ್ತಿದ್ದರೆ ಹಾಗೆ ಮಾಡಬಹುದು. ಎಲ್ಲ ಸಂಸ್ಥಾನಗಳು ಇಲ್ಲವೆ ಬಹುಸಂಖ್ಯಾಕ ಸಂಸ್ಥಾನಗಳು ಒಪ್ಪಿದ್ದರೆ ಯಾವದೊಂದು ಸಂಸ್ಥಾನವು ಇಲ್ಲವೆ ಅದರ ಪ್ರಜೆಗಳು, ಅವರೆಷ್ಟೆ ಬಲಿಷ್ಠರಿರಲಿ ಇಲ್ಲವೆ ಕನಿಷ್ಠರಿರಲಿ, ವಿಲೀನೀಕರಣವನ್ನು ಪ್ರತಿಕ್ರಿಸಬಾರದೆಂದು ಸೂಚಿಸಲಾಗುತ್ತದೆ. ನಾನು ಹಾಗೆ ಭಾವಿಸುವದಿಲ್ಲ. ಯಾವದೊಂದು ಸಂಸ್ಥಾನದಲ್ಲಿಯ ದುರಾಡಳಿತವನ್ನು ಕೊನೆಗೊಳಿಸುವದು ಉಳಿದ ಸಂಸ್ಥಾನಗಳಲ್ಲಿಯೂ ಅಷ್ಟೇ ದುರಾಡಳಿತವಿದೆಯೆನ್ನುವ ವರೆಗೆ ತಡೆಯಲ್ಪಡಬಾರದು. ಅಲ್ಲದೆ ತನ್ನ ಅಧಿಕಾರವನ್ನು ಬಿಟ್ಟುಕೊಡಬಯಸುವ ಯಾವನೊಬ್ಬ ಸಂಸ್ಥಾನಿಕನು ಉಳಿದ ಎಲ್ಲ ಸಂಸ್ಥಾನಿಕರೂ ಅದಕ್ಕೆ ಸಿದ್ಧರಾಗುವ ವರೆಗೆ ತಡೆಯತಕ್ಕದೆಂದು ಹೇಳುವದೂ ಸಮಂಜಸವಾಗಲಾರದು. ಇಂಥ ಪ್ರತಿಯೊಂದು ಪ್ರಶ್ನೆಯನ್ನು ಕೇಂದ್ರ ಸರಕಾರವು ಉಚಿತವಾದ ರೀತಿಯಲ್ಲಿ ವಿಚಾರಿಸಿ ನಿರ್ಣಯಿಸತಕ್ಕದ್ದು.

ಹೊಸದಿಲ್ಲಿ — ಮೋ. ಕ. ಗಾಂಧಿ
೧೪-೧೨-೪೭

ಈಗಲೂ ನೂಲತಕ್ಕದ್ದು

'ನಾನು ಮತ್ತು ನನ್ನ ಮನೆಯಲ್ಲಿಯ ಎಲ್ಲರೂ ಯಾವಾಗಲೂ ನೂಲು ತೆಗೆಯುತ್ತಿದ್ದು ಖಾದಿಯನ್ನೆ ಧರಿಸುತ್ತಿರುವೆವು. ಇದೀಗ ನಾವು ಸ್ವಾತಂತ್ರ್ಯವನ್ನು ಸಂಪಾದಿಸಿರುವೆವು: ಈಗಲೂ ನಾವು ನೂಲು ತೆಗೆಯತಕ್ಕದ್ದು ಮತ್ತು ಖಾದಿಯನ್ನು ಧರಿಸಬೇಕು ಎಂದು, ನೀವು ಪ್ರತಿಪಾದಿಸುವಿರೋ' ಎಂದು ಪತ್ರಿಕಾ ಲೇಖಕನೊಬ್ಬ ಕೇಳುತ್ತಾನೆ.

ಇದೊಳ್ಳೆ ವಿಚಿತ್ರ ಪ್ರಶ್ನೆ. ಆದರೂ ಅನೇಕ ಜನರ ಪ್ರಶ್ನೆಯನ್ನು ಇದು ಪ್ರತಿನಿಧಿಸುತ್ತದೆ. ಇಂಥ ಜನರು ಸ್ವರಾಜ್ಯದ ದಾರಿಯೆಂದು ನೂಲುವದನ್ನು ಮತ್ತು ಖಾದಿ ಧರಿಸುವದನ್ನು ಯಂತ್ರಗಳಂತೆ ಕೈಕೊಂಡರೆಂಬುದು ನಿಶ್ಚಿತ. ಪರದಾಸ್ಯವನ್ನು ಹರಿದೊಗೆಯುವದು ಪ್ರಥಮತಃ ಅವಶ್ಯವಾಗಿದ್ದರೂ ಸ್ವಾತಂತ್ರ್ಯವೆಂದರೆ ಅಷ್ಟೇ ಅಲ್ಲ ಎಂಬುದನ್ನು ಮಾತ್ರ ಈ ಜನರು ಮರೆಯುತ್ತಿರುವರು. ಒಂದೂ ಬಗೆಯ ಜೀವನಮಾರ್ಗವೆಂದು ಖಾದಿಯು ಸ್ಥಾನವಿದ್ದಿತು. ಈಗಲೂ ಅದೇ ಸ್ಥಾನವಿದೆ: ಅಹಿಂಸೆಯೇ ಈ ಜೀವನಮಾರ್ಗದ ತಳಹದಿ. ಖಾದಿ ಮತ್ತು ಅಹಿಂಸೆಯನ್ನು ಬಿಟ್ಟುಕೊಡುವುವೆಂದರೆ ಇಷ್ಟು ದಿನಗಳ ವರೆಗೆ ಖಾದಿಯ ರಹಸ್ಯವನ್ನೆ ಅರಿಯಲಿಲ್ಲೆಂದು ನನ್ನ ಅಭಿಪ್ರಾಯ. ನನ್ನ ಈ ಅಭಿಪ್ರಾಯ ತಪ್ಪಾಗಿರಲಿ, ಒಪ್ಪಾಗಿರಲಿ ಆ ಮಾತು ಬೇರೆ. ತಪ್ಪಿಗಾಗಿಯೊ ಅನೇಕಕಡೆ ಈ ಭ್ರಾತೃಹತ್ಯೆ ಮತ್ತು ಅರಾಜಕತೆ ತಾಂಡವನೃತ್ಯ ಮಾಡುತ್ತಿದೆ. ಹಿಂದುಸ್ತಾನದಲ್ಲಿಯ ಹಳ್ಳಿಗಳಲ್ಲಿಯ ಜನಸಾಮಾನ್ಯರೆಲ್ಲ ಸ್ವಾತಂತ್ರ್ಯದ ಫಲ ಅನುಭವಿಸಲು ಸಿಕ್ಕಬೇಕಾದರೆ ನೂಲುವದು ಮತ್ತು ಖಾದಿ ಧಾರಣವು ಹಿಂದಿಗಿಂತ ಈಗ ಹೆಚ್ಚು ಮಹತ್ವದ್ದಾಗಿದೆಯೆಂಬಲ್ಲಿ ನನಗೆ ಸಂದೇಹವಿಲ್ಲ. ಪೃಥ್ವಿಯಲ್ಲಿಯ ಸ್ವರ್ಗವದು. ಖಾದಿಯ ಮೂಲಕವೆ, ನಾವು ಯಂತ್ರವು ಮನುಷ್ಯನ ಮೇಲೆ ನಡೆಸುತ್ತಿರುವ ಆಧಿಪತ್ಯವನ್ನು ತಡೆದು ಮನುಷ್ಯನು ಯಂತ್ರದ ಮೇಲೆಯೇ ಪ್ರಭುತ್ವ ನಡೆಸುವಂತೆ ಪ್ರಯತ್ನಿಸುತ್ತಿದ್ದೇವೆ. ಸ್ತ್ರೀ ಪುರುಷರಲ್ಲಿ ಇಂದು ಕಾಣುತ್ತಿರುವ ತೀವ್ರ ಅಸಮಾನತೆಯನ್ನು ದೂರನೂಗಿದ ಖಾದಿಯು ಮೂಲಕವೆ ಎಲ್ಲೆಲ್ಲಿಯೂ ಸಮಾನತೆಯನ್ನು ಸ್ಥಾಪಿಸಲು …

ಆಳವಾದ ಬೇರುಗಳು

ಸ್ವಾತಂತ್ರ್ಯ ಸಿಕ್ಕ ಬಳಿಕವೂ ನಗರ ವಾಸಿಗಳ ಮೇಲಿನ ಆಂಗ್ಲ ಭಾಷೆಯ ವರ್ಚಸ್ಸು ಬಹಳ ಮಟ್ಟಿಗೆ ಕಡಮೆಯಾದಂತೆ ಕಾಣುವುದಿಲ್ಲ ಎಂದು ಪತ್ರಿಕಾ ಲೇಖಕನೊಬ್ಬ ಬರೆಯುತ್ತಾನೆ. ಅವನು ಮುಂಬಯಿಯಲ್ಲಿ ಏರ್ಪಡಿಸಲ್ಪಟ್ಟ ಉದ್ಯೋಗಿಕ ಮತ್ತು ಒಕ್ಕಲತನ ಪ್ರದರ್ಶನವನ್ನು ಅದಕ್ಕೆ ಸಾಕ್ಷಿಯೆಂದು ನಿದರ್ಶಿಸುತ್ತಾನೆ. ಆ ಪ್ರದರ್ಶನದ ಉದ್ಘಾಟಕರ ಭಾಷಣವು ಆಂಗ್ಲ ಭಾಷೆಯಲ್ಲಿ ನಡೆಯಿತು. ಹೆಸರು ಹಲಗೆಗಳೆಲ್ಲ ಆಂಗ್ಲ ಭಾಷೆಯಲ್ಲಿಯೆ ಇದ್ದವು. ಪತ್ರವ್ಯವಹಾರವೆಲ್ಲ ಬಹುಮಟ್ಟಿಗೆ ಆಂಗ್ಲ ಭಾಷೆಯಲ್ಲಿಯೆ ನಡೆಯಿತು. ಸೀದಾ ಕಾರ್ಡುಗಳೆಲ್ಲ ಆಂಗ್ಲ ಭಾಷೆಯಲ್ಲಿಯೆ ಇವೆ. ಆಂಗ್ಲ ಭಾಷೆ ಬಾರದ ಜನಸಾಮಾನ್ಯಕ್ಕೆಲ್ಲ ಇದರಿಂದ ಬಹಳ ತೊಂದರೆ. ಬಡ ಜನಸಾಮಾನ್ಯದತ್ತ ಸ್ವಲ್ಪವೂ ಗಮನಿಸದೆ ನಮ್ಮ ಧುರೀಣರೆಲ್ಲ ತಮ್ಮ ಮಹತ್ವದ ಘೋಷಣಗಳು ಆಂಗ್ಲ ಭಾಷೆಯಲ್ಲಿಯೆ ಸಾರಲ್ಪಡಬೇಕೆಂದು ಭಾವಿಸುತ್ತಾರೆ ಎಂದೂ ಆ ಲೇಖಕನು ಬರೆಯುತ್ತಾನೆ.

ಇದೊಂದು ನ್ಯಾಯ್ಯವಾದ ತಕರಾರು. ಕೂಡಲೆ ಇದನ್ನು ಹೋಗಲಾಡಿಸತಕ್ಕದ್ದು. ಈ ಮಹತ್ವದ ವಿಷಯದಲ್ಲಿ ಸುಧಾರಣೆಯಾಗಿ ಪ್ರತ್ಯಕ್ಷ ಬದಲಾವಣೆಯಾಗಬೇಕಾದರೆ ಈಗಿದ್ದ ಅನಿಷ್ಟ ಅನಾಸ್ಥೆಯನ್ನು ಬಿಟ್ಟುಗೊಡಲಿಕ್ಕೆ ಬೇಕು.

ಹೊಸದಿಲ್ಲಿ — ಮೋ. ಕ. ಗಾಂಧಿ
೧೦—೧೧—೪೭

ನಾವು ಹೆಣಗುತ್ತಿದ್ದೆವು. ಒಂಬತ್ತು ಪರಿಶ್ರಮದ ಮೇಲೆ ಅವಾಸ್ತವವಾಗಿ ನಡೆಸಿದ ಪ್ರಶ್ನವನ್ನು ಹೋಗಲಾಡಿಸಿ ಅದು ಪರಿಶ್ರಮಕ್ಕೆ ಅಧೀನವಾಗಿ ನಡೆಯುವಂತೆಯೂ ನಾವು ಹೆಣಗುತ್ತಿದ್ದೆವು. ಆದುದರಿಂದ ಹಿಂದುಸ್ತಾನದಲ್ಲಿ ಕಳೆದ ಮೂವತ್ತು ವರುಷಗಳಿಂದ ನಾವು ಮಾಡಿದ ಪ್ರಯತ್ನವೆಲ್ಲ ಒಪ್ಪದೆಯಾಗಿರದಿದ್ದರೆ ಮೊದಲಿಗಿಂತ ಹೆಚ್ಚು ಉತ್ಸಾಹದಿಂದ ಮತ್ತು ಹೆಚ್ಚು ಹೆಚ್ಚು ಜಾಣತನದಿಂದ ನೂಲುವದನ್ನು ಮತ್ತು ಅದಕ್ಕೆ ಅನುಸಂಗಿಕವಾದ ಎಲ್ಲ ಕೆಲಸವನ್ನು ನಾವು ಮುಂದಕ್ಕೆ ಸಾಗಿಸಲಿಕ್ಕೆ ಬೇಕು.

ಹೊಸದಿಲ್ಲಿ — ಮೋ. ಕ. ಗಾಂಧಿ
೧೩—೧೨—೪೭

ಪ್ರಾಂತಿಕ ಗವ್ಹರ್ನರರು ಯಾರಿರಬೇಕು?

ಕೆಳಗಣದು ಪ್ರಿನ್ಸಿಪಾಲ ಶ್ರೀಮನ್ ನಾರಾಯಣ ಅಗರವಾಲರು ವರ್ಧಾದಿಂದ ಹಿಂದುಸ್ತಾನಿಯಲ್ಲಿ ಬರೆದ ಪತ್ರದ ಭಾಷಾಂತರ.

"ಪರಿಯಸ್ಥ ರೂಪವಾದ ಪದ್ಧತಿಯು ಬರುವಂತೆ ಪ್ರಾಂತಿಕ ಗವ್ಹರ್ನರರನ್ನು ಆರಿಸುವ ಬಗ್ಗೆ ಘಟನಾ ಸಮಿತಿಯು ರಚಿಸಲಿರುವ ಘಟನೆಯಲ್ಲಿ ಸೌಕರ್ಯವಾಗಲಿದೆ. ಇದರಿಂದ, ಕಾಂಗ್ರೆಸ ಪಾರ್ಲಿಮೆಂಟರೀ ಬೋರ್ಡಿನವರು ನಾಮಕರಣ ಮಾಡಿದವರೇ ಆರಿಸಲ್ಪಡುವರೆಂದು ವ್ಯಕ್ತವಾಗುತ್ತದೆ. ಪ್ರಾಂತದ ಮುಖ್ಯ ಮಂತ್ರಿಯು ಕೂಡ ಕಾಂಗ್ರೆಸ ಪಕ್ಷದವನೇ ಇರುವನು. ಆದರೆ ಪ್ರಾಂತಿಕ ಗವ್ಹರ್ನರನು ಮಾತ್ರ ಸ್ವಾಭಾವಿಕವಾಗಿ ಪಕ್ಷಾತೀತನಿರುವದು ಮತ್ತು ಆಯಾ ಪ್ರಾಂತಗಳ ರಾಜಕಾರಣದಿಂದ ದೂರಿರುವದು ಆಗತ್ಯವೆಂದು ಮೇಲ್ನೋಟಕ್ಕೆ ತೋರುವದು. ಈ ಗವ್ಹರ್ನರನು ಮುಖ್ಯ ಮಂತ್ರಿಯ ಪ್ರಭಾವಕ್ಕಾಗಲೀ ಅಥವಾ ತನ್ನ ಮತ್ತು ಮುಖ್ಯ ಮಂತ್ರಿಯ ನಡುವಣ ತಿಕ್ಕಾಟಿಕ್ಕಾಗಲೀ ಒಳಪಡದಂತವನೇ ಇರಬೇಕು.

"ನನ್ನ ಮತ ಕೇಳುವದಾದರೆ ಗವರ್ನರನ ಆವಶ್ಯಕತೆಯೇ ಇಲ್ಲ. ಮುಖ್ಯ ಮಂತ್ರಿಯೇ ಗವ್ಹರ್ನರನ ಕಾರ್ಯವಹಿಸಿ ತಿಂಗಳೊಂದಕ್ಕೆ ೫,೫೦೦ ರೂಪಾಯಿಗಳ ವರೆಗೆ ವೇತನ ಹೊಂದಬಹುದು. ಇದರಿಂದ ಕೆಲಸವಿಲ್ಲದೆ ಗವ್ಹರ್ನರನಿಗೆ ಕೊಡಬೇಕಾದ ವ್ಯರ್ಥ ವ್ಯಯ ತಪ್ಪುವದು. ಇದಲ್ಲದೆ ಪ್ರಾಂತಿಕ ಗವ್ಹರ್ನರನಾದವನೆಂದೂ ಅದೇ ಪ್ರಾಂತದ ವನಾಗಿರಬಾರದು.

ಇದರಿಂದ ಬಹುಸಂಖ್ಯಾಕ ಪಕ್ಷದ ಜನರ ಮತಗಣನೆಯ ತೊಂದರೆಯೂ ಪೆಚ್ಚುವೂ ತಪ್ಪುತ್ತದೆ. ಒಕ್ಕೂಟದ ಅಧ್ಯಕ್ಷನೇ ಮೇಲ್ಮಾಣಿಸಿದ ಅರ್ಹತೆಯುಳ್ಳವರನ್ನು ಗವ್ಹರ್ನರರನ್ನಾಗಿ ಆಯ್ದುಕೊಳ್ಳುವದು ಯುಕ್ತವೂ ಒಳ್ಳೆಯದೂ ಆಗಲಿಕ್ಕಿಲ್ಲವೆ? ಇಂತಹ ಗವ್ಹರ್ನರರು ನಿಷ್ಪಕ್ಷಯವಾಗಿಯೂ ತಾವು ಆಳುವ ಪ್ರಾಂತಗಳಲ್ಲಿಯ ಸಾರ್ವಜನಿಕ ಜೀವನದ ಮಟ್ಟವನ್ನು ಎತ್ತರಿಸಬಲ್ಲರು. ಇಂದಿರುವ ಗವ್ಹರ್ನರರು ಒಕ್ಕೂಟದ ಕೇಂದ್ರ ಮಂತ್ರಿಮಂಡಲದಿಂದ ಮೇಲ್ಮಾಣಿಸಿದ ತತ್ವಕ್ಕನುಸರಿಸಿ ನಿಯೋಜಿತರಾಗಿರುವದರಿಂದ ಆಯಾ ಪ್ರಾಂತಗಳಲ್ಲಿ ಅವರ ಪ್ರಭಾವವು ಒಳ್ಳೆ ಸಮಾಧಾನಕರವಾಗಿರುವದೆಂಬ ಮಾತು ಗಮನಾರ್ಹವಾಗಿದೆ. ಮುಂಬರುವ ಘಟನೆಗನುಸಾರವಾಗಿ ಗವ್ಹರ್ನರರ ಆಯ್ಕೆಯಾಗುವದಾದರೆ ಅವರ ಪ್ರಭಾವವು ನಿಷ್ಪ್ರಭವಾಗುವದೆಂದು ನನಗೆ ಭಯವೆನಿಸುತ್ತದೆ.

"ಅಲ್ಲದೆ, ನಾಳಿನ ಘಟನೆಯ ಮುಂಗುರುಹುಗಳಿಂದ ಗ್ರಾಮ ಪಂಚಾಯತಿಗೆ ಪ್ರಾಧಾನ್ಯವಿಲ್ಲದ ವಿಷಯ ತೋರಿಬರುತ್ತದೆ. ಗ್ರಾಮ ಪಂಚಾಯತಿಗಳು ಪ್ರಗತಿಶೀಲ ವಿಕೇಂದ್ರೀಕರಣಕ್ಕೆ ಮುಖ್ಯ ತಳಹದಿ ಎಂಬ ಮಾತಿಗಿಂತ ಕೇಂದ್ರೀಕರಣದ ಹಳೆಯ ಚಾಲನೆಯೇ ಒದೆದು ಕಾಣುವದು. ನಿರ್ದೇಶ ಯೋಗ್ಯವಾದ ಇನ್ನೂ ಕೆಲವು ದೋಷಗಳುಂಟು. ಆದರೆ ನನ್ನ ಸುರಿತ ಧುರೀಣರ ವಿಷಯದಲ್ಲಿ ಕೂಲಂಕಷವಾದ ಟೀಕೆ ನಡೆಸಲು ನನಗೆ ಇಚ್ಛೆಯೂ ಇಲ್ಲ, ಆ ಅಧಿಕಾರವೂ ಇಲ್ಲ. ನನಗೆ ಕಂಡುಬಂದ ಕೆಲವು ಲೋಪದೋಷಗಳನ್ನು ನಿಮ್ಮ ಗಮನಕ್ಕೆ ತಂದು ಈ ಬಗೆಗೆ ನಿಮ್ಮ ಮಾರ್ಗದರ್ಶನ ಕೋರುವ ಸಾಹಸ ಮಾಡಿದ್ದೇನೆ ಅಷ್ಟೇ."

ಪ್ರಿನ್ಸಿಪಾಲ ಅಗರವಾಲರು ಪ್ರಾಂತಿಕ ಗವ್ಹರ್ನರರ ನೇಮಕದ ಬಗೆಗೆ ಸೂಚಿಸಿದ ವಾದ ಸರಣಿಯನ್ನು ಸಮರ್ಥಿಸಲು ಸಾಕಷ್ಟು ಕಾರಣಗಳಿವೆ. ಘಟನಾ ಸಮಿತಿಯಲ್ಲಿ ನಡೆದುದನ್ನೆಲ್ಲ ನಾನು ಜಾಗ್ರತೆಯಿಂದ ತಿಳಿದುಕೊಂಡಿಲ್ಲವೆಂಬುದನ್ನು ನಾನು ಒಪ್ಪಲೇಬೇಕು. … ಆದರೆ ಇದನ್ನು … ಪರಿಶೀಲಿಸುವುದಾದರೆ ಈ ಟೀಕೆ ಯೋಗ್ಯವೆನ್ನಿಸುತ್ತದೆ. … ನಾನು ಹೀಗೆ ಹೇಳಬಯಸುತ್ತೇನೆ. … ಪ್ರಾಂತಿಕ ಗವ್ಹರ್ನರರನ್ನು ನಿಯಮಿಸದೆ ಮುಖ್ಯ ಮಂತ್ರಿಗಳಿಗೇ ಆ ಕಾರ್ಯಭಾರ ಒಪ್ಪಿಸಬೇಕೆ …

… ಮುಂಬರುವ ಘಟನೆಯಲ್ಲಿ ಗ್ರಾಮ ಪಂಚಾಯತಿಯ ಬಗೆಗೆ ಮತ್ತು ಅಧಿಕಾರ ವಿಕೇಂದ್ರೀಕರಣದ ಬಗೆಗೆ ಯಾವುದೇ ಪ್ರಕಾರದ ನಿರ್ದೇಶನವಿಲ್ಲವೆಂಬುದಾಗಿ ಪ್ರಿನ್ಸಿಪಾಲ ಅಗರವಾಲರು ಹೇಳುತ್ತಾರೆ. … ಗ್ರಾಮ ಪಂಚಾಯತಿಗೆ ಅಧಿಕಾರ … ಜನತೆಯ … ಸಮಾಜ ನೀತಿಯ ದೃಷ್ಟಿ … ಹೀಗೆ ಹೇಳುತ್ತಿರುವೆ.

ಹೊಸದಿಲ್ಲಿ ೧೧—೧೨—೧೯೪೭

ಮೋ. ಕ. ಗಾಂಧಿ

ನಮ್ಮ ರೇಲ್ವೆಗಳನ್ನು ಪ್ರಜಾತಂತ್ರಕ್ಕೊಳಪಡಿಸಿರಿ

ತನ್ನ … ಜನಸಾಮಾನ್ಯದ … ನಮ್ಮ ರೇಲ್ವೆಗಳು … (ಮೇರಿಕ್ಯಾಪಾರ…) … ಮೂರನೆ ವರ್ಗದ ಪ್ರವಾಸಿಕರು ಹಿಂದುಸ್ತಾನದಲ್ಲಿಯ … ಪ್ರವಾಸಿಗಳಿಗೆ … ಮೂರನೆವರ್ಗದ ಪ್ರವಾಸಿಕರಿಗೆ … ಅಗ ಇಂಗ್ಲಂಡಿನಲ್ಲಿ ರೇಲ್ವೆ ಪ್ರವಾಸದಲ್ಲಿಯ ಸಮಾನತೆಯ … ಅಂಗೀಕರಿಸಲಾಯಿತು. … ಮೂರನೆವರ್ಗದ … ವರ್ಗಕ್ಕೆ … ಗಳುಳ್ಳವಾಗಿವೆ.

ನಮ್ಮ ರೇಲ್ವೆ ಮಂತ್ರಿಯು … ಎಂಬುದು … ಮೂರನೆ ವರ್ಗದ … ಸಾಧ್ಯವಾದಷ್ಟು … ಕೊಡುವದು ಶಕ್ಯವಾಗಲಿಕ್ಕಿಲ್ಲವೆ?

ಡಿ. ಜಿ. …

ಗಾಂಧೀಜಿಯ ಪ್ರಾರ್ಥನೋತ್ತರ ಭಾಷಣಗಳು

ಬಿರ್ಲಾಭವನ, ಹೊಸದಿಲ್ಲಿ ೭-೧೨-೪೭

ಅಪಹೃತ ಸ್ತ್ರೀಯರು

ಪ್ರಾರ್ಥನೋತ್ತರ ಭಾಷಣದಲ್ಲಿ ಗಾಂಧೀಜಿ ಅಪಹೃತ ಸ್ತ್ರೀಯರ ವಿಷಯವನ್ನು ಉಲ್ಲೇಖಿಸಿದರು. ಒಕ್ಕೂಟದಲ್ಲಿಯ ಕೆಲ ಹಿಂದೂ ಸ್ತ್ರೀ ಕಾರ್ಯಕರ್ತರು ಮುಸಲ್ಮಾನ ಸ್ತ್ರೀಯರೊಡಗೂಡಿ ಲಾಹೋರಿನಲ್ಲಿಯ ಪರಿಷತ್ತಿನಲ್ಲಿ ಉಪಸ್ಥಿತರಾಗಲು ಹೋಗಿದ್ದಾರೆ. ರಾಜಾ ಗಜನಫರ ಅಲ್ಲಿ ಮತ್ತು ಉಳಿದವರು ಅಲ್ಲಿ ಉಪಸ್ಥಿತರಾಗಿದ್ದರು. ಪಾಕಿಸ್ತಾನದಲ್ಲಿ ಸುಮಾರು ೨೫೦೦೦ ಹಿಂದು ಸಿಖ ಸ್ತ್ರೀಯರನ್ನು ಅಪಹರಿಸಲಾಗಿದೆ ಮತ್ತು ಪೂರ್ವ ಪಂಜಾಬದಲ್ಲಿ ೧೨೦೦೦ ಮುಸಲ್ಮಾನ ಸ್ತ್ರೀಯರನ್ನು ಅಪಹರಿಸಲಾಗಿದೆಯೆಂದು ಹೇಳಲಾಗುತ್ತದೆ. ಈ ಅಂಕೆ ಇಷ್ಟು ಹೆಚ್ಚಿಗೆ ಇಲ್ಲವೆಂದು ಕೆಲವರು ಹೇಳುತಿರುವರು. ಆದರೆ ತಮ್ಮ ಪಟ್ಟಿಗೆ ಒಂದೇ ಒಂದು ಅಪಹಾರದ ಸಂದರ್ಭವೂ ಅನಿಷ್ಟವೆಂದು ಗಾಂಧೀಜಿ ಹೇಳಿದರು. ಮನುಷ್ಯ ಇಷ್ಟು ಅಧಃಪತನದಲ್ಲಿ ಬೀಳುವದೆಂತು? ೧೨೦೦೦ ಕನಿಷ್ಟ ಅಂಕೆ ಯಾವ ಪ್ರಾಂತದಲ್ಲಿಯೂ ಬಹಳ ಹೆಚ್ಚು. ಈ ಎಲ್ಲ ಅಪಹೃತ ಸ್ತ್ರೀಯರನ್ನು ಬಿಡಿಸಿ ಅವರವರ ಕುಟುಂಬದವರಿಗೆ ಒಪ್ಪಿಸಬೇಕೆಂದು ಪರಿಷತ್ತಿನಲ್ಲಿ ನಿರ್ಧರಿಸಲಾಯಿತು. ಈ ಕೃತ್ಯದಿಂದ ಎರಡೂ ಸಾಮಂತ ರಾಷ್ಟ್ರಗಳು ತಮ್ಮ ಮೋರೆಗೆ ಕಪ್ಪು ಬಡಿದುಕೊಂಡಿವೆಂದು ರಾಜಾ ಗಜನಫರ ಅಲ್ಲಿಯವರು ಹೇಳಿದರು. ಯಾರು ಹೆಚ್ಚು ಕೆಡಕು ಮಾಡಿದರು ಯಾರು ಮೊದಲು ಪ್ರಾರಂಭಮಾಡಿದರು ಎಂಬುದು ಎರಡೂ ಪಕ್ಷಗಳು ಅಪಹೃತ ಸ್ತ್ರೀಯರ ಬಿಡುಗಡೆ ಮಾಡಬೇಕೆಂಬುದನ್ನು ಒಪ್ಪಿದಾಗ ಪ್ರಸ್ತುತವಲ್ಲ. ಈ ಅಪಾಯವನ್ನು ಸರಿಪಡಿಸುವದು ಹೇಗೆ ಎಂಬುದೆ ಹೆಚ್ಚು ಮಹತ್ವದ್ದಾಗಿದೆ. ಶ್ರೀಮತಿ ರಾಮೇಶ್ವರಿ ನೆಹರು ಮತ್ತು ಶ್ರೀಮತಿ ಮೃದುಲಾಸಾರಾಭಾಯಿಯವರು ಗಾಂಧೀಜಿಗೆ ಪರಿಷತ್ತಿನಲ್ಲಿಯ ಸಂಗತಿಗಳ ಸಾರವನ್ನು ತಿಳಿಸಿದ್ದುಂಟು. ಕೆಲ ಹೆಣ್ಣುಮಕ್ಕಳು ಪಾಕಿಸ್ತಾನಕ್ಕೆ, ಕೆಲವರು ಪೂರ್ವ ಪಂಜಾಬಿಗೆ ಹೋಗಿ ಪೊಲೀಸ ಮತ್ತು ಸೈನಿಕರ ಸಹಾಯದಿಂದ ಈ ಬಿಡುಗಡೆಯ ಕಾರ್ಯವನ್ನು ನಡೆಸಬೇಕೆಂದು ಕೆಲವರು ಸೂಚಿಸಿದರು. ಗಾಂಧೀಜಿ ಅಭಿಪ್ರಾಯದಂತೆ ಈ ಮಾರ್ಗವು ಯಶಸ್ವಿಯಾಗಲಾರದು. ಕೆಲ ಸ್ಥಳಗಳಲ್ಲಿ ಕೆಲ ಅಪಹೃತ ಸ್ತ್ರೀಯರು ಮರಳಿ ಬರಲು ಒಪ್ಪುವದಿಲ್ಲೆಂದು ಹೇಳಲಾಗುತ್ತದೆ. ಅವರು ಧರ್ಮತ್ಯಾಗಮಾಡಿ ಲಗ್ನ ಮಾಡಿಕೊಂಡಿರುವರಂತೆ ಇದರಲ್ಲಿ ತಮ್ಮ ವಿಶ್ವಾಸವಿಲ್ಲೆಂದು ಗಾಂಧೀಜಿ ಹೇಳಿದರು. ಇಂಥ ಮದುವೆಗಳು ಮತ್ತು ಇಂಥ ಧರ್ಮಾಂತರಗಳು ಅಕ್ರಮ ಮತ್ತು ಧರ್ಮದೆಗೆ ವಿರುದ್ಧವಾದವುಗಳೆಂದು ತಿಳಿಯಲ್ಪಡಬೇಕು. ಈ ಸ್ತ್ರೀಯರಲ್ಲಿ ಪ್ರತಿಯೊಬ್ಬಳು ಅವಳ ಕುಟುಂಬಕ್ಕೆ ಮರಳಿ ದೊರೆಯುವಂತೆ ನೋಡಿಕೊಳ್ಳುವದು ಎರಡೂ ಸರಕಾರಗಳ ಕರ್ತವ್ಯವಾಗಿದೆ. ಆಯಾ ಕುಟುಂಬದವರು ಹೆಚ್ಚು ಸಂತೋಷದಿಂದ ಅವರನ್ನು ಸ್ವೀಕರಿಸಬೇಕು. ಪಾಪಿಗಳ ಕೈಯಲ್ಲಿ ಸಿಕ್ಕು ಬಿದ್ದದ್ದರಿಂದ ಅವರನ್ನು ಛಳಿಸುವದೆಂದರೆ ಅಕ್ಷಮ್ಯ ಈ ಕ್ರೌರ್ಯ. ೩೫೦೦೦ ಸ್ತ್ರೀಯರು ಸರ್ವಸಾಧಾರಣ ಅಷ್ಟೇ ಸಂಖ್ಯೆಯಿಂದ ಅಪಹರಿಸಲ್ಪಟ್ಟಿರಲಿಕ್ಕೆ ಬೇಕು. ಸಜ್ಜನರೆಲ್ಲರೂ ಗುಂಡರೆ ಆಗಿದ್ದರೆ? ಗಾಂಧೀಜಿ ಒಪ್ಪಲು ಊಹೆಗೆ ಒಪ್ಪಲಿಲ್ಲ. ಸಂಭಾವಿತರಂತೆಯೆ ಸಂಘದಲ್ಲಿ ನಿಂತು ಆವರೆಲ್ಲ ಕಲಂಕಿತರಾದರು. ಅವರು ಸಾರಾಸಗಟಾಗಿ ವಿವೇಕವನ್ನು ಕಳೆದುಕೊಂಡಿದ್ದರು. ಅಪಹೃತ ಸ್ತ್ರೀಯರ ಬಿಡುಗಡೆಯ ಬಗ್ಗೆ ಸಾರ್ವಜನಿಕ ಅಭಿಪ್ರಾಯವನ್ನು ಬಲಪಡಿಸಲಿಕ್ಕೆ ಬೇಕು. ಎರಡೂ ಸರಕಾರಗಳು ಇವರ ಬಿಡುಗಡೆಗಾಗಿ ತಮ್ಮ ಸರ್ವಸ್ವವನ್ನು ಪಣಕ್ಕೆ ಹಚ್ಚಬೇಕು. ಲಕ್ಷ ಗಟ್ಟಲೆ ಉಳಿದ ವ್ಯಕ್ತಿಗಳ ಇಲ್ಲವೆ ಸಂಸ್ಥೆಗಳ ಸಹಾಯವನ್ನು ಕೋರಬಹುದು. ಆದರೆ ಈ ಕಾರ್ಯ ಇಷ್ಟೊಂದು ದೊಡ್ಡದಿದ್ದು ಸರಕಾರ ಹೊರತು ಬೇರೆ ಯಾರೂ ಇದನ್ನು ಮಾಡಲಾರರು.

ಬಿರ್ಲಾಭವನ, ಹೊಸದಿಲ್ಲಿ, ೮-೧೨-೪೭

ಮುಸಲ್ಮಾನ ಸಮಾಜದ ಎಚ್ಚರಿಕೆ

ಮುಸಲ್ಮಾನ ಸಮಾಜವು-ಮುಸ್ಲಿಮರು ಒಂದು ರಾಷ್ಟ್ರವಾಗಲಿ ತದಿತರರಿಂದಾಗಲಿ ಹೇಳಿಕೆಗಳನ್ನು ನಂಬಬಾರದು ಮತ್ತು ಅದರ ಆಧಾರದ ಮೇಲೆ ನಡೆದುಕೊಳ್ಳಬಾರದು-ಎಂದು ನನಗೆ ಎಚ್ಚರಿಕೆ ಕೊಟ್ಟಿದೆ. ಉತ್ತಮ ಮಾರ್ಗವೆಂದರೆ ಸರಿಯಾಗಿ ಅನುಸರಿಸ ಯುಕ್ತವೆಂದು ತೋರಿದಂತೆ ನಡೆದುಕೊಳ್ಳುವುದು. ಮತ್ತೂ ಮುಂದೆ ಹೋಗಿ ಆ ಸಮಾಜವು, ನಾನು ಸ್ವತಃ ಕಾಶ್ಮೀರಕ್ಕೆ ಹೋಗಿ ಅಲ್ಲಿಯ ಸಂಗತಿಗಳನ್ನು ಕಣ್ಣಾರೆ ಕಂಡುಕೊಂಡು ಬರಬೇಕೆಂದು ಹೇಳಿದೆ. ನಾನು ಆಗಲೆ ಹೇಳಿದಂತೆ ಇಂದು ನಾನದನ್ನು ಮಾಡಲಾರೆ. ದಿಲ್ಲಿ ಮತ್ತು ಅದರ ಸುತ್ತುಮುತ್ತ ನಾನು ಮಾಡಬೇಕಾದ ಕರ್ತವ್ಯಕ್ಕೆ ಅಣಿಯಾಗಬೇಕಾಗಿದೆ. ದೂರು ಕೊಟ್ಟ ಪಕ್ಷದಿಂದ ನಾನು ದೂರವೇ ನಿಂತಿರುವೆನೆಂಬುದನ್ನು ನಾನು ತಳೆದ ಸ್ನೇಹ ಪ್ರವೃತ್ತಿಯಲ್ಲಿ ಈ ಉಪದೇಶಕರು ತಿಳಿಯಲಾರದಾದರು. ಸತ್ಯಕ್ಕಾಗಿ ಸತ್ಯಾನ್ವೇಷಣ ಬುದ್ಧಿಯಿದ್ದಲ್ಲಿ ಫಲಿತಾಂಶ ಸುಖಕರವಾಗಿಯೇ ಇರುತ್ತದೆ. ಇದು ನನಗೆ ಅನೇಕ ನಿದರ್ಶನಗಳಿಂದ ತಿಳಿದು ಬಂದಿದೆ. ಇದೇ ನಾವು ಕಲಿಯತಕ್ಕ ನೀತಿ. ಅಂತಹ ಅನ್ವೇಷಣದಲ್ಲಿ ಸಹನೆ ಮತ್ತು ಸತತೋದ್ಯಮ ಅತ್ಯವಶ್ಯಕ.

ಸಿಂಧದಿಂದ ಖೇದಕರ ಪತ್ರ

ಖೇದಕರಪತ್ರಗಳು ಸಿಂಧದಿಂದ ಬರುತ್ತಲೇ ಇವೆ. ಇತ್ತೀಚಿನದು ಕರಾಚಿಯಿಂದ ಬಂದುದು. ಅಲ್ಲಿ ಕೊಲೆಯೆಂಬುದಿಲ್ಲ. ಆದರೆ ಹಿಂದುಗಳಿಗೆ ಸ್ವಾಭಿಮಾನಪೂರ್ಣ ಜೀವನ ನಡೆಸಲು ಸಾಧ್ಯವೇ ಇಲ್ಲ ಎಂದು ಅದರಲ್ಲಿ ಹೇಳಿದೆ. ಹೀಗೆ, ಒಕ್ಕೂಟದ ಮುಸಲ್ಮಾನರು ಬೇಕಾದಾಗ ನಿಮ್ಮ ಮನೆಗೆ ನುಗ್ಗಿ ಅದನ್ನು ಆಕ್ರಮಿಸಲು ತಾವು ಬಂದಿರುವುದಾಗಿ ಶಾಂತರಾಗಿ ಸಾರುತ್ತಾರೆ. ಅವರಿಗೆ ಯಾವ ಅಧಿಕಾರವೂ ಇಲ್ಲ; ಆದರೂ ಅವರಿಗೆ ನೀವು ಅಡ್ಡಿ ಮಾಡಲಾರಿರಿ. ಅಂತಹ ಉದಾಹರಣೆಗಳು ಕಡಿಮೆಯಿಲ್ಲ. ಕೆಲತಿಂಗಳಹಿಂದಿನ ಕರಾಚಿ ಈಗ ಕನಸಿನ ಮಾತಾಗಿದೆ. ನಾನು ಪ್ರಾಮಾಣಿಕವೆಂದು ನಂಬಿರುವ ಒಂದು ದೀರ್ಘಪತ್ರದ ಸಾರವಿದು. ಇದು ಅರಾಜಕತೆಯ ಗುರುತು. ಇಂತಹ ನಡತೆಗೆ ಅಂಗುಲ ಅಂಗುಲವಾಗಿಕೊಲ್ಲುವುದು ಎನ್ನಬಹುದು. ಮತ್ತು ಅದು ಒದೇ ವೇಳೆಗೆ ಆತ್ಮವನ್ನು ಕೊಲ್ಲುತ್ತಿರುವುದು. ಈ ಕಟ್ಟುಕಾಯಿದೆಗಳಿಲ್ಲದ ನಡತೆಯನ್ನು ನಿಲ್ಲಿಸಬೇಕೆಂದು ಪಾಕಿಸ್ತಾನದ ಅಧಿಕಾರಿಗಳನ್ನು ಕೇಳಿಕೊಳ್ಳುತ್ತೇನೆ. ಇದೊಂದು ಅಪಥ್ಯಮೂಲಿಕೆ, ಇದನ್ನು ಎಷ್ಟುಬೇಗ ಕಿತ್ತೊಗೆದರೆ ಅಷ್ಟು ಒಳ್ಳೆಯದು.

ಪುನಃ ನಿಯಂತ್ರಣ

ಸಕ್ಕರೆಯ ಮೇಲಿನ ನಿಯಂತ್ರಣಹೋಯಿತು. ಧಾನ್ಯ, ಬೇಳೆ, ಬಟ್ಟೆಗಳ ಮೇಲಿನ ನಿಯಂತ್ರಣಗಳೂ ಹೋಗಲಿವೆ. ಒಂದೇ ಸಲಕ್ಕೆ ದರ ಇಳಿಸುವುದು ನಿಯಂತ್ರಣೋನ್ಮೂಲನದ ಗುರಿಯಲ್ಲ. ಮೊದಲಿದ್ದ ಜೀವನ ಸ್ಥಿತಿಗೆ ಬರುವದೇ ಅದರ ಉದ್ದೇಶ. ಒತ್ತಾಯದಿಂದ ಹೇರಿದ ನಿಯಂತ್ರಣ ಯಾವಾಗಲೂ ಕೆಟ್ಟುದು. ನಾವು ಕೋಟಿಗಟ್ಟಲೆಯಲ್ಲಿ ಈ ೧೯೦೦ ಮೈಲು ಉದ್ದದ ಮತ್ತು ೧೫೦೦ ಮೈಲು ಅಗಲದ ನಾಡಿನಲ್ಲಿರುವುದರಿಂದ ಅದು ಇಲ್ಲಿ ಮತ್ತೂ ಕೆಟ್ಟದ್ದಾಗಿ ಪರಿಣಮಿಸಿತು. ನಾವೇನು ದಂಡಾಳುಗಳ ಜನಾಂಗದವರಲ್ಲ. ನಾವು ನಮ್ಮ ಆಹಾರವನ್ನು ನಾವೇ ಬೆಳೆಯಬಲ್ಲೆವು! ಅಗತ್ಯವಾದಷ್ಟು ಹತ್ತಿಯನ್ನು ಬೆಳೆದೇವು. ಈ ನಿಯಂತ್ರಣವನ್ನು ತೆಗೆದ ಬಳಿಕ ರಾಷ್ಟ್ರ ಸರಿಯಾಗಿ ಉಸಿರಾಡಿಸೀತು. ತಪ್ಪು ಮಾಡಲು ಅದಕ್ಕೆ ಹಕ್ಕಿದೆ. ತಪ್ಪು ಮಾಡುತ್ತ, ತಿದ್ದಿಕೊಳ್ಳುತ್ತ ಮುನ್ನಡೆಯುವುದು ಪ್ರಾಚೀನ ಪದ್ಧತಿ. ಇದೇ ಸರಿಯಾದುದು. ಒಂದು ಮಗುವನ್ನು ಹತ್ತಿ, ಉಣ್ಣೆಗಳಲ್ಲಿ ಹಾಕಿ ಆಶ್ಚರ್ಯಗೊಳಿಸಿರಿ ಇಲ್ಲವೆ ಕೊಲ್ಲಿರಿ. ಅದಕ್ಕೆ ದೃಢಾಂಗನಾಗಿ ಬೆಳೆಯಲವಕಾಶ ಕೊಡಬೇಕೆಂದಿದ್ದರೆ ನೀವು ಅದರ ಶರೀರವನ್ನು ಎಲ್ಲ ಋತುಗಳಲ್ಲೂ ಮುಚ್ಚದೆ ಇಡುವಿರಿ, ಅವನ್ನು ಎದುರಿಸುವುದು ಹೇಗೆಂಬುದನ್ನು ಅದಕ್ಕೆ ನೀವು ಕಲಿಸುವಿರಿ. ಅದೇ ಮಾರ್ಗದಿಂದ ಸಾರ್ಥಕ ಸರಕಾರವಾವುದೇ ಆಗಲಿ, ಕೊರತೆಗಳನ್ನು ಎದುರಿಸುವುದು ಹೇಗೆಂಬುದನ್ನು ಜನತೆಗೆ ತೋರಿಸಿ ಕೊಡಬೇಕು. ಜೀವನದ ಕೆಟ್ಟ ಹವೆ ಮತ್ತು ಇತರ ಕೇಡುಗಳನ್ನು ಸಾಮೂಹಿಕವಾದ ಸ್ವಪ್ರಯತ್ನದಿಂದ ಗೆಲ್ಲುವುದನ್ನು ಕಲಿಸಬೇಕು. ಹಾಗಲ್ಲದೆ ಪ್ರಯತ್ನವಿಲ್ಲದೆ ಹೇಗಾದರೂ ಜನರನ್ನು ಬದುಕಿಸಿ ಇಡಹೋಗ ಕೂಡದು ಶಕ್ಯವಲ್ಲ.

ವಿನಿಯಂತ್ರಣದ ಅರ್ಥ

ಹೀಗೆ ವಿಚಾರಮಾಡಿದರೆ, ವಿನಿಯಂತ್ರಣವೆಂದರೆ ಮುನ್ನೋಡಿ ಹೆಜ್ಜೆ ಇಡುವ ಕೆಲಸವನ್ನು ಕೆಲವೇ ಸರಕಾರೀ ಅಧಿಕಾರಿಗಳಿಂದ ರಾಷ್ಟ್ರದ ಕೋಟಿಗಟ್ಟಲೆ ಜನರಿಗೆ ವರ್ಗಾಯಿಸಿದಂತಾಯಿತು. ತನ್ನ ಮೇಲೆ ಬಿದ್ದ ಹೊಸ ಕರ್ತವ್ಯಗಳನ್ನು ರಾಷ್ಟ್ರವು ನೆರವೇರಿಸಲು ಶಕ್ಯವಾಗುವಂತೆ ಅದಕ್ಕೆ ನೆರವೀಯಲು ಸರಕಾರಕ್ಕೆ ಹೊಸ ಕೆಲಸವೀಳುತ್ತಿದೆ. ಸಾರಿಗೆ ಪದ್ಧತಿಯನ್ನು ಗಣಿಗಿಂತ ಸ್ವಲ್ಪ ಬೆಳೆ ಬೆಳೆವವನಿಗೆ ಹೇಗೆ ನೆರವಾಗಬೇಕು ಎಂಬುದನ್ನು ಸರಕಾರೀ ಒಕ್ಕಲುತನ ಶಾಖೆಯು ಅರಿತುಕೊಂಡು ಹೆಚ್ಚು ಬೆಳೆದ ಬೆಳೆಯನ್ನು ಜನರಿಗೊಯ್ದು ಕೊಡಬೇಕಾಗಿದೆ. ನಮ್ಮ ಬಹುಸಂಖ್ಯಾಕರನ್ನು ಪ್ರತಿನಿಧಿಸುವ ಸ್ವಲ್ಪ ಬೆಳೆವಾತನು ಇಲ್ಲಿಯವರೆಗೆ ಅಲಕ್ಷಿತನಾಗಿದ್ದ. ಸರಕಾರದಿಂದು ರಾಷ್ಟ್ರದ ಎಲ್ಲ ಬಣಗಳಲ್ಲೂ ವಿಶ್ವಾಸವಿಟ್ಟು ಅವುಗಳ ಚಟುವಟಿಕೆಗಳ ಮೇಲೆ ಕಣ್ಣಿಟ್ಟು ನೋಡುತ್ತ ಅಲಕ್ಷಿತವಾದ ಬಡಬೆಳೆಗಾರನ ಹಿತಸಂರಕ್ಷಣೆಗೆ ಸಿದ್ಧವಾಗಬೇಕು. ಅವನು ತಾನು ಬೆಳೆದುದನ್ನೇ ತಾನು ಉಣ್ಣುವವನು. ಉಳಿದ ಅಲ್ಪಸ್ವಲ್ಪವನ್ನು ಮಾರಿ ಬಂದಹಣದಿಂದ ಜೀವನದ ಅವಶ್ಯಕ ವಸ್ತುಗಳನ್ನು ಕೊಳ್ಳುತ್ತಾನೆ. ತೆರೆದ ಪೇಟೆಯಲ್ಲಿಗೆ ನಿಯಂತ್ರಣದಿಂದ ಅವನ ಧಾನ್ಯಕ್ಕೆ ಕಡಿಮೆ ಬೆಲೆ ಸಿಗುತ್ತದೆ. ಆದುದರಿಂದ ಅವನು ಕೊಳ್ಳುವ ಸಾಮಾನಿನ ಬೆಲೆಯೇರಿದಂತೆ ಕೊಡುವ ಸಾಮಾನಿನ ಬೆಲೆಯೂ ಏರಬೇಕು. ಇದಕ್ಕೆ ಬಳಕೆಗಾರನು ಒಲ್ಲೆನೆನ್ನುವುದಿಲ್ಲ. ಹೊಸ ಕ್ರಮದಲ್ಲಿ ಏರಿದ ಬೆಲೆಯ ಎಲ್ಲ ಅಂಶವೂ ಬೆಳೆಗಾರರಿಗೇ ಸಲ್ಲುವಂತೆ ಸರಕಾರವು ನೋಡಿಕೊಳ್ಳಬೇಕು. ಇದನ್ನು ಜನರಿಗೆ ತಿಳಿಯ ಪಡಿಸುತ್ತಿರಬೇಕು. ಕುಬೇರರಾದ ಕಾರಖಾನೆ ಒಡೆಯರು ಮತ್ತು ದಲಾಲರು ಸರಕಾರಕ್ಕೆ ಒಳಗಾಗಿ ಅದರೊಡನೆ ಸಹಕರಿಸಿ ದುಡಿಯಬೇಕು. ಈ ವಿಧಾನ ನಡೆಯುತ್ತಿದೆ ಎಂದು ನನ್ನ ತಿಳುವಳಿಕೆ. ತಮ್ಮ ಸ್ವಾರ್ಥಕ್ಕಾಗಿ ಇಲ್ಲಿಯವರೆಗೆ ಬಡವರನ್ನು ಬರಿದು ಮಾಡಿದ ಈ ಅಲ್ಪಸಂಖ್ಯಾಕರು ತಮ್ಮ ತಮ್ಮೊಳಗಿನ ಅಪಥ್ಯ ಸ್ಪರ್ಧೆಯನ್ನು ಬಿಟ್ಟು ಸಂಪೂರ್ಣ ಸಹಕರಿಸಿ ನಡೆದುಕೊಳ್ಳಬೇಕು. ಇಂದು ಆಹಾರ ಮತ್ತು ಬಟ್ಟೆಗಳಲ್ಲಿ ಇದು ಮೊದಲು ಸಾಗಬೇಕು. ಏಕೆಂದರೆ, ಅಲ್ಲಿ ಲಾಭ ದೃಷ್ಟಿ ಇರಲೇಕೂಡದು. ಲಾಭ ಹೆಚ್ಚಿಸಲು ಯಶಸ್ವಿ ಪ್ರಯತ್ನವನ್ನು ಮಾಡಹೋದರೆ ವಿನಿಯಂತ್ರಣದ ಉದ್ದೇಶವೇ ಹಾಳಾಗುತ್ತದೆ. ಧನಿಕವರ್ಗವು ಸಂದರ್ಭೋಚಿತನಾಗಿ ನಡೆದುಕೊಂಡೀತೆಂದು ಹಾರೈಕೆ.

ಬಿರ್ಲಾಭವನ, ಹೊಸದಿಲ್ಲಿ ೯—೧೨—೪೭

ನಮ್ಮ ಹವೆ ಬದಲಾವಣೆ

ಹವೆ ಬದಲಾಯಿಸಲು ನಾನೂ ಸರದಾರ ಪಟೇಲರೂ ಪಿಲಾನಿಗೆ ಹೋಗುವೆವೆಂದು ಒಂದು ಪತ್ರಿಕೆ ಪ್ರಕಟಿಸಿದೆ. ಹಾಗೆ ಬದಲಾವಣೆಗೆ ನನಗಾಗಲಿ, ಸರದಾರರಿಗಾಗಲಿ ಈಗ ಅವಕಾಶವಿಲ್ಲ. ನಮ್ಮ ಒಂದೇ ಒಂದು ಬದಲಾವಣೆಯೆಂದರೆ ರಾತ್ರಿ ನಿದ್ರಿಸುವುದು. ಆದರೆ ನನಗೆ ಸರದಾರರ ಪರವಾಗಿ ಮಾತಾಡಲಧಿಕಾರವಿಲ್ಲ. ಅವರು ಜನರ ಭೆಟ್ಟಿಯಿಂದ ಮುಕ್ತರಾಗಿ ಕೆಲಕಾಲ ಶಾಂತಸ್ಥಲದಲ್ಲಿರಬಯಸಬಹುದು. ನನಗಾದರೆ ಕಾರ್ಯಾಲಯದ ಗೊಡವೆಯಿಲ್ಲ ಮತ್ತು ದಿಲ್ಲಿಯಲ್ಲಿ ನಾನು ಮಾಡುವೆ ಇಲ್ಲವೆ ಮಡಿಯುವೆ ಎಂಬ ಪ್ರತಿಜ್ಞೆ ಮಾಡಿದ್ದೇನೆ. ನಮಗಾಗಿ ಅನೇಕ ವಿಧದ ಸಾಮುಗ್ರಿಗಳನ್ನು ಕಳುಹಲು ದಿಲ್ಲಿಯಲ್ಲಿ ಸಂಭ್ರಮ ನಡೆದಿದೆಯೆಂದೂ ಕೇಳಿದ್ದೇನೆ. ಇದೆಲ್ಲ ತೀರ ಶುದ್ಧ ಸುಳ್ಳು. ಪಿಲಾನಿಯ ವಿಷಯವನ್ನು ನಾನು ಪತ್ರಿಕೆಯಲ್ಲಿ ನೋಡಿದೆ. ಈ ಹೇಳಿಕೆ ಸತ್ಯವೋ ಅಸತ್ಯವೋ ಎಂದು ನನ್ನನಾಗಲಿ, ಸರದಾರರನ್ನಾಗಲಿ ಅವರೇಕೆ ಕೇಳಲಿಲ್ಲವೋ ಕಾಣೆ.

ಕೊಲೆಗಿಂತ ಕೀಳು

ನನ್ನ ಸಿಂಧಿ ಗೆಳೆಯನೊಬ್ಬ ಒಂದು ಕಾಗದ ಬರೆದಿದ್ದಾನೆ. ಕೆಲ ದಿನಗಳ ಹಿಂದೆ ಒಬ್ಬ ಡಾಕ್ಟರರು ಸಿಂಧದಲ್ಲಿ ಹರಿಜನರು ಪಡುತ್ತಿರುವ ಕಷ್ಟದ ಬಗ್ಗೆ ಬರೆದುದನ್ನು ಹೇಳಿದ್ದೆ. ಈ ಕಾಗದದ ಪ್ರಕಾರ ಆ ಡಾಕ್ಟರರನ್ನೂ ಇತರ ಕೆಲಸಗಾರರನ್ನೂ ಸೆರೆಮನೆಗಟ್ಟಿದ್ದಾರೆಂದು ಬರೆದಿದೆ. ಅದರ ಉದ್ದೇಶವೆಂದರೆ, ಹರಿಜನರ ಪರವಾಗಿ ಸಿಂಧದಲ್ಲಿ ಮಾತಾಡುವ ಯಾರನ್ನೂ ಸ್ವತಂತ್ರವಾಗಿ ಬಿಡಬಾರದೆಂಬುದೇ. ಇದೊಂದು ಭಯಂಕರ ಪರಿಸ್ಥಿತಿ. ಹೀಗೆ ನಡೆಸಿಕೊಂಡರೆ ಕೆಲಸಗಾರರೆಲ್ಲ ಓಡಿಹೋದಾರೆಂದು ಪಾಕಿಸ್ತಾನ ಸರಕಾರ ಎಚ್ಚರವಿರಲಿ. ಇದು ಎದುರಾ ಎದುರು ಮೇಲೆ ಬಿದ್ದು ಖೂನಿ ಮಾಡುವುದಕ್ಕಿಂತಲೂ ಕೀಳು.

ಕಸ್ತೂರಬಾ ಕೆಲಸಗಾರರಿಗೊಂದು ಮಾತು

ಈಗ ನಾನು ಕಸ್ತೂರಬಾ ವಿಶ್ವಸ್ತಮಂಡಲದ ಹೆಂಗೆಲಸಗಾರರಿಗೆ ಒಂದು ಮಾತನ್ನು ಹೇಳ ಬಯಸುತ್ತೇನೆ: ವಿಶ್ವಸ್ತಮಂಡಲವು ಹಿಂದೀ ಹಳ್ಳಿಗಳ ಹೆಂಗಸರ ಮತ್ತು ಮಕ್ಕಳ ಸೇವೆಗಾಗಿ ಇದೆ. ಕೆಲಸಗಾರರನ್ನು ಬಹ್ವಂಶ ನಗರಗಳಿಂದಲೆ ಕರೆಯಲಾಗಿದೆ. ಈ ವರೆಗೆ ನಗರಗಳು ಹಳ್ಳಿಗಳನ್ನು ನುಂಗಿಹಾಕುತಿದಿವೆ. ಸರಿಯಾದುದೆಂದರೆ ಹಳ್ಳಿಗಳ ಅನುಕೂಲಕ್ಕಾಗಿ ಸರಿಯಾಗಿ ನಗರಗಳಿರಬೇಕು. ನಗರಗಳು ಹಳ್ಳಿಗಳ ಕಚ್ಚಾಮಾಲುಗಳನ್ನು ತಂದು ಅವನ್ನು ಧನಸಂಚಯಕ್ಕಾಗಿ ಬಳಸುತ್ತಿದ್ದಾರೆ. ಈ ಸೇವಿಕೆಯರು ಹಳ್ಳಿಗಳನ್ನು ಸೇವಿಸಬಯಸಿದರೆ, ಅವರು ಹೃದಯದಲ್ಲಿ ಹಳ್ಳಿಗರಾಗಬೇಕು. ಅವರು ನಗರಸ್ಥಿತಿಯನ್ನು ಬಿಟ್ಟು ನಗರದ ಒಳ್ಳೆಯ ನಡತೆಗಳನ್ನು ಹಳ್ಳಿಗೊಯ್ಯಬೇಕು. ಉದಾಹರಣೆಗೆ ಶುಚಿತ್ವ ಮತ್ತು ನೀರೋಗ ಸನ್ನಿವೇಶ ನಿರ್ಮಾಣ. ಆದರೆ ಇದಕ್ಕೂ ಒಂದು ಗ್ರಾಮ್ಯ ರೂಪಕೊಡಬೇಕು. ಆಗಮಾತ್ರ ಅವರು ಹಳ್ಳಿಗಳ ದುರುಪಯೋಗವನ್ನು ನಿಲ್ಲಿಸಬಹುದು ಮತ್ತು ಅಲ್ಲಿಯ ಹೆಂಗಸರು ಮತ್ತು ಮಕ್ಕಳ ಭವಿತವ್ಯವನ್ನು ಸುಧಾರಿಸಬಹುದು.

ಬಿರ್ಲಾಭವನ, ಹೊಸದಿಲ್ಲಿ ೧೦-೧೨-೪೭

ಚರಕದ ಅರ್ಥ

ಚರಕ ಸಂಘವನ್ನು ನೀವೆಲ್ಲ ಬಲ್ಲಿರಿ. ನಿನ್ನೆ ನಾನು ಹರಿಜನ ನಿವಾಸದಲ್ಲಿ ನಡೆದ ಚರಕ ಸಂಘದ ಸಭೆಗೆ ಹೋಗಿದ್ದೆ. ಚರಕ ಸಂಘವು ಚರಕದ ಮತ್ತು ಅಹಿಂಸೆಯ ಪ್ರಸಾರಕ್ಕಾಗಿ ನಿಂತಿದೆ. ಅದು ಜನರಿಗೆ ತಮ್ಮ ಬಟ್ಟೆಯನ್ನು ತಾವೇ ತಯಾರಿಸುವುದನ್ನು ಕಲಿಸಿತು. ಅರಳೆ ಹಿಂಜುವುದರಿಂದ ಮೊದಲುಗೊಂಡು ಅದರ ಎಲ್ಲ ಕ್ರಮಗಳನ್ನು ಅದು ಕಲಿಸಿತು; ಹಂಜಿಮಾಡುವುದು; ನೂಲುವುದು ಮತ್ತು ನೇಯುವುದು ಇವೆಲ್ಲವನ್ನೂ ಹೇಳಿಕೊಟ್ಟಿದೆ. ಅದನ್ನು ಮಾಡಿದರೆ ಜನರಿಗೆ ದ್ವಿಮುಖಲಾಭವಿದೆ. ಬಟ್ಟೆಕೊಳ್ಳುವುದರಲ್ಲಿ ಕಳೆವ ಹಣವನ್ನು ಅವರು ಉಳಿಸಿಕೊಳ್ಳುತ್ತಾರೆ ಮತ್ತು ಅವರು ತಮ್ಮ ವೇಳೆಯನ್ನು ಒಂದು ಕಲಾತ್ಮಕವಾದ ಚಿಕ್ಕ ಕೈಗಾರಿಕೆಯಲ್ಲಿ ಕಳೆಯುವರು. ಬಟ್ಟೆಯ ಕೊರತೆಯಿಂದ ಹಿಂದುಸ್ತಾನದಲ್ಲಿ ನರಳುವುದು ಕೇವಲ ಹುಚ್ಚುತನವೆಂದು ನಾನು ಆಗಲೇ ಹೇಳಿದ್ದೆ. ಪ್ರಯೋಜನಕರವಾದ ಕೆಲಸದ ಬಗ್ಗೆ ಕೆಲವು ಕೋಟಿ ರೂಪಾಯಿಗಳನ್ನು ಹಳ್ಳಿಗಳಲ್ಲಿ ಚರಕ ಸಂಘ ಹಂಚಿತು. ಆದರೆ ಅದು ಭಾರತದ ಏಳು ಲಕ್ಷ ಹಳ್ಳಿಗಳಲ್ಲಿ ಚರಕದ ಸಂದೇಶವನ್ನು ಜನಪ್ರಿಯವನ್ನಾಗಿ ಮಾಡಲು ಶಕ್ತವಾಗಲಿಲ್ಲ. ಈ ಎಲ್ಲ ಹಳ್ಳಿಗಳೂ ಚರಕದ ಝೇಂಕಾರವನ್ನು ಮಾಡಿದ್ದರೆ ಜಗತ್ತೂ ಅವರೂ ಈಗ ಆಗುತ್ತಿರುವ ಮರಣಾಂತ ದೃಶ್ಯಗಳನ್ನು ಕಾಣುತ್ತಿರಲಿಲ್ಲ. ಹಳ್ಳಿಗಳೆಂದರೆ ಸುಖ ಸಮೃದ್ಧವಾದ ದುಡಿಮೆಯ ಜೇನುಹುಟ್ಟುಗಳಾಗುತ್ತಿದ್ದವು. ಆದರಿಂದು ಕೆಲವೇ ಜನರು ಕೆಲಸ ಮಾಡಲನುಕೂಲವುಳ್ಳ ಗಿರಣಿಗಳ ತ್ತಲೇ ಜನರ ಲಕ್ಷ್ಯ. ಇದರಲ್ಲಿ ಸಾಮಾನ್ಯರದಕ್ಕಿಂತ ಬಂಡವಾಲಿಗರ ಹಿತವೇ ಪ್ರಾಧಾನ್ಯಕ್ಕೆ ಬಂದಿತು. ಬಂಡವಾಲಿಗರೊಡನೆ ನನಗೆ ಜಗಳವಿಲ್ಲ. ನಾನು ಈಗ ಅಂತಹ ಒಬ್ಬರೊಡನೆ ವಾಸಿಸುತ್ತಿದ್ದೇನೆ. ಆದರೆ ಅವರ ಮತ್ತು ನನ್ನ ರೀತಿನೀತಿಗಳು ಬೇರೆ ಬೇರೆ. ಪ್ರತಿಯೊಬ್ಬನೂ ಬಡವರ ಸೇವೆಯ ಮಾತೆತ್ತುತ್ತಾನೆ. ಸಾಮ್ಯವಾದಿಗಳು ಸಾಮಾನ್ಯ ಜನರ ಆಳಿಕೆಯನ್ನು ಎತ್ತಿ ಆಡುತ್ತಾರೆ. ಯುಕ್ತಕಾಲದಲ್ಲಿ ಸಾಮ್ಯವಾದಿ ಕ್ರಾಂತಿ ಮತ್ತು ಸಾಮ್ಯಪದ್ಧತಿಯ ಪ್ರಕಾರ ನಡೆವ ಕೈಗಾರಿಕೆಗಳು ಬರಬಹುದು; ಆದರೆ ಇಂದು ಅವರು ಕೂಡ ಚರಕಕ್ಕಾಗಿ ಮತ್ತು ಅದು ಪ್ರತಿನಿಧಿಸುವ ಎಲ್ಲ ಅರ್ಥಕ್ಕಾಗಿ ದುಡಿಯಬೇಕು. ಕೊನೆಯ ಪಕ್ಷ ಬಟ್ಟೆಯಲ್ಲಾದರೂ ಸ್ವಯಂಪೂರ್ಣರೆನಿಸಿಕೊಳ್ಳಬೇಕೆಂದು ಅವರು ಜನರಿಗೆ ಹೇಳಬೇಕು.

ಚರಕ ಮತ್ತು ಜಾತಿ ಜಾತಿಗಳ ಹೊಂದಿಕೆ

ಚರಕ ಮತ್ತು ಜಾತಿ ಜಾತಿಗಳ ಹೊಂದಿಕೆಗಾಗಿ ನಾನು ೩೦ ಕ್ಕಿಂತ ಹೆಚ್ಚು ವರ್ಷಗಳಿಂದ ದುಡಿಯುತ್ತಿದ್ದೇನೆ. ನಾನು ಚರಕವನ್ನು ಅಹಿಂಸೆಯ ಪ್ರತೀಕವೆಂದು ಕರೆದಿದ್ದೇನೆ. ಚರಕದ ಸಂದೇಶ ಹರಡಿದ್ದರೆ, ಆಗ ಮುಸಲ್ಮಾನರನ್ನು ಹೊರದೂಡುವ ಮಾತೇ ಇರುತ್ತಿರಲಿಲ್ಲ. ಬಹಳ ಜನರು ದಿಲ್ಲಿಯನ್ನು ಬಿಟ್ಟು ಹೋದರು. ಉಳಿದವರನ್ನು ಓಡಿಸುವ ಮಾತು ಅಲ್ಲಿ ನಡೆಯುತ್ತಿತ್ತು. ಹಿಂದುಗಳು ಹೋಗಿ ಅವರ ಮಸೀದೆಗಳಲ್ಲಿ ವಾಸಿಸುವರೆ? ಅದು ನಮ್ಮ ಹಿಂದು ಧರ್ಮದ ನಾಶಕ್ಕೆ ಕಾರಣವಾದೀತು.

ಬದುಕಿರಿ ಮತ್ತು ಬದುಕಗೊಡಿರಿ

ಅಜ್ಮೀರದಿಂದ ಬಂದ ಸುದ್ದಿಯ ಪ್ರಕಾರ ಅನೇಕ ಮುಸಲ್ಮಾನರನ್ನು ಅಲ್ಲಿಂದ ಓಡಿಸಲಾಗಿದೆಯೆಂದು ತಿಳಿಯುತ್ತದೆ. ಉಳಿದವರಲ್ಲಿ ಕೆಲವರನ್ನು ಕೊಂದುದಾಗಿಯೂ ಆ ಪಿಡುಗು ಹಳ್ಳಿಗಳಿಗೂ ಹರಡುತ್ತಿರುವುದಾಗಿಯೂ ಸುದ್ದಿ. ಅಜ್ಮೀರದಲ್ಲೊಂದು ದೊಡ್ಡ ದರ್ಗಾ ನಡೆದಿತ್ತು. ಅದರಲ್ಲಿ ಹಿಂದು ಮುಸ್ಲಿಮರಿಬ್ಬರೂ ದೇವತಾರಾಧನೆ ಮಾಡಿದರು. ಅವರಿಗೀಗ ಹುಚ್ಚು ಹಿಡಿದಿದೆಯೆ?

—ನೆಯ ಪುಟಕ್ಕೆ

ಗಾಂಧೀಜಿಯ ಪ್ರಾರ್ಥನೋತ್ತರ ಭಾಷಣಗಳು

[ಆನೆಯ ಪುಟದಿಂದ ಮುಂದರಿದುದು]

ಸದ್ಬುದ್ಧಿ ಉಳಿವಂತೆ ಅವರೆಲ್ಲರೂ ದೇವರನ್ನು ಪ್ರಾರ್ಥಿಸಬೇಕೆಂದು ನಾನು ಬಯಸುತ್ತೇನೆ. ಮುಸ್ಲಿಮರನ್ನು ಕೊಲ್ಲುವ ಇಲ್ಲವೆ ಓಡಿಸುವ ತಮ್ಮ ಪ್ರಯತ್ನದಲ್ಲಿ ಅವರು ಹಿಂದು ಧರ್ಮವನ್ನೇ ಕೊಂದಾರು. ಅದರಂತೆಯೇ ಪಾಕಿಸ್ತಾನದಿಂದ ಹಿಂದು ಮತ್ತು ಶೀಖರನ್ನು ಅಳಿಸಿಬಿಡುವುದರಿಂದ ಇಸ್ಲಾಮನ್ನು ಮುಸ್ಲಿಮರು ಕೊಂದೊ'ದಾರು. ಬದುಕುವ ಒಂದೇ ಒಂದು ಮಾರ್ಗವೆಂದರೆ ಉಳಿದವರಿಗೆ ಬದುಕಗೊಡುವುದು.

ಬಿರ್ಲಾ ಭವನ, ಹೊಸದಿಲ್ಲಿ, ೧೧-೧೩-೪೭

ಕುರಾನಿನ ಒಂದು ಶ್ಲೋಕ

(ಪ್ರಾರ್ಥನೆ ಪ್ರಾರಂಭಿಸುವ ಮುನ್ನ ಸಭಿಕನೊಬ್ಬನು ಪ್ರಾರ್ಥನೆಗಳಲ್ಲಿ ಪಠಿಸಿದ ಕುರಾನಿನ ಶ್ಲೋಕವೊಂದರ ಅರ್ಥವನ್ನು ಕೇಳಿದನು. ಪ್ರಾರ್ಥನೋತ್ತರ ಭಾಷಣದಲ್ಲಿ ಗಾಂಧೀಜಿ ಅದರ ಅರ್ಥ ಹೇಳಿದರು.) ಶ್ಲೋಕದಲ್ಲಿ ಭಕ್ತನು ಸರ್ವದಯಾಮಯನಾದ ಅಲ್ಲಾನನ್ನು ಪ್ರಾರ್ಥಿಸುತ್ತ ಪಾಪಿಯಾದ ಸೈತಾನನಿಂದ ತನ್ನನ್ನು ರಕ್ಷಿಸೆಂದು ಮೊರೆ ಇಡುತ್ತಾನೆ. ಅಲ್ಲಾನು ನಿರ್ಣಯ ದಿನದ ಒಡೆಯನು. ಅಲ್ಲಾ ಒಬ್ಬನೇ. ಅವನಿಗೆ ಮಕ್ಕಳಿಲ್ಲ ಮತ್ತು ಅವನು ಯಾರ ಮಗನೂ ಅಲ್ಲ. ಕೊನೆಯಲ್ಲಿ ಅವನ ದಯೆ ಪಡೆದವರು ಹೋದ ಮಾರ್ಗದಲ್ಲೇ ತನ್ನನ್ನೊಯ್ಯೆಂದು ಭಕ್ತನು ಅಲ್ಲಾನನ್ನು ಕೇಳಿಕೊಳ್ಳುವನು.

ಮೇಲಿನ ಪಾಠಕ್ಕೆ ವಿರುದ್ಧವಾಗಿ ಮುಸಲ್ಮಾನರೇಕೆ ನಡೆದುಕೊಂಡರೆಂದು ಯಾರಾದರೂ ಕೇಳಬಹುದು. ಅದಕ್ಕೆ ಪ್ರತ್ಯಾಖ್ಯಾನ ಹೀಗೆ: ಬೈಬಲ್ಲಿನ ಮತ್ತು ಉಪನಿಷತ್ತುಗಳ ಸಂದೇಶದಂತೆ ಕ್ರೈಸ್ತರೂ ಹಿಂದುಗಳೂ ನಡೆದುಕೊಂಡರೆ? ಎಲ್ಲ ಮುಸ್ಲಿಮರೂ ಕೆಟ್ಟವರಲ್ಲ; ಎಲ್ಲ ಹಿಂದುಗಳೂ ಒಳ್ಳೆಯವರಲ್ಲ.

ಮುಸ್ಲಿಂ ಶಾಂತತಾ ಸಮಿತಿಯ ಭರವಸೆ

ಯುಕ್ತಪ್ರಾಂತದ ನಾಲ್ವರು ಮುಸಲ್ಮಾನ ಮಿತ್ರರು ಶಾಂತಿ ದೂತರಾಗಿ ಪಶ್ಚಿಮ ಪಂಜಾಬಕ್ಕೆ ಹೋಗಿದ್ದರು. ಅವರು ಬೆಳಿಗ್ಗೆ ಗಾಂಧೀಜಿಯವರನ್ನು ಕಾಣ ಬಂದಿದ್ದರು. ಹಿಂದುಗಳು ಲಾಹೋರಿಗೆ ಹೋಗಿ ಸುಖವಾಗಿರಬಹುದೆಂದು ಅವರು ಹೇಳಿದರು. ತಾವು ಹೀಗೆ ಹೋಗುವವರ ಜೊತೆಗೆ ಇರುವದಾಗಿಯೂ ಅವರ ಒಂದು ಕೂದಲು ಕೊಂಕಿದರೂ ತಮ್ಮ ಪ್ರಾಣವನ್ನು ಅರ್ಪಿಸಲು ಸಿದ್ಧರೆಂದೂ ನಿವೇದಿಸಿದರು. ಇವರು ಹೇಳಿದ ಮಾತುಗಳನ್ನು ಬರೆದುಕೊಟ್ಟರೆ ಸಭೆಯಲ್ಲಿ ಓದಿ ಹೇಳಬಹುದೆಂದು ಗಾಂಧೀಜಿ ಕೇಳಿದರು. ಅವರು ಅದರಂತೆ ಬರೆದು ಕೆಳಗಿನ ಪತ್ರವನ್ನು ಒಪ್ಪಿಸಿದರು.

"ಯುಕ್ತಪ್ರಾಂತದ ಶಾಂತತಾ ಸಮಿತಿಯವರು ಪಶ್ಚಿಮ ಪಂಜಾಬದಲ್ಲಿ ಎರಡು ಸಲ ಸಂಚರಿಸಿ ಬಂದಿದ್ದಾರೆ. ಮೊದಲನೆಯ ಸಲ ಅವರು ಅಲ್ಲಿ ಒಂದು ತಿಂಗಳು ಮತ್ತು ಎರಡನೆಯ ಸಲ ಒಂದು ವಾರ ಕಳೆದಿದ್ದಾರೆ. ಈಗ ಪರಿಸ್ಥಿತಿ ಚೆನ್ನಾಗಿದೆ. ಅಲ್ಲಿಯ ಜನತೆಯೂ ಸರಕಾರವೂ ಕೂಡಿಯೇ ಶಾಂತಿ ಸ್ಥಾಪನೆಗೆ ಹೆಣಗುತ್ತಿದ್ದಾರೆ.

(೧) ಈಗಾಗಲೇ ಅಲ್ಲಿರುವ ಮುಸಲ್ಮಾನೇತರರು ತೊಲಗದೆ ಇರಬೇಕೆಂದೂ ತೊಲಗಿ ಹೋದವರು ಮರಳಬೇಕೆಂದೂ ಪಶ್ಚಿಮ ಪಂಜಾಬ ಸರಕಾರವು ಬಯಸುತ್ತದೆ.

(೨) ಮರಳಿ ಬರುವ ಮುಸಲ್ಮಾನೇತರರ ಆಸ್ತಿಯನ್ನು ಅವರವರಿಗೆ ತಿರುಗಿ ಕೊಡಬೇಕೆಂಬುದಾಗಿ ಸರಕಾರವು ಆಜ್ಞೆ ಹೊರಡಿಸಿದೆ.

(೩) ಪಶ್ಚಿಮ ಪಂಜಾಬಕ್ಕೆ ತಿರುಗಿ ಬರುವ ಮುಸಲ್ಮಾನೇತರರಿಗೆ ಸಂಪೂರ್ಣ ಸಂರಕ್ಷಣೆಯನ್ನೂ ಸೌಕರ್ಯಗಳನ್ನೂ ಒದಗಿಸಿ ಅವರ ವ್ಯವಹಾರಕ್ಕೆ ಮಾರ್ಗಮಾಡಿಕೊಡಬೇಕು.

(೪) ಈ ಬಗೆಯ ನಮ್ಮ ವಿಶ್ವ ಪ್ರಯತ್ನದಿಂದೂ ಯಾರಾದರೂ ಮುಸಲ್ಮಾನೇತರರು ಪಶ್ಚಿಮ ಪಂಜಾಬಕ್ಕೆ ತಿರುಗಿ ಬರಲು ಬಯಸದೆ ಹೋದರೆ ಅಂತಹರಿಗೆ ತಮ್ಮ ತಮ್ಮ ಆಸ್ತಿಯನ್ನು ಬದಲಿಸಲು ಅಥವಾ ಮಾರಿಕೊಳ್ಳಲು ಸಂಪೂರ್ಣ ಅಧಿಕಾರವಿದೆ.

(೫) ಗಲಭೆಗಳು ಮರುಕಳಿಸದ ಹಾಗೆ ಸರಕಾರವು ಎಚ್ಚರಿಕೆ ವಹಿಸುವದಲ್ಲದೆ ಹೀಗೆ ಗಲಭೆಗೆ ಕಾರಣರಾಗುವ ಮುಂದಿನ ವಿಷಯದಲ್ಲಿ ಸರಕಾರವು ಉಗ್ರ ಉಪಾಯಗಳನ್ನು ಕೈಕೊಂಡು ನಿರ್ದಯದಿಂದ ದಮನಿಸುವದು.

ಮುಸಲ್ಮಾನೇತರರ ವಿತ್ತ, ಜೀವನ, ಗೌರವ ಮೊದಲಾದವನ್ನು ಸಂರಕ್ಷಿಸುವ ಹೊಣೆಗಾರಿಕೆಯ ವಿಷಯದಲ್ಲಿ ಶಾಂತತಾ ಸಮಿತಿಯು ಸರಕಾರದ ಜನತೆಯನ್ನೂ ತಿಳಿ ಇರಿಸಿದೆ. ಮರಳಿ ತಮ್ಮ ತಮ್ಮ ಮನೆಗಳಿಗೆ ಹೋಗಿ ನೆಲಸಬೇಕೆಂಬ ಮುಸಲ್ಮಾನೇತರ ಬಂಧುಗಳ ಜೊತೆಗೆ ಹೋಗಿ ಅವರ ಪುನರ್ನಿವೇಶನ ಸುಗಮವಾಗುವ ಹಾಗೆ ಯತ್ನಿಸುವದಕ್ಕೆ ಶಾಂತತಾ ಸಮಿತಿಯ ಸದಸ್ಯರು ವಚನ ಕೊಡುತ್ತಾರೆ. ಅವರಿಗೆ ಸುರಕ್ಷಿತವಾಗಿರುವೆನೆಂಬ ಭರವಸೆ ಹುಟ್ಟುವ ವರೆಗೆ ಈ ಸದಸ್ಯರು ಅವರ ಜೊತೆಗಿದ್ದು ಅವರ ಪ್ರಾಣವನ್ನು ತಮ್ಮ ಪ್ರಾಣಕೊಟ್ಟು ಕಾಯಲು ಸಿದ್ಧರಿದ್ದಾರೆ."

ಗಲಭೆಯ ಕಾಲದಲ್ಲೆಲ್ಲ ತಾನು ಲಾಹೋರದಲ್ಲಿದ್ದುದಾಗಿ ತಿಳಿಸಿ ಓರ್ವ ಹಿಂದುವು ಒಂದು ಪತ್ರ ಗಾಂಧೀಜಿಗೆ ಕೊಟ್ಟಿದ್ದರು. ಈ ಗೃಹಸ್ಥರು ಅಲ್ಲಿ ಒಂದು ಉಪಹಾರ ಗೃಹವನ್ನು ಇಟ್ಟುಕೊಂಡಿದ್ದರಂತೆ. ದಿನವೂ ಸಾವಿರದಷ್ಟು ಜನರು ಅಲ್ಲಿಗೆ ಬರುತ್ತಿದ್ದರಂತೆ. ಉಚ್ಛೃಂಖಲತೆಯನ್ನು ಪತ್ರಿಕ್ಕಲು ಸರಕಾರವು ಪ್ರಯತ್ನಿಸುತ್ತಿರುವದಾಗಿಯೂ ಲಾಹೋರನ್ನು ಬಿಟ್ಟುಬಂದ ಮುಸಲ್ಮಾನೇತರರು ಮತ್ತೆ ಅಲ್ಲಿಗೆ ಮರಳಬೇಕಾಗಿಯೂ ಇವರು ಬೇಡಿಕೊಂಡಿದ್ದರು.

ಇದು ನಿಜವಿದ್ದುದಾದರೆ ತಮಗೆ ಹೆಚ್ಚಿನ ಸಂತೋಷವೆಂದು ಗಾಂಧೀಜಿ ಹೇಳಿದರು. ಅವರೆ ಈ ಮಿತ್ರರ ಹೇಳಿಕೆಯು ಪ್ರತ್ಯಕ್ಷ ಕೃತಿಯಿಂದಲೆ ಸಿದ್ಧವಾಗಬೇಕು. ಈ ವಿಷಯದಲ್ಲಿ ತಮಗೆ ಸಾಧ್ಯವಿದ್ದುದನ್ನೆಲ್ಲ ಮಾಡುವದಾಗಿ ಗಾಂಧೀಜಿ ಹೇಳಿದರು.

ಬಿರ್ಲಾಭವನ ಹೊಸದಿಲ್ಲಿ, ೧೨-೧೩-೪೭

ನಿರಾಶ್ರಿತರ ಕಷ್ಟ

ನಿನ್ನೆ ಸಂಜೆ, ಮುಸಲ್ಮಾನೇತರರು ಪಾಕಿಸ್ತಾಕ್ಕೆ ಹೋಗಬೇಕೆಂದು ನಾನು ಹೇಳಿದ ಮೇರೆಗೆ ಶಕ್ಯವಿದ್ದಷ್ಟು ಬೇಗ ತಾವು ಅಲ್ಲಿಗೆ ಹೋಗಬಯಸುವದಾಗಿ ಓರ್ವ ನಿರಾಶ್ರಿತರು ನನಗೆ ಬರೆದು ತಿಳಿಸಿದ್ದಾರೆ. ಒಕ್ಕೂಟದಲ್ಲಿ ನಿರಾಶ್ರಿತರ ಬಗ್ಗೆ ಯಾರೂ ಲಕ್ಷ್ಯ ಕೊಡುತ್ತಿರುವದಿಲ್ಲವೆಂದೂ ಇಲ್ಲಿ ನಿರಾಶ್ರಿತರು ತುಂಬ ಕಷ್ಟಕ್ಕೆ ಗುರಿಯಾಗಿದ್ದಾರೆಂದೂ ಅವರು ದೂರಿದ್ದಾರೆ. ನಿರಾಶ್ರಿತರು ಕಷ್ಟಕ್ಕೆ ಗುರಿಯಾಗಿದ್ದಾರೆಂಬುದನ್ನು ನಾನು ಒಪ್ಪುತ್ತೇನೆ. ಒಕ್ಕೂಟ ಸರಕಾರದವರು ಈ ಜನರ ಸಹಾಯದ ಬಗ್ಗೆ ತುಂಬ ಪರಿಶ್ರಮ ವಹಿಸುತ್ತಿದ್ದರೂ ನಿರಾಶ್ರಿತರಿಗೆ ಈ ಕಷ್ಟತಪ್ಪಿಲ್ಲ. ಎಲ್ಲರಿಗೂ ಸರಿಯೆಂದು ತೋರುವ ರೀತಿಯಲ್ಲಿ ಈ ಮಹತ್ಕಾರ್ಯವನ್ನು ಸಾಧಿಸುವದು ಅದೆಂತಹ ಸಮರ್ಥ ಸರಕಾರವಿದ್ದರೂ ಅಸಾಧ್ಯವಾದ ಮಾತೆಂಬುದನ್ನು ಮರೆಯತಕ್ಕದ್ದಲ್ಲ. ಇಂದೇ ಯಾರಿಗಾದರೂ ಪಾಕಿಸ್ತಾನಕ್ಕೆ ಹೋಗಿರೆಂದು ನಾನು ಉಪದೇಶಿಸಲು ಸಿದ್ಧನಿಲ್ಲ. ಹೋಗಬೇಕೆನ್ನುವವರು ಮೊದಲು ಶಾಂತತಾ ಸಮಿತಿಯವರ ಹೇಳಿಕೆ ಸರಿ ಎಂದು ಮುಂಗಡ ಪುನರ್ಗಮನಕ್ಕೆ ಯಾವ ಯೋಗ್ಯಯೋಜನೆಯಾಗಿದೆಯೆಂಬುದನ್ನು ತಿಳಿದು ಆ ಮೇಲೆ ಹೋಗಲನಗೊಳ್ಳಬಹುದು.

ಇನ್ನೊಂದು ಮಗ್ಗುಲು

ಮುಂಬಯಿ ಮತ್ತು ಬರ್ಮಾದಿಂದ ಬಂದ ಎರಡು ಸಿಟ್ಟಿನ ಪತ್ರಗಳ ನಾತೆಸ್ತಿ ಗಾಂಧೀಜಿ ಹೀಗೆ ಹೇಳಿದರು.

ಇವು ಮುಸಲ್ಮಾನರಿಂದ ಬಂದಿವೆ. ಇವನ್ನು ಬರೆದವರು ತಮ್ಮ ಹೆಸರನ್ನು ಪ್ರಕಟಿಸೋಕ ಬಯಸಿಲ್ಲ. ಕಾಠೆವಾಡದ ಮುಸಲ್ಮಾನರು ಅಲ್ಲಿಗಳೆದ ಅತ್ಯಾಚಾರದ ಆರೋಪಗಳೆಲ್ಲ ನಿಜವೆಂದು ಈ ಮಿತ್ರರು ಒತ್ತಿ ಒತ್ತಿ ಹೇಳಿದ್ದಾರೆ. ಈ ಬಗೆಯ ನಾಮರಹಿತ ಪತ್ರಗಳನ್ನು ಅದೆಷ್ಟು ನಿಜವೆಂದು ನಂಬುವದೋ ಹೇಳಲಾರೆ. ಈ ಮಿತ್ರರು ತಮ್ಮ ಹೆಸರನ್ನು ಬಹಿರಂಗ ಪಡಿಸಬೇಕಿಲ್ಲದೆ ಜೊತೆಗೆ ಅಂಕೆ ಸಂಖ್ಯೆಗಳನ್ನೂ ಸತ್ಯ ಸಂಗತಿಗಳನ್ನೂ ತೋರಿಸಿಕೊಟ್ಟರೆ ಮಾತ್ರ ನಾನು ಸ್ಥಾನಿಕ ಅಧಿಕಾರಿಗಳಿಗೆ ಈ ಬಗ್ಗೆ ವಿಚಾರಣೆ ನಡೆಸಲು ತಿಳಿಸಬಲ್ಲೆ.

ಅಜಮೀರದಿಂದ ಬಂದ ಒಂದು ತಂತಿಯು ಇವರು ಬಗ್ಗೆ ಸಿದಷ್ಟು ಗಲಭೆ ಗಂಭೀರವಿಲ್ಲವೆಂದೂ ಈ ಮುಂಡಾಟಿಕೆಯಲ್ಲಿ ಹಿಂದುಗಳ ಅಂಗವಿಲ್ಲವೆಂದೂ ತಿಳಿಸುತ್ತದೆ. ಈ ವಿಷಯದಲ್ಲಿ ಬಿನ್ನಾಭಿಪ್ರಾಯಪಡುವವರೂ ಇರುವರೆಂಬುದನ್ನು ತೋರಿಸಲೆಂದು ನಾನು ಈ ತಂತಿಯ ಸಮಾಚಾರ ತಿಳಿಸಿದೆ. ಇವುಗಳಲ್ಲಿ ಯಾವುದು ಸತ್ಯವೋ ನಾನರಿಯೆ.

ಸೋಮನಾಥ ದೇವಾಲಯದ ಜೀರ್ಣೋದ್ಧಾರಕ್ಕೆ ಸರಕಾರದ ಧನಸಹಾಯ ಸಲ್ಲದೆಂದುದಕ್ಕೆ ನನ್ನನ್ನು ಅನೇಕ್ಕಬ್ಬರು ಟೀಕಿಸಿದ್ದಾರೆ. ಸರಕಾರವು ಇಂತಹ ವಿಷಯಗಳಲ್ಲಿ ಒಂದು ಪಂಗಡಕ್ಕಾಗಿ ಧನವ್ಯಯ ಮಾಡುವದಾದರೆ ಇನ್ನೊಂದು ಪಂಗಡಕ್ಕೂ ಹಾಗೆ ಮಾಡುವದು ಉಚಿತ. ಇಲ್ಲದಿದ್ದರೆ ಅದು ತಪ್ಪಾಗುವದು.

ಕಲಕತ್ತೆಯಲ್ಲಿ ಮುಂಡಾಟಿಕೆ

ಕಲಕತ್ತೆಯ ಮಡಾಕೆಸ್ತಿ ಗಾಂಧೀಜಿ ಹೀಗೆ ಹೇಳಿದರು.

ಒಂದು ಕಾರಣದಿಂದ ಬೇಕಾದುದನ್ನು ದೊರೆಯಿಸಿಕೊಳ್ಳಬಹುದಾಗಿ ಜನ ನಂಬಿದಂತೆ ತೋರುತ್ತದೆ. ಇದು ಸಂಪರ್ಕದ ತಪ್ಪು. ಈ ಬಗೆಯ ಹಿಂಸೆಯನ್ನು ವಿರೋಧಿಸಿ, ಅದು ಸರಕಾರ ಸರಕಾರದ ವಿರುದ್ಧವಿದ್ದರೂ ನಾನು ಹಿಂದಕ್ಕೆ ಉಪವಾಸವನ್ನು ಆಚರಿಸಿದೆ. ಇಂದು ಸದ್ಯಕ್ಕೆ ನಮ್ಮ ಸರಕಾರ ದೊರಕಿದೆ. ಎಂದ ಮೇಲೆ ಕಾಯದೆಯನ್ನು ಕೈಗೆತ್ತಿಕೊಳ್ಳುವುದು ನಡೆಯುವುದು ಉಚಿತವೆ? ಅಥವಾ ಯೋಗ್ಯವೆ? ಆಕ್ರಮಕ ಕೃತ್ಯಗಳನ್ನು ದಮನಿಸುತ್ತಿರುವ ಸರಕಾರದ ಬಗ್ಗೆ ಜನರು ದೂರುತ್ತಿರುವರು ಸಾರಿದ ತಪ್ಪುಗಳಿಗೆ ಶಿಕ್ಷೆಯುಳ್ಳದಿರುವುದೆಂದರೆ ಸ್ವಾತಂತ್ರ್ಯವಲ್ಲ. ತಮಗೆ ತಪ್ಪೆಂದೂ ಅನ್ಯಾಯವೆಂದೂ ತೋರಿದ್ದರ ಬಗ್ಗೆ ಬೇಕಾದರೆ ಅವರು ಸರಿಯಾದ ರೀತಿಯಲ್ಲಿ ಆಂದೋಲನ ಹೂಡಬಹುದು. ಶಾಂತಿಯುತ ಉಪಾಯಗಳನ್ನು ಪ್ರಯೋಗಿಸಿಅವು ಸಾಕಾಗುವದೆಂದೇನಾದರೂ ನಡೆದಿರುವದೆ? ಇದು ಸ್ವಾತಂತ್ರ್ಯ ಕಿರುವು ಕೇವಲ ಮಸ್ಕಿರೇ ಮಾರು ತಿಂಗಳ ಹಸುಗೂಸು. ಇವರು ಈ ವಿಧವಾಗಿ ಸರಕಾರದ ಕಾರ್ಯದಲ್ಲಿ ವಿಘ್ನತಂದೊಡ್ಡಿದರೆ, ಆಹಾರ ಮತ್ತು ಇನ್ನಿತರ ಜೀವನಾವಶ್ಯಕ ವಸ್ತುಗಳನ್ನು ಒದಗಿಸುವ ಹೊಣೆಗಾರ ಕೆಲಸಗಳನ್ನು ಸರಕಾರವು ಅದೆಂತು ಈಡೇರಿಸಬಲ್ಲದು? ಭಾರತೀಯರು ಕೇವಲ ವಿಘಾತಕ ಬುದ್ಧಿಯವರೇ ಎಂದು ಇದರ ಅರ್ಥವೋ? ಅವರಿಗೆ ರಚನಾತ್ಮಕ ಶಕ್ತಿ ಇಲ್ಲವೆಂದೇ ತಿಳಿಯಬೇಕೊ? ಬ್ರಿಟಿಶ ಸರಕಾರದ ವಿರುದ್ಧ ಹೋರಾಟವು ನಿಷ್ಕ್ರಿಯ ಪ್ರತೀಕಾರದ್ದಿತ್ತು. ಹಿಂಸಾಮಯವಾಗಿರಲಿಲ್ಲ. ಈಗ ನಮಗೆ ನಮ್ಮ ರಾಜ್ಯಭಾರವೇ ಇರುವಕಾರಣ ಪರಕೀಯ ಸರಕಾರವನ್ನು ಎದುರಿಸಿದಂತೆ ಈ ವಿಧ ಉಪಾಯಗಳನ್ನು ಹೂಡಿ ವಿರೋಧ ವ್ಯಕ್ತ ಪಡಿಸುವದು ಯೋಗ್ಯವಲ್ಲ.

ಬಿರ್ಲಾಭವನ, ಹೊಸದಿಲ್ಲಿ ೧೩-೧೩-೪೭

ಚರಕದ ಸಂದೇಶ

ಪ್ರಾರ್ಥನೋತ್ತರ ಭಾಷಣದಲ್ಲಿ, ಹರಿಜನ ವಸತಿಯಲ್ಲಿ ಚರಕ ಸಂಘದ ಇತ್ತೀಚಿನ ಸಭೆಯಲ್ಲಿ ನಡೆದ ಚರ್ಚೆಯನ್ನು ಗಾಂಧೀಜಿ ಉಲ್ಲೇಖಿಸಿದರು. ಚರಕಕ್ಕೆ ಇಷ್ಟೊಂದು ಮಹತ್ವ ಕೊಡುವುದೇಕೆ? ಹಲವು ವರ್ಷಗಳ ಹಿಂದೆ ಮೊದಲು ಚರಕದ ಮಾತೆತ್ತಿದಾಗ, ಪಂಜಾಬದಲ್ಲಿ ಮತ್ತು ಗುಜರಾಥ ಹಾಗು ಕಾಠೇವಾಡದಲ್ಲಿಯ ಕೆಲ ಭಾಗಗಳಲ್ಲಿ ಚರಕ ಇನ್ನೂ ಜೀವಂತ ಉದ್ಯೋಗವಾಗಿದೆಯೆಂಬುದು ತಮಗೆ ಗೊತ್ತಿರಲಿಲ್ಲ. ಅದು ಬಡ ಹಳ್ಳಿಗನ ಮತ್ತು ಹಳ್ಳಿ ಹೆಣ್ಣುಮಕ್ಕಳ ಉತ್ಪನ್ನಕ್ಕೆ ಪೂರಕ ಸಹಾಯ ಸಾಧನವೆಂದು ಮೊದಲು ಭಾವಿಸಲಾಗಿತ್ತು. ಬರಬರುತ್ತ ಚರಕದಲ್ಲಿ ಪ್ರಚಂಡ ಶಕ್ತಿ ಅಡಕವಾಗಿದೆಯೆಂದು ಹೊಳೆಯಿತು. ಆ ಶಕ್ತಿಯೆಂದರೆ ಅಹಿಂಸಾಶಕ್ತಿ. ಈ ಶಕ್ತಿಯನ್ನು ಪ್ರಚಂಡ ಸೈನಿಕ ಶಕ್ತಿಯೂ ಸೋಲಿಸಲಾರದು. ಇದರ ಮನವರಿಕೆಯಾದ್ದರಿಂದಲೆ ಚರಕವು ಅಹಿಂಸೆಯ ಪ್ರತೀಕವೆಂದು ತಾವು ಕರೆಯುತ್ತದೆವೆಂದು ಗಾಂಧೀಜಿ ಹೇಳಿದರು.

ರಾಟಿಯ ಇತಿಹಾಸ ತಮಗೆಲ್ಲರಿಗೆ ಗೊತ್ತಿದೆ. ಢಾಕಾ ಮಲಮಲು ಮತ್ತು ಅದಕ್ಕೆ ಸಂಬಂಧಿಸಿದ ಉಳಿದವುಗಳ ಇತಿಹಾಸವೂ ಗೊತ್ತಿದೆ. ಆ ಕಾಲಕ್ಕೆ ರಾಟಿಯು ತಮ್ಮ ದಾಸ್ಯದ ಪ್ರತೀಕವಾಗಿತ್ತು. ತಮ್ಮ ಒಡೆಯರು ಗೊತ್ತುಪಡಿಸಿದ ಧಾರಣೆಯಲ್ಲಿ ಕಲಾಕುಶಲರು ದುಡಿಯಬೇಕಾಗುತ್ತಿತ್ತು! ಅದಕ್ಕೆ ಸಕಾರಾತ್ಮಕ ಉತ್ತರ ಕೊಡುವದು ಅವರಿಗೆ ಶಕ್ಯವಿರಲಿಲ್ಲ. ಅನೇ ರಾಟಿಯು ಅವರ ರಹಸ್ಯದ ಅಭಿಜ್ಞಾನದಿಂದ ಸ್ವಾತಂತ್ರ್ಯದ ಪ್ರತೀಕವಾಗಿ ಪರಿಣಮಿಸಿದೆ. ಹಿಂದುಸ್ಥಾನದಲ್ಲಿಯ ೪೦ ಕೋಟಿ ಜನರಲ್ಲಿ ವಸುಂಧರೆಗೆ ಬೀಜ ಎಲ್ಲ ಸ್ತ್ರೀಪುರುಷರು ಮತ್ತು ಮಕ್ಕಳು ರಾಟಿಯನ್ನು ತಿರುಗಿಸಿದರೆ ಕೊಟ್ಯವಧಿ ಜನರ ಉಪಯೋಗಕ್ಕೆ ಬೇಕಾಗುವಷ್ಟು ಖಾದಿಗೆ ನೂಲು ಪೂರೈಸಬಲ್ಲರು ಮತ್ತು ಕೋಟ್ಯವಧಿ ರೂಪಾಯಿಗಳನ್ನು ಉಳಿಸಬಲ್ಲರು. ಅವರಿ ಅನೇಕ ಅಷ್ಟು ಮಾತ್ರದ ಪರಿಣಾಮವನ್ನುಂಟುಮಾಡಲಾರದು. ಈ ನಾಲ್ಕತ್ತು ಕೋಟಿಜನರ ಸಾಂಘಿಕ ಪ್ರಯತ್ನದಿಂದ ಹೊರಹೊಮ್ಮುವ ಶಕ್ತಿಗೆ ಹೆಚ್ಚು ಮಹತ್ವ ತಾವು ಕೊಡುತ್ತಿರುವರು. ಯಾರ ಹೊಟ್ಟೆಯನ್ನೂ ಇರಿಯದೆ ಇಷ್ಟು ಬಹುಸಂಖ್ಯಾಕ ಜನರಿಗೆ ಉದ್ಯೋಗವನ್ನು [illegible] ಅದಕ್ಕೆ [illegible] ಕಲಿತವರು [illegible] ಕಲಿಸುವ ಸಲುವಾಗಿ [illegible] ಅವರ [illegible] ಎಂದು ಹೇಳಬಹುದು. ಅದರಲ್ಲಿಯ [illegible] ರಾಟಿಯನ್ನು [illegible] ಅವರ ಅರ್ಥ. ಅಲ್ಲದೆ ಅದರ ಅರ್ಥವಾಗಿದ್ದಿ—ಹಾಗೆ ಅದರ ಅರ್ಥವಿದೆ—[illegible] ಅದರ ಅರ್ಥ. [illegible] ರಾಟಿಯನ್ನು ಮತ್ತೆ ಎಂದೂ [illegible]; ಜಾತೀಯ [illegible] ಜಗಳಗಳೂ ಉಳಿಯುವು ಮತ್ತು ಜಗತ್ತಿಗೆ ಶಾಂತಿ ಸಂದೇಶವಾಹಕ [illegible] ಎಂದು ಗಾಂಧೀಜಿ ಮಾತು ಮುಗಿಸಿದರು.

ಬಿರ್ಲಾಭವನ ಹೊಸದಿಲ್ಲಿ ೧೪-೧೩-೪೭

ಮಿತ್ರತ್ವದ ಕೆಲಸ

ಇಂದು ಸಾಯಂಕಾಲ ಪ್ರಾರ್ಥನೋತ್ತರ ಭಾಷಣದಲ್ಲಿ ಗಾಂಧೀಜಿ, ಪ್ರಾರ್ಥನೆಗೆ ಬರುವಾಗ ಸಭಿಕರೊಬ್ಬರು ತಮಗೊಂದು ಪತ್ರ ಕೊಟ್ಟಿದ್ದನ್ನು ಉಲ್ಲೇಖಿಸಿದರು. ಪಾಕಿಸ್ತಾನಕ್ಕೆ ಹೋಗಲೇಬೇಕಾಗಿ ಬಂದ ಮುಸಲ್ಮಾನರೊಬ್ಬರು ತಮ್ಮ ಹಣವನ್ನೆಲ್ಲ [illegible] ಬಂಗಾರದಲ್ಲಿ [illegible] ಇಲ್ಲಿಯೇ ಬಿಟ್ಟು ಹೋಗಬೇಕಾಯಿತೆಂದು ಅದರಲ್ಲಿ ಬರೆದಿದ್ದರು. ಆ ಹಣ ಮತ್ತು ಬಂಗಾರವನ್ನು ಅದರ ಒಡೆಯನಿಗೆ ತಲುಪಿಸಬೇಕಾಗಿದೆ ಎಂದು ಅವರು ಗಾಂಧೀಜಿಯವರನ್ನು ಕೇಳಿದ್ದರು. ಒಡೆಯನ ಹೆಸರು ವಿಳಾಸದೊಂದಿಗೆ ಅದನ್ನು ಕಳಿಸಿಕೊಟ್ಟರೆ ಅವನನ್ನು ಹುಡುಕಿ ಅವನಿಗೆ ಅದನ್ನು ಕಳಿಸಬೇಕೆಂದು ಅಧಿಕಾರಿಗಳಿಗೆ ಸಂತೋಷದಿಂದ ಹೇಳುತ್ತೇನೆ ಎಂದು ಗಾಂಧೀಜಿ ನುಡಿದರು.

ನಯೀ ತಾಲೀಮು

ಅವರು ವಚನ ಕೊಟ್ಟಂತೆ ನಯೀತಾಲೀಮಿನ ಬಗ್ಗೆ ವಿವರಿಸಿದರು. ಹರಿಜನ ನಿವಾಸಕ್ಕೆ ಅವರು ಹೋದಾಗ ಯಾವ ಕ್ರಮದಂತೆ ವಿಷಯಗಳನ್ನು ನಿವೇದಿಸಿದರೊ ಆ ಕ್ರಮದಲ್ಲಿ ಈ ವಿಷಯವೆ ಮೊದಲು ಬಂದಿತು. ನಯೀತಾಲೀಮು ಕೇವಲ ೫ ವರ್ಷದ ಹಸುಗೂಸು. ಹೊಸ ತಳಹದಿಯ ಮೇಲೆ ಇಡೀ ರಾಷ್ಟ್ರವೆ ಶಿಕ್ಷಣದ ವಿಚಾರವನ್ನು ಮಾಡುವಷ್ಟು ದೀರ್ಘಾವಧಿ ಅನುಭವ ಅದಕ್ಕೆ ದೊರೆತಿಲ್ಲ. ಕೈಗೆಲಸದ ಮೂಲಕ ಶಿಕ್ಷಣವೆಂದು ಅದು ಉಚಿತ ಮತ್ತು ಲೋಕಪ್ರಿಯವಾಗಿ ಕರೆಯಿಸಿಕೊಳ್ಳಲಾಗುತ್ತದೆ. ಇದು ಸತ್ಯದ ಒಂದು ಅಂಶಮಾತ್ರ. ಅವರ ಈ ಹೊಸ ಶಿಕ್ಷಣದ ಬೇರು ಮಾತ್ರ ಇದಕ್ಕೂ ಆಳವಾಗಿದೆ. ಮಾನವನ ಪ್ರತಿಯೊಂದು ಚಟುವಟಿಕೆಯಲ್ಲಿ—ಅದು ವೈಯಕ್ತಿಕ ಜೀವನದಲ್ಲಿಯಿರಲಿ ಇಲ್ಲವೆ ಸಾಂಘಿಕಜೀವನದಲ್ಲಿಯಿರಲಿ—ಸತ್ಯ ಮತ್ತು ಪ್ರೇಮವನ್ನು ಅಳವಡಿಸಿಕೊಳ್ಳುವದರಲ್ಲಿಯೆ ಅದು ಅಡಕವಾಗಿದೆ. ಜೀವನದ ಚಟುವಟಿಕೆಗಳೆಲ್ಲ ಸತ್ಯ ಮತ್ತು ಪ್ರೇಮದಿಂದಲೆ ಹೊರಹೊಮ್ಮುತಿವೆಯೆಂಬುವನ್ನು ಅಕ್ಕಿಯ ಕೈಗಾರಿಕೆಯ ಮೂಲಕ ಶಿಕ್ಷಣದ ವಿಚಾರ ಹೊಳೆಯಿತು. ಜೀವದ ಶಿಕ್ಷಣ ಎಲ್ಲರಿಗೂ ದೊರೆಯತಕ್ಕದ್ದು ಮತ್ತು ಪ್ರತಿಯೊಬ್ಬರ ನಿತ್ಯದ ದೈನಿಕ ಜೀವನಕ್ಕೂ ಅದು ಉಪಯುಕ್ತವಾಗಿರಬೇಕು ಎಂಬುದೆ ಆ ಪ್ರೇಮ ಸಂದೇಶ. [illegible] ಶಿಕ್ಷಣ ಪುಸ್ತಕದಿಂದ ದೊರೆಯಲಾರದು. [illegible] ಪುಸ್ತಕಗಳನ್ನು ಅವಲಂಬಿಸಲಾರದು. ಧಾರ್ಮಿಕ ಪಂಥಗಳಿಗೂ ಅದರ ಸಂಬಂಧ ಇರದು. ಧಾರ್ಮಿಕರೆಂಬ ಅಹಕ್ಕೆ ಕರೆಯುವುದೇ ಅವರ ಅದು ವಿಶ್ವಧರ್ಮವು. ಅದರಿಂದಲೆ ಎಲ್ಲ ಧಾರ್ಮಿಕ ಪಂಥಗಳು ಹುಟ್ಟಿವೆ. ಅದರಿಂದ ಜೀವನ ಪುಸ್ತಕದಿಂದಲೆ ಅದನ್ನು ಕಲಿಯತಕ್ಕದ್ದು; ಅದಕ್ಕೇನೂ ಬೆಲೆ ತೆರಬೇಕಾಗಿಲ್ಲ. ಜಗತ್ತಿನಲ್ಲಿ ಯಾವಶಕ್ತಿಯೂ ಅದನ್ನು ಕಸಿದುಕೊಳ್ಳಲು ಹೋಗಲಾರದು. ಸತ್ಯ ಮತ್ತು ಅಹಿಂಸೆಯಿಂದ ಕೂಡಿರುವ ಇಂಥ ಶಿಕ್ಷಣವು ಅಳವಡದೇ [illegible] ಅದರ ಅಭ್ಯಾಸದ ಅಕ್ಕಿಯ [illegible] ಸತ್ಯ ಮತ್ತು ಪ್ರೇಮಗಳಿಗಾಗಿ ಪ್ರಾಣ ಬಿಡಲು ಸಿದ್ಧವಿರುವ ಅವರು ಸಾಕಾರವಾಗಬಲ್ಲರೇ? [illegible] ಪ್ರಶ್ನೆ ಅವರು ಉತ್ತರಿಸುತ್ತ, ಬೇಕೆಂದರೆ ರಾಜ್ಯ ಶ್ರೀ ಪುಟದಿಂದ [illegible] ಮತ್ತು [illegible] ನೇ ಪುಟ ನೋಡಿ [illegible]

ಚಲಚ್ಚಿತ್ರ ಪರಿಶೀಲನ ಸಮಿತಿಯ ಪುನರ್ರಚನೆ

ಚಲಚ್ಚಿತ್ರವೆಂದು ವಿಶ್ವವ್ಯಾಪಿಯಾದ ಶಾಪ. ಅದು ನಮ್ಮ ತಲೆಯಮೇಲೆ ಪಕ್ಷಿ ಮರಿಯಂತೆ ಬಂದಿ ಳಿದಿದೆ. ಅದರ ಧ್ಯೇಯಗಳು ನಮ್ಮ ಮನಸ್ಸಿನಲ್ಲಿ ಉಂಟಾಗುವ ಪರಿಣಾಮಗಳನ್ನು ನಾವು ಬಲ್ಲೆವೆಂಬುದು ಇನ್ನೂ ಪರೀಕ್ಷಿಸಿನೋಡಬೇಕಾದ ಸಂಗತಿ. ಹಾಗಾದರೆ ಈ ಧ್ಯೇಯಗಳಾದರೂ ಯಾವುವು? "ಫಿಲ್ಮ್" ನಲ್ಲಿ ರೋಜರ್ ಮಾರ್ಕ್ಸ್‌ವೆಲ್ಲನು ಬರೆಯುವಂತೆ ಅವು ಹೀಗಿವೆ:—

(೧) ಸಾಮಾನ್ಯವಾಗಿ ಹಣ ಒಳ್ಳೆಯ ವಸ್ತು.

(೨) ಸ್ತ್ರೀಯರೊಂದಿಗೆ ಮಾಡುವ ಶೋಕೀ ಜೀವನ ನೈಸರ್ಗಿಕವಾದುದು.

(೩) ನಿಶ್ಚಿಂತ ವ್ಯಾಪಾರಿಗಳು ಮತ್ತು ರಾಜರು ಹೆಂಗಸರಲ್ಲಿ ಆಸಕ್ತರಾಗಿರುವುದು ಕೇವಲ ಸಹಜವಾದುದರಿಂದ ನ್ಯಾಯ.

(೪) ಮೇಲಧಿಕಾರಿಗಳು ಮಾಡಬೇಕಾದ ಕೆಲಸ ಏನೂ ಇಲ್ಲ.

(೫) ಧನದಾನದಿಂದ ತಂದೆಯರು ಮಗಳನ್ನು ಹಾಳು ಮಾಡುತ್ತಾರೆ.

(೬) ಹೆಂಗಸರಿಗೆ ಗಂಡಸರೇ ಧನಾಶ್ರಯ.

(೭) ಹೊಟೇಲು ಜೀವನದೊಡನೆ ರಾತ್ರಿಯ "ಜಲಸಾ" ಇರುವುದು ಅಪೇಕ್ಷಣೀಯ.

(೮) ಪ್ರತೀಕಾರವೇ ಪ್ರಾಮಾಣಿಕನ ಉತ್ತರ ಸ್ತ್ರೀಯ ಬಾಹ್ಯಸೌಂದರ್ಯವನ್ನೇ ಪುರುಷರು ಪರಿಶೀಲಿಸಬೇಕು ಅದರಲ್ಲೂ ಮಾರ್ಮಿಕ "ಪಂಚಾಂಗಗಳನ್ನು."

(೯) ಇಷ್ಟಾನಿಷ್ಟ ವಿವೇಕದಿಂದ ಹೆಂಗಸರನ್ನು ತೃಪ್ತಿಕರವಾಗಿ ನಿರ್ಣಯಿಸಬೇಕು.

(೧೦) ಜೀವನದಲ್ಲಿ ಸಂಭೋಗವೇ ಅತಿ ಮುಖ್ಯವಾದ ಆನಂದ.

(೧೧) ನಿನಗೆ ಎಲ್ಲೆಂಬುದುಗೊತ್ತಿಲ್ಲದಿರುವವರೆಗೆ ಹೆಂಗಸರು ಬಹಳ ಸಮೀಪವರ್ತಿಗಳಾಗಿರುತ್ತಾರೆ.

(೧೨) ಗಂಡಸರ ಬಾಹ್ಯ ಸೌಂದರ್ಯವನ್ನು ಹೆಂಗಸರು ಗಮನಿಸಬಹುದು ಮತ್ತು ತನ್ಮೂಲಕ ತಮ್ಮ ದರತ್ತ ಅತಿ ಹತ್ತಿರದ ಲಕ್ಷ್ಯವನ್ನು ಸೆಳೆಯಬಹುದು.

(೧೩) ಅಧ್ಯಾತ್ಮದ ವಿಷಯವೆಲ್ಲ ಒಂದೇ ಹಾಸ್ಯಾಸ್ಪದವಾದವು, ವಿಲಕ್ಷಣವಾದವು ಇಲ್ಲವೆ ವಿದೂಷ್ಯವೆನಿಸಿದವು ಅಥವಾ ಆಶ್ಚರ್ಯಜನಕವಾದವು. (ಕಲೆಯೆಂದರೆ ಶೋಕಿ, ಧರ್ಮವೆಂದರೆ ಹುಚ್ಚು, ಯೋಗವೆಂದರೆ ಮೃದುಮಾರ್ಗದಲ್ಲಿ ತೀಕ್ಷ್ಣ ಆಶೆ ಪಡುವುದು).

(೧೪) ಸುಧಾರಕರೆಂದರೆ ನಿರುಪಾಯಕಾರಿಗಳಾದ ಮುದಿಗಳು ಇಲ್ಲವೆ ರಗಳೆ ಮಾಡುವವರು.

(೧೫) ರಾಷ್ಟ್ರೀಯ ಸ್ವದೇಶ ವಿಮರ್ಶೆಗಿಂತ ವಿವೇಕರಹಿತವಾದ ದೇಶಭಕ್ತಿಯೇ ಬೇಕು.

(೧೬) ಪರದೇಶೀಯನಾಗಿರುವುದೆಂದರೆ ಶಂಕಾಸ್ಪದನಾಗಿರುವುದು; ಪೌರಸ್ತ್ಯನಾಗಿರುವುದೆಂದರೆ ಭಯಂಕರನಾಗಿರುವುದು; ಆಕರಾಳವಿಕರಾಳನಾಗಿರುವುದು.

(೧೭) ಸುಖಸಾಧನಗಳಿದ್ದು ಬಿಟ್ಟರೆ ಬಾಳೆಂದರೆ ಜಾಸಾದಿ. ದಾರಿದ್ರ್ಯವೆಂದರೆ ಹಾರಿ ತೆಳ್ಳಗಾಗುವುದು. ದುಡಿಗರಿಗೆ ಹುಡುಗಿ ಒಕ್ಕಿದರೆಂದರೆ ಜೀವನದ ತಿರುಳೆಂದರೆ ತಾಪತ್ರಯಗಳೆಲ್ಲ ಮುಗಿದು ನೋಡದ ಹಾಗೆ. ವಿವೇಕವಿಚ್ಛೇದ ಮತ್ತು ಜಾರಿ ಮಾಡುವುದು ಅತಿ ಸುಲಭದ ಕೆಲಸಗಳು. ಐಶ್ವರ್ಯವಾಗಲೀ ಸಂಗೀತ ಸತ್ವಪರೀಕ್ಷೆಗೆ ಬರುವ ಹುಚ್ಚು.

ಅಮೇರಿಕದ ಸಂಯುಕ್ತ ಸಂಸ್ಥಾನದಲ್ಲಿ ಚಲಚ್ಚಿತ್ರಸಂಶೋಧನ ಸಮಿತಿಯು ಆಳವಾಗಿ ಅಭ್ಯಸಿಸಿ ಐದರಲ್ಲಿ ನಾಲ್ಕು ಚಿತ್ರಗಳು ಮಕ್ಕಳಿಗೆ ಯೋಗ್ಯವಲ್ಲವೆಂದೂ ಸಂಸಾರ ನೂರಕ್ಕೆ ೩೭ ಸಮಾಜಘಾತಕವೆಂದೂ ವರದಿಮಾಡಿದೆ. "ಜೇಬಿನ್ಸ್ ಮ್ಯಾಗಜೀನ್"ನಲ್ಲಿ ವೈಜ್ಞಾನಿಕ ಸಂಶೋಧನೆಯಿಂದ ಈ ಕೆಳಗಿನ ತೀರ್ಮಾನಗಳು ಬರಲಾಗಿದೆ ಎಂದು ಹೇಳಿದೆ.

(೨) ಬಹಳ ಸಲ ಚಲಚ್ಚಿತ್ರಕ್ಕೆ ಹೋಗುವುದರಿಂದ ಮಕ್ಕಳಿಗೆ ಸರಿಯಾದ ನಿದ್ರಾಭಂಗ ಉಂಟಾಗಿದೆ.

(೩) ಚಲಚ್ಚಿತ್ರಗಳಲ್ಲಿ ಸಮಾಜದ ನೀತಿಗೆ ವಿರುದ್ಧವಾದ ನಡತೆ ಮತ್ತು ಚಿತ್ತವೃತ್ತಿಗಳನ್ನು ಮಕ್ಕಳು ಎಳೆಯರು ಕಲಿಯುತ್ತಾರೆ.

(೪) ಕಾಮೋತ್ತೇಜಕ ಕಲ್ಪನೆಗಳನ್ನು ಹುಟ್ಟಿಸುವ ಚಿತ್ರಗಳು ಎಷ್ಟೋ ಮಕ್ಕಳಿಗೆ ಸಂಧ್ಯಾವನೆ ಮತ್ತು ಶಾರೀರಿಕಗಳತ್ತ ಮನಸ್ಸನ್ನು ತಿರುಗಿಸುವುದು.

(೫) ಬಹಳ ಚಿತ್ರಗಳಲ್ಲಿ ಕಲಾಚಮತ್ಕಾರವಿಲ್ಲವೆ ಸಾಮಾಜಿಕ ಜೀವನ ಸೌಂದರ್ಯದ ಅಂಶಗಳೇ ಇರುವುದಿಲ್ಲ.

ಡಾ. ಮನ್ರೋ ಜಿ. ಲ್ಯಾಕ್ ಎಂಬವರು ಅದನ್ನು [illegible]

ನಾರುತ್ತ, "ಈ ರಕ್ತಗಡುಗು ಗಂಡಾಂತರಗಳ, ಬೆಂಚಾಟಿ ಬಡಿದಾಟಗಳ ಪ್ರದರ್ಶನವು ಚಿಕ್ಕಮಕ್ಕಳ ಎಳೆಯ ಮನಕ್ಕೆ ಅಂಜಿಕೆಯುಂಟುಮಾಡುವವು; ಆದರಿಂದ ಅನರ್ಥ ಪರಂಪರೆಗಳುಂಟಾಗದಿರದು ಎಂದಿದ್ದಾರೆ.

ಅಮೇರಿಕವು ಪೂನಾ ನಗರದಿಂದ ಅತಿ ದೂರದಲ್ಲಿದೆ. ಆದರೆ ಪೂನಾನಗರದ ಪ್ರಕಟನೆಯೊಂದರಲ್ಲಿ ಒಂದೇದಿನ ನಾನು ೩ ಚಿತ್ರಗಳ ಹೆಸರುಗಳನ್ನು ಈ ಕೆಳಗಿನಂತೆ ಓದಿದೆ:

"ಸಂಗೀತಕಾಲೆಯಲ್ಲಿ ಕೊಲೆ" "ಕೊಲೆಗಾಗಿ ಬೇಕು" ಮತ್ತು "(ಧೀರ) ಪತ್ತೆದಾರಿ"

ಹೇಗೇ ಆಗಲಿ, ರಿವಾಕ್ತ ಸುಲಿದೇ ಸುಲಿಯುತ್ತೇನೆಂದು ಕುಳಿತ, ಕೋಟಿಗಟ್ಟಲೆ ರೂಪಾಯಿ ಬಂಡವಾಳವನ್ನು ಆಧರಿಸಿರುವ ಈ ರಾಷ್ಟ್ರೀಯ ಭೂತವನ್ನು ತಡೆಯುವುದು ಹೇಗೆ?—ಎಂಬುದೇ ಒಂದು ಪ್ರಶ್ನೆಯಾಗಿದೆ. ಆದಾರಕ್ಕೆ ಬೆರಕೆ ಮಾಡಿ ಮಾರುವ ಹಾಗೆ ಪ್ರಾಮಾಣಿಕವಿಲ್ಲದ ಧನಭಕ್ಷಕ ವ್ಯಾಪಾರಿಗಳಿಗೆ ನಾವು ಅವಕಾಶಕೊಡುವುದಿಲ್ಲವಾದರೆ, ರಾಷ್ಟ್ರೀಯ ಜೀವನ ಮತ್ತು ಗುಣನಡತೆಗಳನ್ನು ಕೆಡಿಸುಬಿಟ್ಟಿಕ್ಕುವ ವ್ಯಾಪಾರಿ ವರ್ಗಕ್ಕೆ ಅವಕಾಶ ಕೊಡುವುದು ನ್ಯಾಯವಾದೀತೇ? ಉತ್ತರ ಹೇಗಾ ನಿಷೇಧಾತ್ಮ ನಿಬಂಧನೆಗಳ, ಬಿ. ಬಿ. ಸಿ. ಯಂತೆ ಒಂದು ಸ್ವತಂತ್ರ ಚಲಚ್ಚಿತ್ರ ಕಂಪನಿಯನ್ನು ಸ್ಥಾಪಿಸಬೇಕೆಂದು ಶ್ರೀ ಸಿಂಕರೆ ಹೇಳುತ್ತಾರೆ; ಆದರೆ ಅದಕ್ಕೆ ಬಹಳ ಸಮಯ ಹಿಡಿಯಬಹುದು. ಸದ್ಯಕಾಲದಲ್ಲಿ ಕೇಂದ್ರ ಮತ್ತು ಪ್ರಾಂತ ಸರಕಾರಗಳು ಚಲಚ್ಚಿತ್ರ ಪರಿಶೀಲನ ಸಮಿತಿಗಳನ್ನು ಪುನರ್ರಚಿಸಲು ತವಕಪಡಬಾರದು. ಮತ್ತು ಅಮೇರಿಕದ ಸಂಯುಕ್ತ ಸಂಸ್ಥಾನದಲ್ಲಿ ಇರುವಂತೆ ಚಲಚ್ಚಿತ್ರ ಸಂಶೋಧನ ಮಂಡಲವೊಂದನ್ನು ಸ್ಥಾಪನೆಗೊಳಿಸುವ ಸಾಧ್ಯತೆ ಯೋಚಿಸಬೇಕು.

— ಸಿ. ಜಿ. ದೇಸಾಯಿ

ಪ್ರಶ್ನೋತ್ತರ

ಭೀಕರ ಗಂಡಾಂತರಗಳನ್ನು ಎದುರಿಸುವಾಗ ಗಾಂಧೀಜಿ ಉಪವಾಸವನ್ನೇಕೆ ಕೈಕೊಳ್ಳುತ್ತಾರೆ? ಭಾರತವಾಸಿಗಳ ಜೀವನದ ಮೇಲೆ ಈ ಉಪವಾಸದ ಪರಿಣಾಮವು ಯಾವ ಬಗೆಯುದು ?

ಈ ಬಗೆಯ ಪ್ರಶ್ನೆ ಮೊದಲೊಮ್ಮೆ ನನಗೆ ಕೇಳಲಾಗಿತ್ತು, ಆದರೆ ಇದೇ ಶಬ್ದದಲ್ಲಿ ಅಲ್ಲ. ಇದಕ್ಕೆ ಉತ್ತರ ತೀರ ಸುಲಭವಿದೆ. ಅಹಿಂಸಾವಾದಿಯ ಬತ್ತಳಿಕೆಯಲ್ಲಿ ಉಪವಾಸವು ಕಟ್ಟಕಡೆಯ ಅಸ್ತ್ರ. ಮಾನವನ ಪ್ರತಿರೋಧಕ ಶಕ್ತಿಯು ಸೋತಾಗ ಅಹಿಂಸಾವಾದಿಯು ಉಪವಾಸ ಕೈಕೊಳ್ಳುತ್ತಾನೆ. ಈ ಉಪವಾಸವು ಪ್ರಾರ್ಥನಾ ಭಾವವನ್ನು ಚುರುಕಾಗಿಸುವದು. ಅಂದರೆ, ಉಪವಾಸವು ಆಧ್ಯಾತ್ಮಿಕ ಕ್ರಿಯೆಯಾಗಿರುವ ಮೂಲಕ ದೇವರನ್ನು ಮೊರೆಹೊಗುವ ರೀತಿಯಿದು. ಉಪವಾಸ ಮಾಡುವವನು ಜನಸ್ತೋಮಕ್ಕೆಲ್ಲ ಬಲ್ಲವನಾಗಿದ್ದರೆ ಉಪವಾಸವು ಅವರೆಲ್ಲರ ಸುಪ್ತ ಸುಚೇತನವನ್ನು ಜಾಗ್ರತಗೊಳಿಸುವದು. ಇದೇ ಜನಸಾಮಾನ್ಯರ ಮೇಲಾಗುವ ಉಪವಾಸದ ಪರಿಣಾಮ. ಆದರೆ ಜನತೆಯು,ಸಹಾನುಭೂತಿಯ ತಪ್ಪು ತಿಳುವಳಿಕೆಯಿಂದ ತಾನು ಪ್ರೀತಿಸುವ ವ್ಯಕ್ತಿಯ ಪ್ರಾಣ ರಕ್ಷಣೆ ಮಾಡಹೋಗಿ ತಪ್ಪುವ ಸಂದರ್ಭಗಳೂ ಉಂಟು. ಜನತೆಯು ಈ ಬಗೆಯ ತಪ್ಪನ್ನು ಎದುರಿಸಲೇಬೇಕು. ತಾನು ಮಾಡುವದು ಸರಿಯೆಂದು ಖಂಡಿತವಾಗಿರುವಾಗ ಸಾಧಕನೆಂದೂ ಕ್ರಿಯಾವಿಮುಖನಾಗತಕ್ಕದ್ದಲ್ಲ. ಇದು ಅವನ ನಿರೀಕ್ಷಾಬಲವನ್ನು ಹೆಚ್ಚಿಸುವ ಬದಲು ಅದನ್ನು ಕುಂಠಿಸುತ್ತದೆ. ಈ ಬಗೆಯ ಉಪವಾಸವು ಅಂತರ್ವಾಣಿಯ ನಿರ್ದೇಶದಂತೆ ಕೈಕೊಳ್ಳಲ್ಪಡುವದರಿಂದ ಇದರಲ್ಲಿ ಮುಡುಕೆಂಬುದಿಲ್ಲ.

ಮೋ. ಕ. ಗಾಂಧಿ.

ಮೊಟ್ಟಮೊದಲು ಚುರೂಟು

ಯಾವುವಾದರೊಂದಕ್ಕೆ ಮೊದಲು ಅನುಕೂಲ ಮಾಡಿಕೊಡುವುದು ಇಂದಿನ ರೀತಿ. ಕಾಗದಪತ್ರಗಳಲ್ಲಿ ಹೀಗೇ ಎಂದು ಬರೆದಿರದಿದ್ದರೂ ಸರಕಾರದ ಧೋರಣವೇನೆಂಬುದನ್ನು ಅದು ಕೆಲವು ಕೈಗಾರಿಕೆಗಳಿಗೆ ಕೊಡುತ್ತಿರುವ ಬೆಂಬಲದಿಂದಲೇ ತಿಳಿದುಕೊಳ್ಳಬಹುದಾಗಿದೆ. ಈ ಬೆಂಬಲದಲ್ಲಿ ಇತ್ತೀಚಿನದೆಂದರೆ ದಿಂಡಿಗಲ್ಲಿನ ಸಮೀಪದಲ್ಲಿರುವ ವೇದಸಂದೂರಿನಲ್ಲಿ ಚುರೂಟುಗಳಿಗೆ ಸುತ್ತುವ ಬೇಕಾದ ತಂಬಾಕಿನ ಎಲೆಗಳ ಸಂಶೋಧನಾಲಯ.

ಮೇಲಿನ ಯೋಜನೆಗೆ ೩ ಲಕ್ಷ ರೂಪಾಯಿಗಳು ಬೇಕೆಂದು ಸುದ್ದಿ, ಇದನ್ನು ಕೇಂದ್ರ ಹಿಂದೀ ತಂಬಾಕು ಸಮಿತಿ ಕೊಡುತ್ತದೆಯಾದರೂ ಆ ಕೆಲಸದ ನಿರ್ವಾಹಕ್ಕೆ ಎಲ್ಲಿಂದ ತಜ್ಞರನ್ನು ಕರೆಸುವರೆಂಬುದು ತಿಳಿಯಬೇಕಾದ ಸಂಗತಿ. ಹೆಚ್ಚು ಆಹಾರವನ್ನು ಬೆಳೆಯಲು ಅವರ ವಿಶೇಷ ತಜ್ಞತೆಯನ್ನು ಬಳಸಿಕೊಳ್ಳಬೇಡವೆ?

ಜೆ. ಸಿ. ಕುಮಾರಪ್ಪ

ಚುಕ್ಕಾಣಿಯಿಲ್ಲದ ಹಡಗು

ಕಳೆದ ಶತಮಾನದಲ್ಲಿ-ಬ್ರಿಟಿಶರ ಹಿತಕ್ಕಾಗಿ-ಹಿಂದೀ ಹಡಗುಗಳ ವ್ಯವಸ್ಥಾಪಕ ಮೂಲೋತ್ಪಾಟನ ಹೊಂದಿತ್ತು. ಮೊನ್ನಿನ ಕೆಲ ದಶಕಗಳಲ್ಲಿ ಖಾಸಗಿ ಉದ್ಯಮಿಗಳ ಪ್ರಯತ್ನದ ಫಲವಾಗಿ ಜಗತ್ತಿನ ಪ್ರಮುಖ ನೌಕಾ ವ್ಯಾಪಾರಿ ರಾಷ್ಟ್ರಗಳ ಹಳೆಯ ಹಡಗುಗಳಿಂದ ಕೆಲ ದೋಣಿಗಳ ನ್ಯಾಯದ್ದು "ಹಿಂದೀ ವ್ಯಾಪಾರಿ ನೌಕಾದಲ" ಎಂದು ರೂಪಿಸಲ್ಪಟ್ಟಿದೆ. ಹಿಂದುಸ್ಥಾನದ ಪರದೇಶ ವ್ಯಾಪಾರದ ಅವಶ್ಯಕತೆಯನ್ನು ನೋಡಿದರೆ ಸಾಗರಗಾಮಿಯಾದ ಮಹಾ ನೌಕೆ ಬೇಕು; ನಮಗಾಗಿರುವುದಾದರೋ ಒಬ್ಬನು ಹತ್ತಿಕೊಂಡು ಹೋಗಬಹುದಾದ ಪಾತಿ ಮಾತ್ರ ! ಲಕ್ಷಗಟ್ಟಲೆ ಟನ್ ಭಾರ ಹೊರುವ ಹಡಗುಗಳು ಬೇಕಾಗಿರುವಾಗ ವಾಣಿಜ್ಯ ಮಂತ್ರಿಗಳು ೧ ಲಕ್ಷ ಟನ್ ಹೊರುವ ಹಡಗುಗಳನ್ನು ತಯಾರಿಸುವ ೩ ಕಂಪನಿಗಳ ಯೋಜನೆಯ ಮಾತನ್ನೆತ್ತಿದ್ದಾರೆ! ರಣವುಳ್ಳನಿಗೆ ಅಗತ್ಯವಾದ ಅರಬ್ಬೀ ಕುದುರೆಯನ್ನು ಒದಗಿಸುವುದರ ಬದಲು ಆವರು ಡೊಂಕು ಕತ್ತೆಯೊಂದನ್ನು ಕೊಡಬಂದಿದ್ದಾರೆ !

ಈ ಯೋಜನೆಯಾದರೂ ಅಷ್ಟು ವಿವೇಚಿಸಿ ತಯಾರಿಸಿದ್ದಲ್ಲ; ಅಗತ್ಯವಾದ ಸಂಘಟನೆಯ ಮಾಹಿತಿಯಿಂದ ಮಾಡಿದ್ದಲ್ಲ. ಯೋಜನೆಯೆಂದರೆ ಕಂಪನಿಗಳಲ್ಲಿ ಸರಕಾರ ಶೇರು ತೆಗೆದುಕೊಂಡು ಭಾಗವಹಿಸುವುದು—ಇಷ್ಟೇ. ಹಡಗಿನ ಕಂಪನಿಗಳೂ ಹೆರವರೂ ಶೇರು ತೆಗೆದುಕೊಳ್ಳಬಹುದು. ಏಜನ್ಸಿಗಳು ವ್ಯವಸ್ಥಾಪಕತ್ವ ವಹಿಸಿವೆ. ಅವುಗಳ ಧೋರಣಗಳನ್ನು ನಿಯಂತ್ರಿಸುವುದು ಹೇಗೆ? ಅದನ್ನಂತೂ ಸ್ಪಷ್ಟಪಡಿಸಿಲ್ಲ. ಅವುಗಳ ಕಾರ್ಯಕ್ರಮದ ಪದ್ಧತಿಯನ್ನು ಕೂಡ ವಿವರವಾಗಿ ಹೇಳಿಲ್ಲ. ಕೊಟ್ಟ ಮುದ್ದೆಗಳ ಕರಡು ಓದಲಿಕ್ಕೆ ಸೊಗಸೆನಿಸಿದರೂ ಅಸ್ಪಷ್ಟವಾಗಿದೆಯಲ್ಲದೆ ಗಲಿಬಿಲಿ ಉಂಟು ಮಾಡುವಂತಿದೆ; ಆದುದರಿಂದ ಓದುಗರಿಗೆ ಓದಿದ ಮೇಲೆ ಹೊಸದೇನನ್ನೂ ತಿಳಿದುಕೊಂಡಂತೆನಿಸದು. ಹೀಗೆ ಸುತ್ತಿದಲ್ಲೇ ಸುತ್ತುವುದಕ್ಕೆ ಮುಖ್ಯ ಕಾರಣವೆಂದರೆ, ಒಂದೇ ಒಂದು ಅಚ್ಚುಕಟ್ಟಾದ ರಾಷ್ಟ್ರೀಯ ಧೋರಣವಿಲ್ಲದೆ ಪರಸ್ಪರ ವೈಷಮ್ಯವುಳ್ಳ ನಾನಾವಿಧದ ಹಿತಗಳೆಲ್ಲವನ್ನೂ ಒಟ್ಟುಗೂಡಿಸ ಹೊರಟಿರುವುದೇ.

ಸರಕಾರವು ಮೊಟ್ಟಮೊದಲು ತನ್ನ ಆರ್ಥಿಕ ಧೋರಣವನ್ನು ನಿರ್ಧರಿಸಿಕೊಳ್ಳಬೇಕು—ಆಗ ಅದರ ಪರದೇಶ ವ್ಯಾಪಾರ ಧೋರಣಾನುಗುಣವಾಗಿ ಅದು ಲಕ್ಷಣಬದ್ಧವಾಗುತ್ತದೆ. ಅದಾದ ಬಳಿಕ ನೌಕಾ ಧೋರಣವು ತನ್ನಿಂದ ತಾನೇ ಸ್ವಸ್ಥಾನವನ್ನಲಂಕರಿಸುವುದು. ಎಲ್ಲ ಪ್ರಮುಖ ಉದ್ಯೋಗಗಳಿಗೂ ನಿಶ್ಚಿತ ಕಾರ್ಯಕ್ರಮ ನಿರ್ಣಯಿಸಲ್ಪಟ್ಟಾಗ ಈ ನೌಕಾ ವ್ಯವಹಾರವನ್ನು ಹೇಗೆ ನಡೆಸಬೇಕೆಂಬುದನ್ನು ನಾವು ತಿಳಿದುಕೊಳ್ಳಬಲ್ಲೆವು—ಯಾರಿಗಾದರೂ ಗುತ್ತಿಗೆ ಬಿಟ್ಟುಕೊಡುವುದೋ, ಸ್ಪರ್ಧಿಸುವುದೋ, ರಾಷ್ಟ್ರೀಕರಿಸುವುದೋ ಇಲ್ಲವೆ ಸರಕಾರದ ನಿಯಂತ್ರಣದಲ್ಲಿ ತೆಗೆದುಕೊಳ್ಳುವುದೋ ಎಂಬುದನ್ನು ಅನಂತರ ವಿಚಾರಿಸಬಹುದು. ಇದರಿಂದ ಅಗತ್ಯವಾದ ಹಣವನ್ನು ಸಂಗ್ರಹಿಸುವ ದಾರಿಯೂ ಹೊಳೆಯುತ್ತದೆ.

ಈ ಸ್ಥಿತಿಯಲ್ಲಿ ಈ ಪ್ರಶ್ನೆಯನ್ನು ಬಹು ಎಚ್ಚರದಿಂದ ಬಿಡಿಸಬೇಕು; ಏಕೆಂದರೆ, ಅಗಲೇ ಸಮರ್ಥವಾಗಿರುವ ಪರದೇಶಗಳೆದುರು ನಾವು ಎಷ್ಟೋ ಹಿಂದಿದ್ದೇವೆ. ಅಸ್ತವ್ಯಸ್ತವಾದ ಯಾವ ಯೋಜನೆಯೂ ಸಂದರ್ಭೋಚಿತವೆನಿಸದು. ರಾಷ್ಟ್ರದ ಆರ್ಥಿಕ ಚಟುವಟಿಕೆಗೆ ಹಡಗಿನ ವ್ಯಾಪಾರವು ಜೀವನಾಡಿಯಾಗಿರುವುದರಿಂದ ಈ ಪ್ರಾಣಪ್ರದವಾದ ವ್ಯಾಪಾರ ಸಾಧನವನ್ನು ಕಟ್ಟಲು ಸರಕಾರವು ಬಹು ಎಚ್ಚರಿಕೆಯಿಂದ ಪರಿಶೀಲಿಸುವುದೆಂದು ಆಶಿಸುತ್ತೇವೆ. ಕಾರ್ಯಕ್ರಮದ ಕರಡನ್ನು ತಯಾರಿಸುವಾಗಲಾದರೂ ಇದರ ಪರಿಣಾಮಕ್ಕೆ ಗುರಿಯಾಗುವ ಉದ್ಯಮಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅವರ ಸಲಹೆ ಸೂಚನೆಗಳೊಂದಿಗೆ ಈ ಸಮಸ್ಯೆಯನ್ನು ಬಿಡಿಸಲು-ಪ್ರಯತ್ನಿಸಬೇಕೆಂದು ಸೂಚಿಸುತ್ತೇವೆ.

— ಜೆ. ಸಿ. ಕುಮಾರಪ್ಪ

ಎಂದಿಗೂ ಅಪಾಯಕರವಲ್ಲ

ಯುಕ್ತವಾಗಿರುವಾಗ, ಎಷ್ಟೇ ಅಪ್ರಿಯವಾಗಿದ್ದರೂ ಸತ್ಯವನ್ನೇ ಹೇಳತಕ್ಕದ್ದು. ಅಯುಕ್ತವಾದುದು ಯಾವಾಗಲೂ ಅಸತ್ಯ, ಅದನ್ನೆಂದಿಗೂ ಹೇಳತಕ್ಕದ್ದಲ್ಲ. ಒಕ್ಕೂಟದಲ್ಲಿಯ ಹಿಂದುಗಳ ದುಷ್ಕೃತ್ಯಗಳನ್ನು ಹಿಂದುಗಳೇ ಘಂಟಾಘೋಷವಾಗಿ ಹೇಳಬೇಕು, ಪಾಕಿಸ್ತಾನದಲ್ಲಿಯ ಮುಸಲ್ಮಾನರ ದುಷ್ಕೃತ್ಯಗಳನ್ನು ತಡೆಯಬೇಕು ಇಲ್ಲವೆ ನಿಲ್ಲಿಸಬೇಕು. ಅಪರಾಧವನ್ನು ಒಪ್ಪಿಕೊಳ್ಳುವದರಿಂದ ಆತ್ಮಶುದ್ಧಿಯಾಗುತ್ತದೆ [illegible]

ಲಿಪಿ ಸಂಸ್ಕರಣ ಸಮಿತಿಯ ವರದಿ

ಮೈಸೂರು ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಯ ಅಂಗವಾದ ಲಿಪಿ ಸಂಸ್ಕರಣ ಸಮಿತಿಯ ಆಶ್ರಯದಲ್ಲಿ ಕನ್ನಡ ಲಿಪಿ ಸಂಸ್ಕರಣದ ಬಗ್ಗೆ ವಿಚಾರ ಮಾಡಲು ಮೈಸೂರಿನಲ್ಲಿ ಸೇರಿದ್ದ ವಿದ್ವಾಂಸರ ಮತ್ತು ಇತರ ಮಾನನೀಯರ ಮಹಾ ಸಭೆ ಒಂದು ಅಖಿಲ ಕರ್ನಾಟಕದ ತಜ್ಞ ಪ್ರತಿನಿಧಿಗಳ ಸಮಿತಿಯನ್ನು ರಚಿಸಿ ಸಂಸ್ಕರಣದ ವಿಷಯವನ್ನು ಆ ಸಮಿತಿಗೆ ಒಪ್ಪಿಸಿತು. ಆ ಸಮಿತಿ ಇದೇ ನವೆಂಬರ ೨೯ ಮತ್ತು ೩೦ ನೆಯ ತಾರೀಕು ಮೈಸೂರಿನಲ್ಲಿ ಸೇರಿತು.

ಸಭೆಯ ಕಾರ್ಯವನ್ನು ವಿದ್ಯಾ ಮಂತ್ರಿಗಳಾದ ಮಾನ್ಯ ಶ್ರೀ ಡಿ. ಎಚ್. ಚಂದ್ರಶೇಖರಯ್ಯನವರು ಆರಂಭಿಸಿಕೊಟ್ಟರು. ವಿದ್ಯಾಖಾತೆಯ ಮುಖ್ಯಾಧಿಕಾರಿಗಳಾದ ಶ್ರೀ ಆರ್. ಕಸ್ತೂರಿರಾಜ ಚೆಟ್ಟಿಯವರು ಮೊದಲನೆಯ ದಿನವೂ ಶ್ರೀ ಶಂ. ಬಾ. ಜೋಶಿಯವರು ಮಾರನೆಯ ದಿನವೂ ಅಧ್ಯಕ್ಷತೆ ವಹಿಸಿದ್ದರು.

ವಿಷಯ ಸಾಕಷ್ಟು ಚರ್ಚೆಯಾಗಿ ಈ ಕೆಳಗಿನ ತೀರ್ಮಾನಕ್ಕೆ ಬರಲಾಯಿತು.

ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಹತ್ತಾರು ವರ್ಷಗಳ ಹಿಂದೆ ಕೆಲವೊಮ್ಮೆ ಚರ್ಚೆ ನಡೆದು ಅದರ ಫಲವಾಗಿ ದಿವಂಗತ ರಾಜಸೇವಾಸಕ್ತ ಬಿ. ಎಂ. ಶ್ರೀಕಂಠಯ್ಯನವರು ಪ್ರಯೋಗಾರ್ಥವಾಗಿ "ಕನ್ನಡದ ಬಾವುಟ"ದಲ್ಲಿ ಬಳಕೆಗೆ ತರಲು ಪ್ರಯತ್ನಿಸಿದ ಈ ಮೂರು ಮಾರ್ಪಾಟುಗಳು ಮಾತ್ರ ಸದ್ಯಕ್ಕೆ ಸಾಕು.

೧ ದೀರ್ಘ ಎಲ್ಲ ಕಡೆಯೂ ಒಂದೇ ರೀತಿಯಲ್ಲಿ ಇರತಕ್ಕದ್ದು [೯]

೨ ಮಹಾಪ್ರಾಣಗಳನ್ನು ಒಂದೇ ರೀತಿಯಲ್ಲಿ ರಚಿಸತಕ್ಕದ್ದು. [ಕ—ಖ]

೩ ಸಂಯುಕ್ತಾಕ್ಷರಗಳನ್ನು (ಸಜಾತೀಯವಾಗಲೀ, ವಿಜಾತೀಯವಾಗಲೀ) ಅಕ್ಕಪಕ್ಕದಲ್ಲಿ ಬರೆಯುತಕ್ಕದ್ದು. [ಅವರ್‌ನು, ಕರ್‌ನು] ಹೀಗೆ ಮುಂತಾಗಿ ಕೆಲ ತೀರ್ಮಾನಗಳಾದವೆಂದು ಸಮಿತಿಯ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಪ್ರಾರ್ಥನೋತ್ತರ ಭಾಷಣ

(೯ನೇ ಪುಟದಿಂದ)

ದರ್ಶಿಗಳಾದ ಶ್ರೀ ಆರ್ಯನಾಯಕಮ್ ಮತ್ತು ಶ್ರೀಮತಿ ಆಶಾದೇವಿಯವರು ಈ ಪ್ರಶ್ನೆಗೆ ಉತ್ತರ ಕೊಡಬಲ್ಲರು. ಧೋರಣವೆಂದಲ್ಲ ಆದರೆ ಜೀವನ ತತ್ವವೆಂದು ಆವರು ಸತ್ಯ ಮತ್ತು ಪ್ರೇಮದಲ್ಲಿ ವಿಶ್ವಾಸವಿಟ್ಟರೆ ಅದೊಂದು ಬಗೆಯ ಲೋಹ ಚುಂಬಕದಂತೆ ಪರಿಣಮಿಸಿ ಅತಿ ಕಠಿನ ಮಾನವನನ್ನು ಕೂಡ ತನ್ನ ಕಡೆಗೆ ಎಳೆದುಕೊಳ್ಳಬಲ್ಲದು. ಸಾಯಂಪ್ರಾರ್ಥನೆಯ ಕಾಲಕ್ಕೆ ಹಾಡಿದ ಗೀತೆಯಲ್ಲಿಯ ಸ್ಥಿತಪ್ರಜ್ಞನಲ್ಲಿಯ ಗುಣಗಳು ಅವರಲ್ಲಿರಬೇಕು. ಈ ಗುಣಗಳು ಇಲ್ಲದಿದ್ದರೆ ಇಲ್ಲವೆ ತಾವು ಕೈಕೊಂಡ ಕಾರ್ಯವನ್ನು ಆವರು ಬಿಟ್ಟುಗೊಟ್ಟರೆ ಆ ವರ್ಷದ ಮಗು ಸತ್ತು ಹೋಗುವದು. ಆ ಮೂವರಲ್ಲಿ ಕಾರ್ಯದರ್ಶಿಗಳ ಮೇಲೆಯೆ ಹೆಚ್ಚಿನ ಭಾರ ಬೀಳುತ್ತಿದೆ. ವ್ಯಕ್ತಿಗಳನ್ನಪೇಕ್ಷಿಸದೆ- ಅವರು ಸಂಘಟಕರಾಗಿರಲಿ ಬೇರೆಯವರಿರಲಿ—ಅಸ್ತಿತ್ವದಲ್ಲಿ ಉಳಿಯುವಂಥ ಸಂಸ್ಥೆಯಾಗಿ ಅದು ಆರಳಿದೆಯೆಂದು ನಾನು ಹೇಳಕೊಳ್ಳಲಾರೆ.

ಸಾರನಾಥ ಸಿಂಹವೇ ಹಿಂದುಸ್ತಾನದ ಚಿಹ್ನ

ಧರ್ಮಾಶೋಕ ಚಕ್ರವರ್ತಿಯ ಸಾರನಾಥ ಸಿಂಹವೇ ಹಿಂದುಸ್ತಾನದ ಚಿಹ್ನವಾಗುವದೆಂದು ತಿಳಿದುಬರುತ್ತದೆ. ಒಂದು ಕಲ್ಲಿನ ಮೇಲೆ ಮೂರು ಸಿಂಹಗಳು ನಿಂತಿದ್ದು ಆ ಕಲ್ಲಿನ ಮಧ್ಯದಲ್ಲಿ ಧರ್ಮಚಕ್ರವಿರುತ್ತದೆ. ಚಕ್ರದ ಎಡಕ್ಕೆ ಒಂದು ವೃಷಭವೂ ಬಲಕ್ಕೆ ಒಂದು ಅಶ್ವವೂ ಇರುವವಲ್ಲದೆ ಅವುಗಳ ಕೆಳಗೆ ಎರಡೂ ಬದಿಗೆ ಮತ್ತೆ ಚಕ್ರದ ಚಿತ್ರವಿರುತ್ತದೆ. ಇದೇ ಚಿಹ್ನವು ದೇವನಾಗರಿಯಲ್ಲಿ ಬರೆದ ಕೆಲ ಅಕ್ಷರಗಳೊಂದಿಗೆ ಹಿಂದುಸ್ತಾನದ ಮುದ್ರೆಯೆಂದು ಉಪಯೋಗಿಸಲ್ಪಡುವದು. ಆ ಅಕ್ಷರಗಳ ಅರ್ಥವನ್ನು, ಯಾವ ಭಾಷೆಯಲ್ಲಿ ಬರೆದಿಡಬೇಕೆಂಬ ಬಗ್ಗೆ ಹಿಂದುಸ್ತಾನ ಸರಕಾರವು ವಿಚಾರ ಮಾಡುತ್ತಿರುವದಾಗಿ ತಿಳಿದು ಬರುತ್ತದೆ. ನಿರ್ಣಯವು ಬೇಗನೆ ಹೊರಬೀಳಬಹುದೆಂದು ನಿರೀಕ್ಷಿಸಲಾಗಿದೆ.

ವಾಗುತ್ತಿದೆ. ಅದನ್ನು ಚಕ್ರಿಕೈಬಿಡಲು ಅಧಃಪತನ. ಅದನ್ನು ಯಾವಾಗಲೂ ತಪ್ಪಿಸತಕ್ಕದ್ದು.

ಹೊಸದಿಲ್ಲಿ — ಮೋ. ಕ. ಗಾಂಧಿ

೧೩—೧೧—೪೭

ಮುಂಬಯಿ ಸರಕಾರದ ಹೊಸ ಆಹಾರ ಧೋರಣ

ರದ್ದಾದ ಹುಕುಮುಗಳ ವಿವರ

ಪುನರ್ವಿಮರ್ಶಿತ ಆಹಾರ ಧೋರಣಕ್ಕನುಸಾರವಾಗಿ ಮುಂಬಯಿ ಸರಕಾರದವರು ಕೆಳಗಿನ ಹುಕುಮುಗಳನ್ನು ಹೊರಡಿಸಿದ್ದಾರೆ.

೧ ಒಂದು ಜಿಲ್ಹೆಯಿಂದ ಮತ್ತೊಂದು ಜಿಲ್ಹೆ, ಒಂದು ತಾಲೂಕಿನಿಂದ ಮತ್ತೊಂದು ತಾಲೂಕು ಹಾಗು ಒಂದು ಹಳ್ಳಿಯಿಂದ ಮತ್ತೊಂದು ಹಳ್ಳಿಗೆ ಮುಖ್ಯ ಆಹಾರ ಧಾನ್ಯಗಳು ಹಾಗು ಕಡ್ಲೆ ಹೋಗಬಾರದೆಂದು ವಿಧಿಸಿದ ಅಪ್ಪಣೆಗಳನ್ನು ರದ್ದು ಪಡಿಸಲಾಗಿದೆ.

೨ ಆಹಾರ ಧಾನ್ಯಗಳ ಖಾಸಗಿ ಮಾರಾಟ ಹಾಗು ವಿನಿಯೋಗ ಮೇಲಿನ ಪ್ರತಿಬಂಧಗಳನ್ನು ರದ್ದು ಮಾಡಲಾಗಿರುವದು.

೩ ಮುಖ್ಯ ಆಹಾರ ಧಾನ್ಯಗಳ ಹಾಗು ಕಡ್ಲೆಯ ಪರಮಾವಧಿ ಬೆಲೆ ಗೊತ್ತುಮಾಡಿ ಹೊರಡಿಸಿದ ಹುಕುಮುಗಳನ್ನು ರದ್ದು ಪಡಿಸಿದೆ.

೪ ಲೆವಿ ಹುಕುಮು ರದ್ದು ಮಾಡಲ್ಪಟ್ಟಿರುವದು.

೫ ಒಕ್ಕಲಿಗರು ತಮ್ಮಲ್ಲಿಯ ಆಹಾರ ಧಾನ್ಯಗಳ ಹಾಗು ಕಡ್ಲೆಯ ಸಂಗ್ರಹವನ್ನು ನಿರ್ದಿಷ್ಟ ದಿನಗಳಲ್ಲಿ ಜಾಹೀರ ಮಾಡಬೇಕೆಂದು ವಿಧಿಸಿದ ಹುಕುಮುಗಳನ್ನು ರದ್ದು ಮಾಡಲಾಗಿರುವದು.

ಈ ಎಲ್ಲ ವಿಷಯುಗಳ ಅವಶ್ಯಕ ಪ್ರಕಟನೆಯನ್ನು ಡಿಸೆಂಬರ ೧೫ರ ವಿಶೇಷ ಗ್ಯಾಜಿಟದಲ್ಲಿ ಪ್ರಕಟಿಸಿದೆ.

ಜಾರಿಯಲ್ಲಿ ಉಳಿವ ನಿರ್ಬಂಧಗಳು

ಇನ್ನು ಜಾರಿಯಲ್ಲಿ ಉಳಿಯುವ ನಿರ್ಬಂಧಗಳು ಕೆಳಗಿನಂತಿರುವವು.

(೧) ಮುಖ್ಯ ಆಹಾರ ಧಾನ್ಯಗಳ ಠೋಕ ಮಾರಾಟ ಹಾಗು ಕಿರುಕಳ ಮಾರಾಟಕ್ಕಾಗಿ ಲಾಯಸೆನ್ಸ ತೆಗೆದುಕೊಳ್ಳಬೇಕಾಗುವದು. ಈ ಲಾಯಸೆನ್ಸಗಳು ಈ ವರೆಗೆ ೧೯೪೩ ಆಹಾರ ಧಾನ್ಯ ನಿಯಂತ್ರಣ ಹುಕುಮು, ೧೯೪೩ ಕಿರುಕಳ ವ್ಯಾಪಾರ ನಿಯಂತ್ರಣ ಹಾಗು ಲಾಯಸೆನ್ಸಿಂಗ ಹುಕುಮು ಪ್ರಕಾರ ಅವಶ್ಯವಿದ್ದವು. ಈ ಎರಡೂ ಹುಕುಮುಗಳನ್ನು ಈಗ ಪುನಃ ಸ್ವಲ್ಪ ಬದಲಾವಣೆಯೊಂದಿಗೆ ಹೊರಡಿಸಲಾಗಿದೆ. ೧೯೪೩ ಆಹಾರ ಧಾನ್ಯ ನಿಯಂತ್ರಣ ಹುಕುಮಿನನ್ವಯ ಹೊರಡಿಸಿದ ಲಾಯಸೆನ್ಸಗಳು ಇನ್ನೂ ಜಾರಿಯಲ್ಲಿದ್ದರೆ ಅವುಗಳನ್ನು ಹೊಸ ಹುಕುಮಿನ ಪ್ರಕಾರ ಹೊರಡಿಸಿದವೆಂದು ಗಣಿಸಲಾಗುವದು. ಹೊಸ ಲಾಯಸೆನ್ಸಗಳಿಗಾಗಿ ಅರ್ಜಿ ಮಾಡುವವರು ಬೃಹತ್ ಮುಂಬಯಿಯಲ್ಲಿ ನಾಗರಿಕ ಪೂರೈಕೆ ಡಾಯರೆಕ್ಟರರಿಗೂ ಉಳಿದ ಕಡೆಯವರು ಸಂಬಂಧಿಸಿದ ಜಿಲ್ಲಾ ಮ್ಯಾಜಿಸ್ಟ್ರೇಟರಿಗೂ ಅರ್ಜಿ ಮಾಡಬೇಕು ಈ ಸಂಬಂಧದ ಪ್ರಕಟನೆಗಳನ್ನೂ ಡಿಸೆಂಬರ ೧೫ ರ ಮುಂಬಯಿ ವಿಶೇಷ ಗ್ಯಾಜಿಟನಲ್ಲಿ ಪ್ರಸಿದ್ಧಿಸಲಾಗಿದೆ.

(೨) ಮುಖ್ಯ ಆಹಾರ ಧಾನ್ಯ ಹಾಗು ಕಡ್ಲೆಯನ್ನು ಪ್ರಾಂತದಿಂದ ಹೊರಗೆ ಕಳಿಸಬೇಕಾದರೆ ೧೯೪೩ ಆಹಾರ ಧಾನ್ಯ ಚಲನವಲನ ನಿಯಂತ್ರಣ ಹುಕುಮಿನ ಪ್ರಕಾರ ಪರವಾನಿಗಿ ತೆಗೆದುಕೊಳ್ಳಬೇಕಾಗುವದು. ಆ ಹುಕುಮನ್ನು ಸ್ವಲ್ಪ ಬದಲಾವಣೆಯೊಂದಿಗೆ ಪುನಃ ಹೊರಡಿಸಲಾಗಿದ್ದು ಡಿಸೆಂಬರ ೧೫ ರ ಮುಂಬಯಿ ವಿಶೇಷ ಗ್ಯಾಜಿಟನಲ್ಲಿ ಅದನ್ನು ಪ್ರಸಿದ್ಧಿಸಲಾಗಿದೆ.

(೩) ಬೃಹತ್ ಮುಂಬಯಿ ಹೊರತಾಗಿ ಉಳಿದ ಪ್ರಾಂತದಲ್ಲಿ ಎರಡು ವಿಭಾಗಗಳನ್ನು ಮಾಡಲಾಗಿರುವದು. ಒಂದು ವಿಭಾಗದಲ್ಲಿ ಅಹಮ್ಮದಾಬಾದ ಬಡೋಚ, ಖೇಡಾ, ಪಂಚಮಹಾಲ ಹಾಗು ಸುರತ ಜಿಲ್ಹೆಗಳೂ ಮತ್ತೊಂದು ವಿಭಾಗದಲ್ಲಿ ಪ್ರಾಂತದ ಉಳಿದ ಜಿಲ್ಹೆಗಳೂ ಸೇರ್ಪಡೆಯಾಗಿರುವವು. ಒಂದು ವಿಭಾಗದಿಂದ ಮತ್ತೊಂದು ವಿಭಾಗಕ್ಕೆ ಆಹಾರ ಧಾನ್ಯ ನಿರ್ಯಾತ ಮಾಡಬೇಕಾದರೆ ನಾಗರಿಕ ಪೂರೈಕೆಯ ಡಾಯರೆಕ್ಟರರ ಅಪ್ಪಣೆ ತೆಗೆದುಕೊಳ್ಳಬೇಕಾಗುವದು. ಆದರೆ ವಿಭಾಗದಲ್ಲಿಯ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ನಿರ್ಯಾತ ಇಲ್ಲವೆ ಆಯಾತ ನಿರ್ಬಂಧವಿರುವದಿಲ್ಲ ಸೀದಾ ಭಾಗಗಳಿದ್ದರೆ ಮಾತ್ರ ನಿರ್ಬಂಧವಿರುವದು. ಈ ಹುಕುಮಾದರೂ ಗ್ಯಾಜಿಟನಲ್ಲಿ ಪ್ರಸಿದ್ಧಿಸಲ್ಪಟ್ಟಿದೆ.

(೪) ಆಹಾರ ಧಾನ್ಯಗಳಿಗೆ ಸಂಬಂಧಿಸಿದ ಕೆಲ [illegible] ಹುಕುಮುಗಳನ್ನು ಜಾರಿಯಲ್ಲಿ [illegible] ವದು. (೧) ಮುಂಬಯಿ ಆಹಾರ ವಸ್ತುಗಳ (ವಿನಿ)ಯೋಗ ಹಾಗು ಸಂಗ್ರಹ ನಿಯಂತ್ರಣ) [illegible] ಈ ಹುಕುಮಿನಲ್ಲಿ ನಾಗರಿಕ [illegible] ಡಾಯರೆಕ್ಟರರು ಹಾಗು ಜಿಲ್ಲಾ ಮ್ಯಾಜಿಸ್ಟ್ರೇಟರು [illegible] ವ್ಯಕ್ತಿಗಳಿಂದ ಇಲ್ಲವೆ ಜನರ ವರ್ಗಗಳಿಂದ ಸಂಗ್ರಹ ಜಾಹೀರ ಮಾಡಿಸಿಕೊಳ್ಳಲು [illegible]

ಮೈಸೂರು ಪ್ರಜಾಪ್ರತಿನಿಧಿ ಸಭೆ

ಬೆಂಗಳೂರಿನಲ್ಲಿ ಮಹತ್ವದ ಅಧಿವೇಶನ

ಮೈಸೂರು ಮಹಾರಾಜರ [illegible] ಹೊಸ [illegible] ಹೊಸ ರಾಜ್ಯ ಘಟನೆ [illegible] ಮುಗಿವುದರೊಳಗಾಗಿ ರಚಿತವಾಗುವದು. [illegible] ಕಳೆದ ೧೧ ನೇ ತಾರೀಕು ಬೆಂಗಳೂರಿನಲ್ಲಿ ಪ್ರಾರಂಭವಾದ ಪ್ರಜಾಪ್ರತಿನಿಧಿ ಸಭೆಯ ಅಧ್ಯಕ್ಷಸ್ಥಾನದಿಂದ ದಿವಾಣ ಸರ್ ಎ. ರಾಮಸ್ವಾಮಿ ಮುದ್ಲಿಯಾರರು ಸಾರಿದರು. ಮಾರ್ಚ ಮಧ್ಯದಲ್ಲಿ ಘಟನಾಸಮಿತಿಯ ಅಧಿವೇಶನ ಸೇರುವದು. ಘಟನಾ ಸಮಿತಿಯ ಐಕ್ಯಯಲ್ಲಿ ಕೆಲ ವ್ಯಾವಹಾರಿಕ ಅಡಚಣಿಗಳ ಮೂಲಕ ಮುಸಲ್ಮಾನರಿಗೆ ಪ್ರತ್ಯೇಕ ಮತದಾರ ಸಂಘಗಳನ್ನು ಇಟ್ಟಿದ್ದರೂ ಹೊಸ ರಾಜ್ಯ ಘಟನೆಯಲ್ಲಿ ಈ ತತ್ವವನ್ನು ಒಪ್ಪಿಕೊಂಡಿಲ್ಲ ಎಂದೂ ಅವರು ಹೇಳಿದರು. ಉಪಹಾರದ ನಂತರ ಹಲವು ನಿಲುವಳಿ ಸೂಚನೆಗಳೂ ಬಂದಿದ್ದವು. ಆದರೆ ಮಂತ್ರಿಗಳು ಅವೆಲ್ಲ ವಿಷಯಗಳನ್ನು ಸಹಾನುಭೂತಿಪೂರ್ವಕ ವಿಚಾರಿಸುವದಾಗಿ ಆಶ್ವಾಸಿಸಿದ್ದರಿಂದ ಅವೆಲ್ಲ ಹಿಂತೆಗೆದುಕೊಳ್ಳಲ್ಪಟ್ಟವು. ಹೊಸನಾದ ರಾಜ್ಯಪದ್ಧತಿಯನ್ನು ದಯಪಾಲಿಸಿದ್ದಕ್ಕಾಗಿ ಮಹಾರಾಜರನ್ನು ಅಭಿನಂದಿಸುವ ಗೊತ್ತುವಳಿ ಒಮ್ಮತದಿಂದ ಸ್ವೀಕೃತವಾಯಿತು.

ಮರುದಿನ ದಿವಾಣರ ಅನುಪಸ್ಥಿತಿಯಲ್ಲಿ ಮಂತ್ರಿವರ್ಯ [illegible] ಅಧ್ಯಕ್ಷತೆಯಲ್ಲಿ ಅಧಿವೇಶನ ನಡೆಯಿತು. ೧೯೪೬–೪೭ ಹಾಗು ೪೭–೪೮ ರಲ್ಲಿ ಸರಕಾರ ಅನುಕ್ರಮವಾಗಿ ಹೆಚ್ಚು ಆಹಾರ ಬೆಳೆಗಾಗಿ ೬೪೫೫೬೦ ರೂಪಾಯಿ ಹಾಗು ೧೧೦೦೦೦೦ ರೂ. ಸಹಾಯ ಕೊಡಲಾಗಿದೆಯೆಂದು ಪ್ರಶ್ನೋತ್ತರ ಸಮಯದಲ್ಲಿ ಹೇಳಲಾಯಿತು. ೧೯೪೩ ರಿಂದ ೧೯೪೭ ಕೊನೆಯ ವರೆಗೆ ೨೦೮೫೦೩೧೧ ರೂಪಾಯಿ ಈ ಸಂಬಂಧದಲ್ಲಿ ಹಾನಿ ತಟ್ಟಿದೆಂದೂ ಹೇಳಲಾಯಿತು. ಮೈಸೂರು ಟ್ರೇಡಮಾರ್ಕ ತಿದ್ದುಪಡಿ ಮಸೂದೆ ಮೈಸೂರು ಕಾರಖಾನೆ ತಿದ್ದುಪಡಿ ಮಸೂದೆಗಳು ಸ್ವೀಕೃತವಾದವು. ಘಟನಾ ಸಮಿತಿಯ ಸಂಬಂಧದಲ್ಲಿ ಬಂದ ನಿಲುವಳಿ ಸೂಚನೆ ಚರ್ಚೆಯಲ್ಲಿಯೆ ಮುಕ್ತಾಯವಾಯಿತು.

ನಿಲುವಳಿ ಸೂಚನೆ ನಿಯಮಬಾಹ್ಯ

ನಡುಗಾಲ ಸರಕಾರದ ಮಂತ್ರಿಮಂಡಳದ ರಚನೆಯ ಬಗ್ಗೆ ಆದ ಒಪ್ಪಂದವನ್ನು ಮಂತ್ರಿಗಳು ಪಾಲಿಸಿಲ್ಲ ಎಂದು ಮುಂತಾಗಿ ಹೇಳಿ [illegible] ನಿಲುವಳಿ ಸೂಚನೆಯನ್ನು [illegible] ನೇ ತಾರೀಕಿಗೆ ಮುಂದಿಸಿದರು. ದಿವಾಣರು ಇದನ್ನು ನಿಯಮಬಾಹ್ಯ ಮಾಡಿದರು. [illegible] ಪರಿಸ್ಥಿತಿಯ ಮೂಲಕ ಅಧಿವೇಶನವನ್ನು ಮುಂದೆ ಹಾಕಬೇಕೆಂದು ಭೂಪಾಳಂ ಚಂಪ್ರ[illegible]ನವರು ಸೂಚಿಸಲು ದಿವಾಣರು ಪ್ರಸ್ತುತ ಅಧಿವೇಶನವನ್ನೆ ಹೀಗೆ ಮುಂದೆ ಹಾಕುವದು ಶಕ್ಯವಿಲ್ಲ ಎಂದೂ ಹೇಳಿದರು.

ಶಾಂತಿಸ್ಥಾಪನೆಯಲ್ಲಿ ಸಹಕರಿಸಿರಿ

೧೫ ನೇ ತಾರೀಕು ಕೂಲಿಕಾರ ಮಂತ್ರಿ ಶ್ರೀ ಕೆ ಟಿ ಭಾಷ್ಯಂರ ಅಧ್ಯಕ್ಷತೆಯ ಸಭೆಯ ಕೆಲಸ ನಡೆಯಿತು. ಅವರು ಪ್ರಜಾಪ್ರತಿನಿಧಿ ಸಭೆ ಹಿಂದು ಸ್ಥಾನದಲ್ಲಿಯೇ ಹಳೆಯದೆಂದು ಹೇಳಿದರು. ನಗರದಲ್ಲಿ ಈಗ ತಪ್ಪುತಿಳುವಳಿಕೆಯಿಂದ ಕ್ಷಣಿಕ ಶಾಂತಿ ಭಂಗವಾಗಿದೆಯೆಂದೂ ಎಲ್ಲರ ಸಹಕಾರದಿಂದ ಅದು ಬೇಗ ಮಾಯವಾಗಿ ಶಾಂತಿ ಪ್ರಸ್ಥಾಪಿತವಾಗುವದೆಂದೂ ಅವರು ಹಾರಯಿಸಿದರು. ಪತ್ರಿಕೆಗಳು ಈ ಕಾರ್ಯದಲ್ಲಿ ಹೆಚ್ಚು ಸಂಯಮದಿಂದ ವರ್ತಿಸಬೇಕೆಂದು ಹೇಳಿದರು. ಅನಂತರ ಗೃಹಮಂತ್ರಿಗಳು ಭಾಷಣಮಾಡಿದರು. ಅಗಿಂದಾಗ ಜನರು ಚಿವುಟು ಸುಳ್ಳು ಸುದ್ದಿಗಳನ್ನು [illegible] ಹಾಕಬೇಕೆಂದು ವಿನ್ನವಿಸಿದರು. [illegible] ೨ ನೇ ತಾರೀಕಿನ [illegible] ಶಿಕ್ಷಣಮಂತ್ರಿಗಳು [illegible]

[illegible]

ಶ್ರೀ ಭೂಪಾಳಂ ಚಂಪ್ರ[illegible] ಮಂತ್ರಿ ಮಂಡಳದ ವಿರುದ್ಧ ಅವಿಶ್ವಾಸ ಗೊತ್ತುವಳಿಯನ್ನು ಮಂಡಿಸಿದ್ದರು. ಅದರ ಚರ್ಚೆ ೧೬ ಕ್ಕೆ ಸಭೆಯ ಮುಂದೆ ಬಂದಿತು. ಆದರೆ ಸೂಚಕರು ಮೊದಲು ಬೇರೆಯಾದರೂ ಇದರ ಚರ್ಚೆಗೆ ಅನುಕೂಲ ಮತ ಕೊಡದ್ದರಿಂದ ಅದು ಬೆಂಬಲವಿಲ್ಲದೆ ಬಿದ್ದುಹೋಯಿತು.

[illegible] ದಾಸ್ತಾನು ಪತ್ರಕ [illegible] ಅಧಿಕಾರ ಕೊಡಲಾಗಿರುವದು. (೨) [illegible] ಲಾಯಸೆನ್ಸಿಂಗ ಹುಕುಮು [illegible] ಮೊದಲಾದವುಗಳಲ್ಲಿ [illegible] ಹುಕುಮು.

ಉತ್ಕಲ ಸಂಸ್ಥಾನಗಳ ವಿಲೀನೀಕರಣ

ಸರದಾರರ ಯಶಸ್ವಿ ಪ್ರಯತ್ನ

ರಾಜರಿಗೆ ಪೋಟಿಗಿ ನಿರ್ಣಯ

ಓರಿಸಾ ಮತ್ತು ಛತ್ತೀಸಗಢದ [illegible] ವರ್ಗದ ೧೫ ಸಂಸ್ಥಾನಗಳಲ್ಲಿ ೨೪ ಓರಿಸಾ ಪ್ರಾಂತದಲ್ಲಿ ವಿಲೀನವಾಗಲು ಒಪ್ಪಿದೆಯೆಂದು ತಿಳಿದುಬಂದಿದೆ. ೧೯೪೮ ಜನೆವರಿ ೧ ರಿಂದ ಅವುಗಳ ಆಡಳಿತ ಹಿಂದುಸ್ತಾನ ಸರಕಾರಕ್ಕೆ ಸೇರುವದು.

ಈ ಸಂಸ್ಥಾನಗಳ ರಾಜರೊಡನೆ ಆದ ಒಪ್ಪಂದದ ಮುಖ್ಯ ಕರಾರುಗಳು ಇಂತಿರುತ್ತವೆ—

(೧) ರಾಜರು ಸಂಸ್ಥಾನಗಳ ಪೂರ್ಣ ಆಡಳಿತೆಯನ್ನು ೧೯೪೮ ಜನೇವರಿ ೧ ರಿಂದ ಹಿಂದುಸ್ತಾನ ಸರಕಾರಕ್ಕೆ ಬಿಟ್ಟುಕೊಡಬೇಕು.

(೨) ಆದಿನಿಂದ ರಾಜರಿಗೆ ಸಂಸ್ಥಾನದ ಉತ್ಪನ್ನದಿಂದ ಖಾಸಗಿ ವೆಚ್ಚಕ್ಕೆ ಹಣ ಕೊಡಲಾಗುವದು. ಈ ಹಣದಲ್ಲಿ ಅವರ ಎಲ್ಲ ವೆಚ್ಚ ನಡೆಯತಕ್ಕದ್ದು. ಇದನ್ನು ಯಾವದೇ ಕಾರಣದಿಂದ ಪರಿಶೀಲಿಸತಕ್ಕದ್ದಲ್ಲ ಮತ್ತು ಇಳಿಸತಕ್ಕದ್ದಲ್ಲ.

(೩) ಮೂರು ತಿಂಗಳಿಗೊಮ್ಮೆ ಮುಂಚಿತ ಕೊಟ್ಟು ಸರಕಾರೀ ಬೊಕ್ಕಸದಿಂದ ಈ ಹಣ ಪಾಲ್ಯಾಂಶ ಗಳಲ್ಲಿ ಮುಂಗಡ ಪಡೆಯಬಹುದು.

(೪) ರಾಜರಿಗೆ ಅವರ ಖಾಸಗಿ ಆಸ್ತಿ ದೊರೆಯುವದು, ಅದರ ವಿವರಗಳನ್ನು ಈಗ ಕೊಡಬೇಕು.

(೫) ಖಾಸಗಿ ಆಸ್ತಿ ಆವದೆಂದೋ ಎಂಬ ಬಗ್ಗೆ ತಂಟೆಯುಂಟಾದರೆ, ಹಿಂದುಸ್ತಾನ ಸರಕಾರವು ನೇಮಿಸುವ ನ್ಯಾಯಾಧೀಶರ [illegible] [illegible]

[illegible]

ಮುಂಬಯಿಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಲನ

ಕಾಸರಗೋಡು

ಕಾರ್ಯಕ್ರಮದ ಸಾಮಾನ್ಯ ವಿವರ

[illegible]

ಕಾಶ್ಮೀರದ ಸಮಸ್ಯೆ

[illegible]

ಕೇಂದ್ರ ಶಾಸನ ಸಭೆಯ ಚಟುವಟಿಕೆಗಳು

- ನಿಯಂತ್ರಣಕ್ಕೆ ಮಹಾತ್ಮರ ಕಾಲ್ತೊಡಕು
- ಸಾಲಸೊತ್ತುಗಳ ಸಮಾಧಾನಕರ ಹಂಚಿಕೆ
- ಕಾಂಗ್ರೆಸ ಪಕ್ಷದ ಸುಸಂಘಟಿತ ಶಿಸ್ತು
- ೨೧ ದಿನಗಳಲ್ಲಿ ೨೩ ಮಸೂದೆಗಳ ಅಂಗೀಕಾರ
- ಅಭೂತಪೂರ್ವ ಅಧಿವೇಶನ

ತಾ. ೭ ರ ವರೆಗಿನ ಕೇಂದ್ರ ಶಾಸನಸಭೆಯ [illegible] ಕೊಟ್ಟಿದೆ.

[illegible] ಸಕ್ಕರೆಯ ವಿನಿಯಂತ್ರಣದ ಬಗ್ಗೆ [illegible] ಉತ್ಪಾದನೆಯ ಬಗ್ಗೆ ಆಹಾರಮಂತ್ರಿ ಡಾ. ರಾಜೇಂದ್ರ ಬಾಬುಗಳು [illegible] ಸಭೆಗೆ ತಿಳಿಸಿದರು. [illegible]

ಸಕ್ಕರೆಯ ಹೊಸ ಗಿರಣಿಗಳು

ಸಕ್ಕರೆಯ ಹುಟ್ಟುವಳಿಯು ಹೆಚ್ಚಲೆಂದು [illegible] ಹೊಸ ಸಕ್ಕರೆಯ ಕಾರಖಾನೆಗಳನ್ನು ಪ್ರಾರಂಭಿಸಲು ಭಾರತ ಸರಕಾರವು ಒಪ್ಪಿಗೆಕೊಟ್ಟಿದೆ. ಅಲ್ಲದೆ [illegible] ಅವಕಾಶಕೊಟ್ಟಿದೆ. [illegible] ಬಿಹಾರ, ಯುಕ್ತಪ್ರಾಂತ, [illegible] ಮತ್ತು ಪಶ್ಚಿಮ ಬಂಗಾಲಗಳಲ್ಲಿ ಈ ಹೊಸ ಗಿರಣಿಗಳು ನೆಲೆಗೊಳ್ಳಬೇಕೆಂದು [illegible] ನಿರ್ದಿಷ್ಟ [illegible]. ಆಹಾರದ ಕೊರತೆ ದೂರಾಗುವವರೆಗೆ [illegible] ಸರಕಾರವು ಮಾತ್ರ ಸಕ್ಕರೆಯ ಹೊಸ [illegible] ಅನುಮತಿಸಿಲ್ಲ. [illegible] ಈ ಉದ್ಯೋಗದ [illegible] ಬೆಳವಣಿಗೆಗಾಗಿ [illegible]

ಹಿಂದುಸ್ತಾನದ ವಿಮಾನ

ವಿಮಾನ ಉತ್ಪಾದನೆಯ ಬಗ್ಗೆ ಸಂರಕ್ಷಣ ಮಂತ್ರಿ [illegible] ಬಲದೇವಸಿಂಗರು ಹೀಗೆ ಹೇಳಿದರು.

[illegible] ವರ್ಗದ ರೇಲ್ವೆ ಡಬ್ಬಿಗಳನ್ನು [illegible] ವಿಮಾನಗಳನ್ನು ಕಟ್ಟಿ ಇಂಗ್ಲಂಡ [illegible] ವಿಮಾನ ಕಂಪನಿಯು [illegible] ಹಿಂದುಸ್ತಾನ ವಿಮಾನ ಕಂಪನಿಯು [illegible] ಸರಕಾರಕ್ಕೆ ಒದಗಿಸ [illegible]. ಹಿಂದುಸ್ತಾನ ವಿಮಾನ ಕಂಪನಿಯಲ್ಲಿ ಮೊದಲನೆ ವಿಮಾನ [illegible] [illegible] ಸರಕಾರಕ್ಕೆ [illegible] ವಿಮಾನಗಳನ್ನು [illegible] ಹಿಂದುಸ್ತಾನ ವಿಮಾನ ಕಂಪನಿಯವರೇ ಪೂರೈಸಬೇಕೆಂದು ಸರಕಾರದ ಕೋರಿಕೆಯಿದೆ. ಈ [illegible] ಕಂಪನಿಯು [illegible] ನಿರ್ಧರಿಸಲಾಗಿದೆ. ಮೊದಲುಮೊದಲು ಪರದೇಶಗಳ ವಿಮಾನ [illegible] ಅನುಸರಿಸಿದರೂ ಬರಬರುತ್ತ [illegible] ಬೇಕಾಗುವ ಸ್ವತಂತ್ರ ಮಾದರಿಯ ವಿಮಾನ ರಚಿಸಲು ಉತ್ಪಾದಕರಿಗೆ ಕೇಳಿಕೊಳ್ಳಲಾಗುವದು.

ಉಕ್ಕಿನ ಉತ್ಪಾದನೆ

ಡಾ. ಶಾಮಪ್ರಸಾದ ಮುಕರ್ಜಿಯವರು ಮಾತನಾಡುತ್ತ ಐದೈದು ಲಕ್ಷಟನ್ನು ಉಕ್ಕನ್ನು ಹುಟ್ಟಿಸುವ ಉಕ್ಕಿನ ಕಾರಖಾನೆಗಳನ್ನು ೪೮ ಕೋಟಿ ರೂ ಗಳ ವೆಚ್ಚದಿಂದ ಕಟ್ಟಿಸಲಾಗುವದೆಂದೂ ಈ ಹುಟ್ಟುವಳಿಯನ್ನು ಮುಂದೆ ಇಮ್ಮಡಿಸಲೂ ಸಾಧ್ಯವಿದೆಯೆಂದೂ ಉಕ್ಕಿನ ಕಾರಖಾನೆಗಳು ಸಾಧ್ಯವಿದ್ದಷ್ಟು ತಮ್ಮ ಉತ್ಪಾದನೆಯನ್ನು ಹೆಚ್ಚಿಸಲು ಅವಕ್ಕೆ ಪ್ರೋತ್ಸಾಹಿಸಲಾಗುವದೆಂದೂ ನುಡಿದರು.

ತಾ ೯ ರ ಕಾರ್ಯಕಲಾಪ ಪ್ರಾರಂಭವಾಗುವ ಮೊದಲು ಅಧ್ಯಕ್ಷ ಶ್ರೀ ಮಾವಳಣಕರರು ಭಾಯಿ ಪರಮಾನಂದರ ನಿಧನದ ಬಗ್ಗೆ ದುಃಖವ್ಯಕ್ತಮಾಡಿ ಅವರು ೧೫ ವರ್ಷಗಳ ಮೊದಲು ಈ ಸಭೆಯ ಸದಸ್ಯರಾಗಿದ್ದ ವಿಷಯವನ್ನು ಸಭೆಗೆ ತಿಳಿಸಿ ಅವರ [illegible] ಅವರ ಕುಟುಂಬದ [illegible] ದಲ್ಲಿ ತಾವೂ ಸಮಭಾಗಿಗಳೆಂದು ತಿಳಿಸಿದರು.

ನಾಗರಿಕತೆ

ಡಾ. ಬಲಿಯವರು ಕೇಳಿದ ಒಂದು ಪ್ರಶ್ನೆಗೆ ಉತ್ತರ ಕೊಡುತ್ತ ಸರದಾರ ಪಟೇಲರು ಹೀಗೆ ಹೇಳಿದರು.

ಅಸ್ಪಷ್ಟವಾಗಿರುವ ನಾಗರಿಕತ್ವದ ವಿಷಯವನ್ನು ಹೊಸ ರಾಜ್ಯಘಟನೆಯಲ್ಲಿ ಸ್ಪಷ್ಟಪಡಿಸಲಾಗುವದು. ಆ ಒಳಗಾಗಿ ಪಾಕಿಸ್ತಾನದ ನಾಗರಿಕರು ಹಿಂದುಸ್ತಾನ ನಾಗರಿಕತ್ವ ಬಯಸಿದರೆ ಅವರು ಸ್ವಸಂತೋಷದಿಂದ ಹಾಗೆ ಮಾಡಬಹುದಾಗಲಿ ಹಿಂದುಸ್ತಾನಕ್ಕೆ ಈ ವಿಷಯದಲ್ಲಿ ಅಧಿಕಾರವಿಲ್ಲ. ಯಾವದೊಂದು ಜಾತಿ ಅಥವಾ ಪಂಗಡದ ಹಿತ್ಯ [illegible] ಸರಕಾರವು ಅಂತಹ ಪ್ರಕಟನೆ ಹೊರ [illegible] ಹೊರಡಿಸಲಾರದು.

ಅಲ್ಪಸಂಖ್ಯಾಕರು

ಪಂ. ಕುಂಝುರು ಅವರ ಒಂದು ಪ್ರಶ್ನೆಗೆ ಉತ್ತರಿಸುತ್ತ ಶ್ರೀ ನಿಯೋಗಿಯವರು, ಅಗಸ್ಟ ೧೫ ರ ನಂತರ ಪೂರ್ವ ಬಂಗಾಲದಿಂದ ಪಶ್ಚಿಮ ಬಂಗಾಲಕ್ಕೆ ಸುಮಾರು ೨ ಲಕ್ಷ ಮುಸ್ಲಿಮೇತರರು ಬಂದಿರಬಹುದು ಎಂಬದಾಗಿ ಹೇಳಿದರು. ಜ್ಞಾನಿ ಗುರುಮುಖಸಿಂಗರಿಗೆ ಉತ್ತರ ಕೊಡುವಾಗ ಶ್ರೀ ನಿಯೋಗಿಯವರು ಹೀಗೆ ಹೇಳಿದರು.

ಗಡಿನಾಡಿನಲ್ಲಿಯ ಮುಸ್ಲಿಮೇತರರು ಭಯಭೀತರಾಗಿದ್ದುದು ನಿಜ. ಅಲ್ಲಿ ೨, ೬೦, ೦೦೦ ಮುಸ್ಲಿಮೇತರರಿದ್ದಾರೆ. ಇವರಲ್ಲನೇಕರು ಅಗಸ್ಟ ೧೫ ರ ಮೊದಲೇ ಅಲ್ಲಿಂದ ಹೊರಬಿದ್ದಿದ್ದಾರೆ. ಬೇರೆ ಕೆಲವರನ್ನು ರೇಲ್ವೆ ವಿಮಾನಗಳ ಮೂಲಕ ಪಾರುಮಾಡಲಾಗಿದೆ. ಗಡಿನಾಡಿನಲ್ಲಿ ಇನ್ನೂ ಸುಮಾರು ೪೮೦೦೦ ಮುಸ್ಲಿಮೇತರರು ಉಳಿದುಕೊಂಡಿದ್ದಾರೆ. ಇವರಲ್ಲಿ ೨೪೦೦೦ ಜನರು ಬನ್ನೂದಲ್ಲಿಯೇ ಇರುವರು. ಇವರೆಲ್ಲರನ್ನು ದಾಟಿಸಿಕೊಂಡು ಬರುವ ಬಗ್ಗೆ ಪಾಕಿಸ್ತಾನ ಸರಕಾರದೊಡನೆ ಮಾತುಕತೆ ನಡೆದಿದೆ.

ತಾ. ೧೦ ರಂದು ಡಾ. ರಾಜೇಂದ್ರ ಪ್ರಸಾದರು ಆಹಾರ ವಿನಿಯಂತ್ರಣದ ಬಗ್ಗೆ ಸರಕಾರದ ನಿರ್ಧಾರವನ್ನು ಸಭೆಗೆ ತಿಳಿಸಿದರು. ಆ ವಿಷಯ್ಯದಲ್ಲಿ ಬಹಳ ಚರ್ಚೆಯಾಯಿತು. ಪಂ. ಹೃದಯನಾಥ ಕುಂಝುರು, ಶ್ರೀ ಬಾಲಕೃಷ್ಣ ಶರ್ಮ ಮೊದಲಾದವರು ರಾಜೇಂದ್ರರ ಆಹಾರ ಧೋರಣವನ್ನು ಟೀಕಿಸಿ ಮಾತನಾಡಿದರಲ್ಲದೆ ವಿನಿಯಂತ್ರಣವನ್ನು ಸಮರ್ಥಿಸುವ ಕಾರಣಗಳು ತೀರ ಜೊಳ್ಳಾಗಿವೆಯೆಂದೂ ನುಡಿದರು.

ಆಹಾರ ವಿನಿಯಂತ್ರಣ

ಡಾ. ರಾಜೇಂದ್ರ ಪ್ರಸಾದರು ಚರ್ಚೆಗೆ ಉತ್ತರ ಕೊಡುತ್ತ ಮಾತನಾಡಿದ್ದರ ಸಾರಾಂಶವಿದು.

ಆಹಾರ ವಿನಿಯಂತ್ರಣವನ್ನು ಕೆಲವರು ಟೀಕಿಸಿದರು ಕೆಲವರು ಬೆಂಬಲವನ್ನೂ ಕೊಟ್ಟರು. ವಿನಿಯಂತ್ರಣವಿಂದ ಪರಿಸ್ಥಿತಿಯು ಹದಗೆಟ್ಟು ಗಂಡಾಂತರ ಒದಗುವದೆಂದು ಬೆದರುವ ಕಾರಣವಿಲ್ಲ. ಮುಂದಿನ ಕಾಲದಲ್ಲಿ ಅಕಾರ [illegible] ವಿಕಾರವಾಗಿ ಬೆಳೆದ ನಿಯಂತ್ರಣವನ್ನು ನಾವು ನಿವಾರಿಸಲೇಳಿಸಿದ್ದೇವೆ [illegible] ಬೇರೆ ಇನ್ನೇನೂ ಇಲ್ಲ. ಮೇಲಾಗಿ ಏಕಕಾಲಕ್ಕೆ ಎಲ್ಲ ನಿಯಂತ್ರಣಗಳನ್ನೂ ನಾವು ಎತ್ತಬಯಸಿಲ್ಲ. ಅವನ್ನು ಕ್ರಮಶಃ ಕಿತ್ತುವ ಧೋರಣೆಯನ್ನಿಟ್ಟುಕೊಂಡಿದ್ದೇವೆ. ಇದಕ್ಕೂ ಮೀರಿ ಹಿಡಿತ ತಪ್ಪಿ ಗಂಡಾಂತರ ಬರುವದೆಂದು ತೋರಿದರೆ ಮತ್ತೆ ನೂರ್ಮಡಿ ಬಿಗುವಿನಿಂದ ನಿಯಂತ್ರಣಗಳನ್ನು ಬಳಕೆಗೆ ತರಲಾಗುವದು ಹಾಗೂ ವರ್ತಕ ವರ್ಗವನ್ನೇ ಆಮೂಲ ನಾಶ ಮಾಡುವ ಹೊತ್ತು ಬರಬಹುದು. ಅದಕ್ಕಾಗಿ ಬಂಗಾರದ ತತ್ತಿಯನಿಡುವ ಕೋಳಿಯನ್ನು ಕೊಲ್ಲಬೇಡಿರೆಂದು ವರ್ತಕರಿಗೆ ನಾನು ಎಚ್ಚರಿಕೆ ಹೇಳುತ್ತೇನೆ.

ಮಹಾತ್ಮರ ವಿರೋಧ

ಮಹಾತ್ಮ ಗಾಂಧಿಯವರು ನಿಯಂತ್ರಣದ ಸುತ್ತ ಕೈತೊಳೆದು ಬೆನ್ನು ಹತ್ತಿರುವ ಸಂಗತಿ ಸರ್ವವಿದಿತವಿದೆ. ನಿಯಂತ್ರಣ ಇದ್ದಕ್ಕಿದ್ದಂತೆ ಸಾಗಿಸಬೇಕೆಂದರೆ ಇವರೊಂದು ದೊಡ್ಡ ಅಡ್ಡಿಯಾಗಿ ಕುಳಿತಿದ್ದಾರೆ. ಮೂವತ್ತು ವರ್ಷ ನನ್ನ ಅವರ ಸಂಬಂಧ ಬೆಳೆದು ಬಂದಿದೆ. ಅಂಕಿಸಂಖ್ಯೆಗಳ ಆಧಾರ ಸಜ್ಜಿತನಾಗಿ ನಾನೂ ಅವರೊಡನೆ ಸಾಕಷ್ಟು ದ್ವಂದ್ವ ಹೂಡಿದೆ. ಆದರೆ ನಮ್ಮ ಬುದ್ಧಿ ಮತ್ತು ತರ್ಕಕ್ಕಿಂತ ಅವರ ಅಂತಸ್ಸಾರ್ಣಿಯೇ ಯಾವಾಗಲೂ ಸತ್ಯವಾಗಿ ಪರಿಣಮಿಸಿದೆ. ಈ ಸಲವೂ ನಿಯಂತ್ರಣಗಳ ಬಗ್ಗೆ ಹಾಗೇ ಆಗಿ ನಮ್ಮ ಬುದ್ಧಿಯ ಡೊಂಬರಾಟ ಸುಳ್ಳಾಗಿ ನಮಗೆ ಸೋಲುಂಟಾಗಲಿ ಎಂದು ಹಾರೈಸುತ್ತೇನೆ.

ಮಹತ್ವದ ಮಸೂದೆಗಳ ಅಂಗೀಕಾರ

ತಾ. ೧೧ ರಂದು ಅನೇಕ ಮಸೂದೆಗಳು ಅಂಗೀಕರಿಸಲ್ಪಟ್ಟವು. ಅವು ಹೀಗಿವೆ.

೧೯೨೩ ರ ಹಿಂದುಸ್ತಾನದ ಹತ್ತಿಯ ವ್ಯಾಪಾರ ಕರ ಕಾಯದೆ ತಿದ್ದುಪಡಿಯ ಮಸೂದೆ. ಡಾ. ರಾಜೇಂದ್ರ ಪ್ರಸಾದರು ಇದನ್ನು ಮುಂದಿಸಿದರು. ಅಜಮೀರ ಮಾರವಾಡಗಳ ಬಗ್ಗೆ ಹೊಸ ರಾಜ್ಯ ಘಟನೆ ರಚಿತವಾಗುವ ವರೆಗೆ ಕಾಯದೆ ಮಾಡಲು ಸರಕಾರಕ್ಕೆ ಅಧಿಕಾರವಿರಬೇಕೆಂಬ ಸರದಾರ ಪಟೇಲರ ಮಸೂದೆ ಹಿಂದುಸ್ತಾನದ ಮಂತ್ರಿಗಳ ಸಂಬಳದ ಬಗ್ಗೆ ಇದ್ದ ಮಸೂದೆ ಸರದಾರರೇ ಮುಂಡಿಸಿದ್ದು. ಈ ಬಗ್ಗೆ ಅವರು ಮಾತನಾಡುತ್ತ, ಮಂತ್ರಿಗಳು ಸಿಮುಲಾದ ಶಿಖರದಿಂದ ಆಡಳಿತ ಸಾಗಿಸುವದಿಲ್ಲವೆಂದೂ ಮಂತ್ರಿಗಳ ವೇತನ ತಲೆಭಾರವಾಗಕೂಡದೆಂದೂ ನುಡಿದರು. ಡಾ. ಅಂಬೇಡಕರರು ಮುಂಡಿಸಿದ ಫೆಡರಲ್ ಕೋರ್ಟಿನ ಅಪೀಲ ವಿಭಾಗದ ಅಧಿಕಾರವನ್ನು ವಿಸ್ತರಿಸಬೇಕೆಂಬ ಮಸೂದೆಯೂ ಅಂಗೀಕೃತವಾಯಿತು. ಶ್ರೀ ಗಾಡಗೀಳರು ಮುಂಡಿಸಿದ ಹಿಂದುಸ್ತಾನದ ಪಟ್ಟಿನ ಉದ್ಯೋಗ ಮತ್ತು ಸಾಣೆ ಹಿಡಿಯುವ ಕಲ್ಲುಗಳು ಇವುಗಳ ಅಭಿವೃದ್ಧಿಗೆ ಪರದೇಶದಿಂದ ಬರುವ ಈ ಎರಡು ವಸ್ತುಗಳ ಮೇಲೆ ಸಂರಕ್ಷಕ ಸುಂಕ ಹೇರಬೇಕೆಂಬ ಮಸೂದೆಯೂ ಚರ್ಚೆಯ ನಂತರ ಸ್ವೀಕೃತವಾಯಿತು. ಅ ಮೇಲೆ ಸರದಾರ ಬಲದೇವಸಿಂಗರು ಸೈನ್ಯಾಧಿಕಾರಿಗಳಿಗೆ ಹೆಚ್ಚಿನ ಅಧಿಕಾರ ಕೊಡಬೇಕೆಂಬುದಾಗಿ ಮುಂಡಿಸಿದ ಮಸೂದೆಯು ಚರ್ಚೆಗೆ ಬಂದಿತು. ಈ ಮಸೂದೆಯ ತೃತೀಯ ವಾಚನವನ್ನು ಮುಗಿಸಿಬಿಡಬೇಕೆಂದು ಅಧ್ಯಕ್ಷರು ಕೋರಿದಾಗ ಕೆಲವರಿಂದ ಈ ಅವಸರ ಬೇಡವೆಂದು ಸೂಚನೆ ಬರಲು ಮರುದಿನಕ್ಕೆ ಈ ಚರ್ಚೆ ಮುಂದರಿಸಲ್ಪಟ್ಟಿತು.

ಸಾಲಸೊತ್ತುಗಳ ಹಂಚಿಕೆ

ತಾ. ೧೨ ರ ಸಭೆಯಲ್ಲಿ ಹಿಂದುಸ್ತಾನ ಪಾಕಿಸ್ತಾನಗಳಲ್ಲಿ ಸಾಲಸೊತ್ತುಗಳ ಹಂಚಿಕೆಯು ಪರಸ್ಪರರಿಗೆ ತುಂಬ ಸಮಾಧಾನಕರವಾಗಿ ಸಾಗಿತಾಗಿ ಸರದಾರರು ತಿಳಿಸಿ ವಿವರಗಳನ್ನು ನಿರೂಪಿಸಿದರು. ಪಾಕಿಸ್ತಾನವು ಹಿಂದುಸ್ತಾನಕ್ಕೆ ಕೊಡಬೇಕಾದ ಸಾಲವನ್ನು ೫೦ ಕಂತುಗಳಲ್ಲಿ ಮುಟ್ಟಿಸಬೇಕೆಂದು ಗೊತ್ತಾಗಿದೆ. ಈ ಬಗ್ಗೆ ಅವರು ಮಾತನಾಡುತ್ತ, ನಮ್ಮ ಈ ಸಿದ್ಧಿಗಾಗಿ ನಾವು ನಡೆಸಿದ ಪ್ರಯತ್ನ ಮತ್ತು ಪಟ್ಟ ಪರಿಶ್ರಮಗಳ ಇತಿಹಾಸ ಬರೆದಾಗ ಈ ವಿಭಜನಾ ಕಾರ್ಯವು ಒಂದು ಚಮತ್ಕಾರವೆಂದು ಪರಿಗಣಿಸಲ್ಪಡಬಹುದು ಎಂದು ನುಡಿದಾಗ ಸಭೆಯು ಹರ್ಷೋದ್ಗಾರದಿಂದ ಮುಖರಿತವಾಯಿತು. ಈ ಮಹಾ ಕಾರ್ಯದಲ್ಲಿ ಲಾರ್ಡ ಮೌಂಟಬ್ಯಾಟನ್ನರು ತೋರಿದ ನಿಷ್ಪಕ್ಷಪಾತ ಬುದ್ಧಿ ಉದಾರ ಹೃದಯ ಇವುಗಳಿಗೆ ಸರದಾರರು ಅವರನ್ನು ಹೃತ್ಪೂರ್ವಕ ಅಭಿನಂದಿಸಿದರು.

ಭಾರತಕ್ಕೆ ನೈತಿಕ ವಿಜಯ

ಪಂ. ಜವಾಹರಲಾಲರು ದಕ್ಷಿಣ ಆಫ್ರಿಕದ ಹಿಂದೀಯರ ಬಗ್ಗೆ ಮಾತನಾಡುತ್ತ ಶಾಸನಸಭೆಯಲ್ಲಿ ಹೀಗೆ ಉದ್ಗಾರ ತೆಗೆದರು.

"ಯುಕ್ತ ರಾಷ್ಟ್ರಗಳ ಸಂಘದ ಸಭೆಯಲ್ಲಿ ದ. ಆಫ್ರಿಕೆಯ ಹಿಂದೀಯರ ಬಗ್ಗೆ ಹಿಂದುಸ್ತಾನವು ಮಂಡಿಸಿದ ಗೊತ್ತುವಳಿಗೆ ೨/೩ ಮತ ದೊರೆಯದಿದ್ದರೂ ಅದಕ್ಕೆ ಬಹುಮತ ದೊರೆಯಿತು. ಇದರಿಂದ ಹಿಂದುಸ್ತಾನದ ನೈತಿಕ ಮಹತ್ವ ಯಾವ ರೀತಿಯಿಂದಲೂ ಕಡಿಮೆಯಾದಂತಾಗಲಿಲ್ಲ."

ಶಸ್ತ್ರಧಾರಣ ನಿರ್ಬಂಧವಿಲ್ಲ

ಒಂದು ಪ್ರಶ್ನೆಗೆ ಉತ್ತರ ಕೊಡುತ್ತ ಸರದಾರ ವಲ್ಲಭಭಾಯಿಯವರು, ಘಟನಾ ಸಮಿತಿಯ ಸದಸ್ಯರಿಗೆ ಶಸ್ತ್ರಧಾರಣ ನಿರ್ಬಂಧಕ ಕಾಯದೆಯು ಅನ್ವಯಿಸುವದಿಲ್ಲವಾಗಿ ಹೇಳಿದರು.

ಸುಭಾಸ ಸೈನಿಕರ ಹಣ

ಸುಭಾಸ ಸೈನಿಕರನ್ನು ಕಲಕತ್ತೆಗೆ ಹಿಡಿದು ತಂದಾಗ ಅವರ ಹತ್ತಿರವಿದ್ದ ೧, ೯೩, ೯೬೭ ರೂ. ೮ ಆಣೆ ೫ ಪೈ. ಹಣವನ್ನು ಸರಕಾರದವರು ಇಂಪೀರಿಯಲ್ ಬ್ಯಾಂಕಿನಲ್ಲಿ ಇಟ್ಟಿದ್ದಾರೆ. ಕೆಲವರು ಮಾತ್ರ ತಮ್ಮ ಹಣ ಕೇಳಿದ್ದಾರೆ. ಅದನ್ನು ಅವರಿಗೆ ಮುಟ್ಟಿಸುವ ವ್ಯವಸ್ಥೆ ಬೇಗ ಮಾಡಲಾಗುವದೆಂದು ಸಂರಕ್ಷಣ ಮಂತ್ರಿ ಬಲದೇವಸಿಂಗರು ಒಂದು ಪ್ರಶ್ನೆಗೆ ಉತ್ತರವಿತ್ತರು.

ಸಭೆಯ ಮುಕ್ತಾಯ

ಕೇಂದ್ರ ಶಾಸನ ಸಭೆಯು ೨೧ ದಿನಗಳ ವರೆಗೆ ಸೇರಿ ಅತ್ಯಂತ ಯಶಸ್ವಿಯಾಗಿ ಮುಕ್ತಾಯವಾಯಿತು. ೨೧ ದಿನಗಳಲ್ಲಿ ೨೩ ಮಸೂದೆಗಳು ಅಂಗೀಕೃತವಾದವು. ಇದು ಅಭೂತ ಪೂರ್ವ ವೈಶಿಷ್ಟ್ಯ. ಒಂದಾದರೂ ಅವಿಶ್ವಾಸದ ಗೊತ್ತುವಳಿ ಇರದೆ ಒಂದು ವಿಷಯದ ಬಗ್ಗೆ ಸಹ ಮತಗಣನೆ ಜರುಗದೆ ತಾ ೧೩ ರಂದು ಸಭೆ ಮುಕ್ತಾಯವಾಯಿತು. ಕಾಂಗ್ರೆಸ ಪಕ್ಷದವರ ಸುಸಂಘಟಿತ ಶಿಸ್ತೇ ಈ ಯಶಕ್ಕೆ ಕಾರಣ. ಈ ಅಧಿವೇಶನದ ಇನ್ನೊಂದು ವೈಶಿಷ್ಟ್ಯವೆಂದರೆ ಪ್ರೇಕ್ಷಕರ ಆಸನಗಳೆಲ್ಲ ಮೊದಲಿನ ದಿನದಿಂದ ಕೊನೆಯ ದಿನದವರೆಗೂ ಕಿಕ್ಕಿರಿದು ತುಂಬಿರುತ್ತಿದ್ದವು.

ವ್ಯಾಪಾರ ಪ್ರಪಂಚ

ಮುಂಬಯಿ ಶೇರಪೇಟೆ

ಮುಂಬಯಿ ೧೬

ಟಾಟಾಸ್ಟೀಲ ಡೆಫರ್ಡ ರೂ. ೧೯೫೦ ಕ್ಕೆ ಇಳಿದದ್ದು ರೂ. ೧೯೮೫ ಕ್ಕೆ ಏರಿ ರೂ. ೧೯೮೦ ಕ್ಕೆ ಮುಟ್ಟಿಕೊಂಡವು. ಸಾದಾ ರೂ. ೩೮೩ ಕ್ಕೆ ಇಳಿದು ರೂ. ೩೯೧ ಕ್ಕೆ ಏರಿದವು. ಮುಂಬಯಿ ಡಾಯಿಂಗ್ಸ ರೂ. ೧೧೭೫ ಕ್ಕೆ ಇಳಿದು ರೂ. ೧೨೧೫ ರ ವರೆಗೆ ಏರಿದವು. ಕೋಹಿನೂರು ರೂ. ೬೩೪ ಏರಿದವು. ಸಿಂಪ್ಲೆಕ್ಸ ರೂ. ೩೫೭ ಕ್ಕೆ ಪ್ರಾರಂಭವಾಗಿ ರೂ. ೨೪೭ ಕ್ಕೆ ಇಳಿದು ರೂ. ೨೫೩ ಕ್ಕೆ ಬಂದು ಮುಟ್ಟಿದವು. ಸ್ವದೇಶಿ ಶೇರುಗಳು ರೂ. ೬೬೩ ಕ್ಕೆ ಇಳಿದು ರೂ. ೬೭೯ ಕ್ಕೆ ಏರಿದವು. ನ್ಯೂಗ್ರೇಟ ೪೨೮, ಗೋಕಾಕ ೩೪೩, ಇಂದೂರ ೭೧೨-೮-೦, ಟಾಟಾಸ್ಟೀಲ ಸಾದಾ ೩೯೧ ಅಸೋಸಿಯೇಟೆಡ್ ಸಿಮೆಂಟ ೧೮೧-೮-೦ ಬೇಲಾಪುರ ೩೫೨-೮-೦ ಶಿವಾಜೀಪುರ ೪೩, ನ್ಯೂಇಂಡಿಯಾ ಇನ್‌ಶುರನ್ಸ ೭೬-೧೨-೦ ಸೆಂಟ್ರಲ ಬ್ಯಾಂಕ ೮೯, ಇಂಪೀರಿಯಲ್ (ಅಂಶತಃ) ೫೭೨-೮-೦ ಇಂಪೀರಿಯಲ್ (ಪೂರ್ಣ) ೨೨೯೦.

ಅರಳೆ

ಜನೆವರಿ	೫೦೨—೪—೦
ಮಾರ್ಚ	೪೯೮—೦—೦
ಮೇ	೫೦೨—೪—೦
ಜುಲೈ	೫೦೯—೪—೦
ಸಪ್ಟಂಬರ	೫೦೩—೮—೦
ಹೆಚ್ಚು	೫೦೨-೪-೦ — ೫೦೨-೮-೦
ಕಡಿಮೆ	೪೯೭-೦-೦ — ೪೯೭-೮-೦

ಬಂಗಾರ

ತಯಾರಿ	೧೦೭—೩—೦
ವಾಯದೆ	೧೦೭—೩—೦
ಸಾವರಿನ	೬೯—೦—೦

ಬೆಳ್ಳಿ

ತಯಾರಿ	೧೭೧—೬—೦
ವಾಯದೆ	೧೭೧—೦—೦
ಚೇಂಬರ	೧೭೯—೧೦—೦

ಎಣ್ಣೆ ಕಾಳುಗಳು

ಶೇಂಗಾ	೧೬೦—೦—೦
,, (ಹೊಸತು)	೧೫೪—೮—೦
ಅಗಸಿ	೨೯—೨—೦
ಅಗಸೆ ಎಣ್ಣೆ	೧೮—೪—೦

ಶಿವಮೊಗ್ಗೆ

ಡಿಸೆಂಬರ ೧೬

ಶಿವಮೊಗ್ಗೆ ಅಡಿಕೆಪೇಟೆಯ ಧಾರಣೆ ಮಣ ೧ ಕ್ಕೆ ಈರೀತಿ ಇದೆ—

ದೇಶಾವರ ನಂ. ೧ ಮಣ ೧ ಕ್ಕೆ	೩೫-೪೫
ಕೊಪ್ಪ ಶೃಂಗೇರಿ	೩೫-೪೦
ತೋರಸಾಲು	೩೪-೩೮
ಚೆಟ್ಟಿ	೧೬-೨೨

ಗಿರಾಕಿಇಲ್ಲ ಮಾಲು ಹೆಚ್ಚು ಬರುತ್ತಿದೆ.

ಸಾಂಗಲಿ ಪೇಟೆ

ಡಿಸೆಂಬರ ೧೬—

ಅರಿಷಣ ಹೇರಿಗೆ	೧೧೬
ಹೊಸ ಮೆಣಸಿನಕಾಯಿ	೧೦೦-೧೫೦
ಬೆಲ್ಲ ಹೇರಿಗೆ	೪೭-೮೦
ಶೇಂಗಾ ಖಂಡಿ	೧೧೦-೧೧೯-೪-೦

ಹುಬ್ಬಳ್ಳಿ

ತಾ. ೧೯

ಹೊಸ ಜಯವಂತ ಹತ್ತಿ ನಂ.	೧	೩೨೫-೩೩೦
„	೨	೩೧೫-೩೨೦
„	೩	೩೦೦-೩೧೦
ಹಳೇ ಜಯವಂತ ಹತ್ತಿ		೩೫೦-೩೫೮
ಜಿನ ಹಳೆದು		೨೩೦-೨೪೦
ಜಿನ ಹೊಸದು		೨೧೦-೨೨೫
ಅಪಲಂಡ ಡಬಲರೋಲ		೨೦೫-೨೧೫
ಸಾಜಿನ		೨೦೦-೨೧೦
ಅಪಲಂಡ ಹತ್ತಿಕಾಳು		೮॥-೯
ಜ ಹತ್ತಿಕಾಳು		೮।-೮॥

ಕರ್ನಾಟಕ

ಧಾರವಾಡ

ಕಾಸರಗೋಡಿನಲ್ಲಿ ಕೂಡುವ ಕನ್ನಡ ಸಾಹಿತ್ಯ ಸಮ್ಮೇಲನದ ಅಂಗವಾಗಿ ನಡೆಯುವ ಸಾಹಿತ್ಯ ಗೋಷ್ಠಿಗೆ ಅಧ್ಯಕ್ಷರಾಗಿ ಆರಿಸಲ್ಪಟ್ಟ ಶ್ರೀ ಆರ್. ವಿ. ಜಾಗಿರದಾರರನ್ನು ಅಭಿನಂದಿಸುವ ಸಲುವಾಗಿ ಧಾರವಾಡದ ಸಾಹಿತ್ಯ ಮಂಟಪದವರು ಮಂಗಳವಾರ ದಿನ ಸತ್ಕಾರ ಸಮಾರಂಭವನ್ನು ಜರುಗಿಸಿದರು. ಶ್ರೀ ಮಳಿಯೆ ಗೋವರ್ಧನರಾಯರು ಅಧ್ಯಕ್ಷತೆ ವಹಿಸಿದ್ದರು.

ಧಾರವಾಡದಲ್ಲಿ ಹಾಲಗೇರಿ ಹಣಮಂತದೇವರ ಗುಡಿಯಲ್ಲಿ ೧೪ ನೇ ತಾರೀಕಿನಿಂದ ದಾಸ ಸಾಹಿತ್ಯ ಸಪ್ತಾಹವು ಪ್ರಾರಂಭವಾಗಿದೆ. ಅದರ ಉದ್ಘಾಟನವನ್ನು ಶ್ರೀ ನ. ವಿ. ಪಾಮಡಿಯವರು ಮಾಡಿದರು. ದಿನಾಲು ದಾಸರ ಪದಗಳನ್ನು ಹೇಳುವದು ಮೊದಲಾದ ಕಾರ್ಯಕ್ರಮಗಳು ನಡೆದವು.

ಬೆಟಗೇರಿ ದರೋಡೆ ಗುನ್ಹೆ ಮಾಲು ಇದ್ದ ಗೌಸುಸಾಹೇಬ ಹೆಬ್ಬಳ್ಳಿ ಇವರು ಶ್ರೀ ಜಿಲ್ಹದ ಫೌಜದಾರರು ತಪಾಸ ನಡೆಸಿದಾಗ ಮಾಲು ತಂದು ಕೊಡುತ್ತೇವೆಂದು ಹೇಳಿ ಹೋಗಿ ಪೋಲೀಸರು ತನ್ನನ್ನು ಹೊಡೆದುಬಡೆದರೆಂದು ಮಂತ್ರಿಗಳು ಹಾಗು ಪೋಲೀಸ ಸಾಹೇಬರಿಗೆ ಸುಳ್ಳು ಅರ್ಜಿ ಮಾಡಿದ ಬಗ್ಗೆ ಖಟ್ಲೆ ನಡೆದು ಅವರಿಗೆ ೧೫ ತಿಂಗಳ ಶಿಕ್ಷೆ ೧೦೦ ರೂ. ದಂಡ ವಿಧಿಸಲಾಗಿತ್ತು. ಅಪೀಲಿನಲ್ಲಿಯೂ ಅದು ಕಾಯಂ ಆಯಿತು.

ಆಕ್ಟೋಬರ ತಿಂಗಳಿನ ೫೧೪ ಬಟ್ಟೆ ಗಂಟುಗಳು ಧಾರವಾಡ ಜಿಲ್ಹೆಗೆ ಬಂದಿದ್ದು ಬಿ. ಡಿ. ವ್ಯಾಪಾರಿಗಳಿಗೆ ಈ ಗಂಟುಗಳನ್ನು ಕೊಳ್ಳಲು ಅಧಿಕಾರ ಕೊಡಲಾಗಿದೆಯೆಂದು ಜಿಲ್ಹಾಧಿಕಾರಿಗಳು ಪ್ರಕಟಿಸುತ್ತಾರೆ.

ರಾಣೇಬಿನ್ನೂರಿನಲ್ಲಿ ಬೀಡಾರ ಬಿಟ್ಟಿರುವ ಶ್ರೀ ಉತ್ತರಾದಿಮಠಾಧೀಶರಿಗೆ ವ್ರತಾಹಾರದ ನಿಮಿತ್ತವಾಗಿಯೊ ಇನ್ನಿತರ ಕಾರಣಗಳಿಂದಲೋ ಶರೀರದ ಉಷ್ಣತೆ ಒಮ್ಮಿಂದೊಮ್ಮೆ ಹೆಚ್ಚಿ ರಕ್ತವಾಂತಿ ಪ್ರಾರಂಭವಾಯಿತು. ಎರಡು ಮೂರು ಸಲ ರಕ್ತವಾಂತಿಯಾಗಿ ಒಮ್ಮೆ ರಕ್ತಭ್ರಾಂತಿಯೂ ಆಯಿತಂತೆ. ಕೂಡಲೆ ಡಾಕ್ಟರರನ್ನು ಕರೆಯಿಸಿ ಉಪಚರಿಸಲಾಯಿತು, ಅವರ ಪ್ರಕೃತಿ ಈಗ ಸ್ವಲ್ಪ ಗುಣಮುಖವಾಗಿದೆ. ಬೇಗ ಅವರು ಪೂರ್ಣ ಗುಣವಾಗಲೆಂದು ಶಿಷ್ಯವೃಂದವೆಲ್ಲ ಭಗವಂತನನ್ನು ಪ್ರಾರ್ಥಿಸುತ್ತದೆ.

ಕಳೆದ ೨—೩ ವರ್ಷಗಳಿಂದ ಕಲಘಟಗಿ ಹಾಗು ಮುಂಡಗೋಡ ಭಾಗಗಳಲ್ಲಿ ಕನ್ನ ಹಾಗೂ ಕಳವಿನ ಗುನ್ಹೆಗಳು ಬಹಳ ನಡೆದಿದ್ದವು. ಈ ಬಗ್ಗೆ ಪೋಲೀಸ ಅಧಿಕಾರಿಗಳು ತಪಾಸ ಮಾಡಿ ಗ್ಯಾಂಗಿನ ಪತ್ತೆ ಹಚ್ಚಿರುವರು. ಮಿರ್ಜಾನಸಾಬ ಸಿದ್ದಿ ಗುಂಜಾವತಿ, ಇಮಾಮಸಾಬ ಆಗಡಿ, ಮೊಮ್ಮೀಗಟ್ಟಿ ಮೊದಲಾದ ೮ ಜನರನ್ನು ಸೆರೆಹಿಡಿದಿರುವರು. ಲಾಯಸೆನ್ಸು ಇಲ್ಲದ ಬಂದೂಕು ಮತ್ತು ೮-೧೦ ಕಳವಿನ ಗುನ್ಹೆ ಮಾಲು ಸುಮಾರು ೨ ಸಾವಿರ ರೂಪಾಯಿ ಅವರಲ್ಲಿ ಸಿಕ್ಕಿದ್ದು ಹೆಚ್ಚಿನ ತಪಾಸು ನಡೆದಿದೆ.

ಹೊಲದೊಡೆಯರು ತಮ್ಮ ಭೂಮಿಗಳನ್ನು ಸಂಘದ ಸ್ವಾಧೀನಪಡಿಸಿ ಸಹಕಾರಿ ಹಾಗು ಒಕ್ಕಲತನ ಖಾತೆಯ ಸಹಾಯದಿಂದ ಸಂಯುಕ್ತ ಸಾಗುವಳಿ ಪದ್ಧತಿಯ ಮೇಲೆ ಭೂಮಿಗಳ ಕಾಯಂ ಸುಧಾರಣೆ ಮಾಡಿ ಬೆಳೆಗಳ ಉತ್ಪಾದನೆ ಹೆಚ್ಚಿಸಬೇಕೆಂಬ ಉದ್ದೇಶದಿಂದ ಗದುಗಿನಲ್ಲಿ ಪರಸ್ಪರ ಸಹಕಾರಿ ಸಂಘ ಸ್ಥಾಪನೆಯ ವಿಚಾರ ಶ್ರೀ ನವಲಿ ಗೋಪಾಳರಾಯರ ಮನೆಯಲ್ಲಿ ನಡೆಯಿತು. ಸಹಕಾರ ಸಂಘದ ಅಧಿಕಾರಿಗಳೂ ಇತರ ಮಹನೀಯರೂ ಬಂದಿದ್ದರು. ಸಂಘವನ್ನು ರಜಿಸ್ಟರ ಮಾಡಿಸಬೇಕೆಂದು ಗೊತ್ತಾಯಿತು.

ಹುಬ್ಬಳ್ಳಿಯ ಪ್ರಸಿದ್ಧ ವ್ಯಾಪಾರಿಗಳಾದ ಶ್ರೀ ದೀಪಚಂದ ಚುನೀಲಾಲ ಇವರ ಅಂಗಡಿಯಲ್ಲಿ ಸೀರೆಗಳನ್ನು ಕಳವು ಮಾಡಿದ್ದರ ಸಂಬಂಧದಲ್ಲಿ ಮೂವರನ್ನು ಬಂಧಿಸಿದ್ದು ಅವರ ಹತ್ತರ ೨೦೦ ರೂ. ಗಳ ಸೀರೆ ಮತ್ತು ಇತರ ಸಾಮಾನ ಸಿಕ್ಕಿವೆ.

ಬೆಳಗಾವಿ

ಬೆಳಗಾವಿಯಲ್ಲಿ ಕಳೆದ ಗುರುವಾರ ೧೮ ಕ್ಕೆ ಚಂಪಾಷಷ್ಠಿ ನಿಮಿತ್ತ ರಾತ್ರಿ ೮ ಗಂಟೆಗೆ ವೆಂಕಟೇಶ ದೇವಾಲಯದಲ್ಲಿ ೫೦೦೦ ಹಣತಿ ದೀಪೋತ್ಸವ ಜರುಗಿತು.

ಮುಂಬಯಿ ಶಾಸನಸಭೆಯ ಸದಸ್ಯರಾದ ಶ್ರೀ ವೆಂಕರೆಡ್ಡಿ ಹೂಲಿಯವರು ಗೋಕಾವಿಗೆ ಬಂದಾಗ ಜುಮ್ಮಾ ಮಸೀದೆಯಲ್ಲಿ ಮುಸಲ್ಮಾನ ಸಮಾಜದೆದುರು ಭಾಷಣಮಾಡಿ ಶಾಂತಿ ಸೌಹಾರ್ದ ಬಗ್ಗೆ ಹೇಳಿದರು. ವಿ. ಎಸ್ ನಾಡಕರ್ಣಿ ಮತ್ತು ಯಮನಪ್ಪ ಅರಭಾವಿಯವರೂ ಪರಿಸ್ಥಿತಿಯನ್ನು ವಿವರಿಸಿ ಹೇಳಿದರು. ತತ್ಪರಿಣಾಮವಾಗಿ ಇಲ್ಲಿಯ ಮುಸ್ಲಿಂಲೀಗು ವಿಸರ್ಜಿತವಾಗಿದ್ದು ಮುಸಲ್ಮಾನರಲ್ಲಿ ರಾಷ್ಟ್ರೀಯ ಭಾವನೆ ಜಾಗೃತವಾಗಲಾರಂಭಿಸಿದೆ.

ಬೆಳಗಾವಿ ಜಿಲ್ಹಾ ಕಾಂಗ್ರೆಸ ಸಮಿತಿಯ ಅಧ್ಯಕ್ಷರಾದ ಶ್ರೀ ಶೇಖಸಾಹೇಬರು ಅಣ್ಣುಗುರುಜಿ ಮೊದಲಾದವರೊಂದಿಗೆ ಜೈಲಪೊಂಗಲ ಸಪದತ್ತಿ ತಾಲೂಕಗಳಲ್ಲಿಯ ಸಂಕ್ರಸ್ತ ಭಾಗಗಳಿಗೆ ಭೆಟ್ಟಿ ಕೊಟ್ಟು ಕಾಂಗ್ರೆಸ ಹಿಂದೂ ಧರ್ಮ ಹಾಗು ಭಾವಕ್ಕೆ ಕಲಂಕತರುವ ರೀತಿಯಲ್ಲಿ ವರ್ತಿಸಬಾರದೆಂದೂ ಅಲ್ಪಸಂಖ್ಯಾಕರನ್ನು ರಕ್ಷಿಸಬೇಕೆಂದೂ ಹೇಳಿದರು.

ಗೋಕಾವಿಯ ಗೃಹರಕ್ಷಕ ದಲದ ಉದ್ಘಾಟನೆಗೆಂದು ಮಾನ್ಯ ಮಂತ್ರಿ ಮುರಾರಜಿಯವರು ೧೨ ನೇ ತಾರೀಕಿಗೆ ಬರಲಿರುವರೆಂದು ತಿಳಿಯುತ್ತದೆ. ಮಂತ್ರಿವರ್ಯ ವರ್ತಕರು ೨೭ ಕ್ಕೆ ಬರಲಿರುವರೆಂದೂ ತಿಳಿಯುತ್ತದೆ.

ಮುಂಬಯಿ ಸರಕಾರದ ಒಕ್ಕಲತನ ಹಾಗು ಅರಣ್ಯ ಖಾತೆಯ ಮಂತ್ರಿಗಳಾದ ಶ್ರೀ ಮಲ್ಲನಗೌಡ ಪಾಟೀಲರು ೧೩ ನೇ ತಾರೀಕು ಬೆಳಗಾವಿಗೆ ಬಂದು ಒಕ್ಕಲತನ ವಿಭಾಗದ ಎಂಜಿನಿಯರರ ಗೂಡ ದಡ್ಡಿ ಯೋಜನೆಯ ಸಂಬಂಧದಲ್ಲಿ ವಿಚಾರವಿನಿಮಯಮಾಡಿದರು. ಕಾಂಗ್ರೆಸ ಕಾರ್ಯಕರ್ತರೊಡನೆ ಮಾತಾಡುತ್ತ ದಡ್ಡಿ ಯೋಜನೆ ಕಾರ್ಯಕಾರಿಯಾಗುವಲ್ಲಿ ಸಂದೇಹವಿಲ್ಲೆಂದೂ ಮೊದಲು ದಡ್ಡಿ ಯೋಜನೆಯೋ ಆಸೋಗಾ ಯೋಜನೆಯೋ ಎಂಬ ವಿಚಾರ ಮಾತ್ರ ನಡೆದಿದೆಯೆಂದೂ ಹೇಳಿದರು. ಕಾಳೀ ಯೋಜನೆ ಜೋಗ ಯೋಜನೆಗಿಂತ ಹೆಚ್ಚು ಉಪಯುಕ್ತವೆಂದೂ ಅವರು ಅಭಿಪ್ರಾಯ ಪಟ್ಟರು.

ಚಿಕ್ಕೋಡಿಯ ಮಾಮಲೇದಾರ ಕಚೇರಿಯ ಆವಾರದಲ್ಲಿ ಸಂಗಮರವರಿ ಕಲ್ಲಿನ ಮಹಾತ್ಮರ ಪುತ್ಥಳಿಯ ಅನಾವರಣ ಸಮಾರಂಭ ಶ್ರೀ ಎಂ. ಪಿ. ಪಾಟೀಲರ ಹಸ್ತದಿಂದ ಜರುಗಿತು. ಮಂತ್ರಿಗಳು ಜಿಲ್ಹೆಯ ಕೆಲ ಭಾಗಗಳನ್ನು ಸಂದರ್ಶಿಸಿ ಮುಂಬಯಿಗೆ ಮರಳಿದರು.

ವಿಜಾಪುರ

ಬಿಜ್ಜರಗಿಯಲ್ಲಿ ಬಿಳಿಕಾಗೆಯೊಂದು ಹುಟ್ಟಿದೆ. ಈ ಕಾಲದಲ್ಲಿ ಇದೊಂದು ವಿಚಿತ್ರ!

ವಿಜಾಪುರದ ವಿಜಯ ಕಾಲೇಜಿನ ಸ್ಥಾಪಕರಾದ ಶ್ರೀಮನ್ನಿರಂಜನ ಬಂಥನಾಳ ಶಿವಯೋಗಿಗಳು ಅಂಗಡಿಕೇರಿಗೆ ಹೋದಾಗ ಕಾಲೇಜಿನ ಸಹಾಯಾರ್ಥವಾಗಿ ಶ್ರೀ ಬಸನಗೌಡ ಪಾಟೀಲ ೫೦೧ ರೂ. ೨೨ ಎಕರೆ ಭೂಮಿ, ಅಯ್ಯನಗೌಡ ಪಾಟೀಲ ೫೦೧ ರೂ. ಶ್ರೀಮತಿ ಶಾಂತಮ್ಮನವರು ಪಾಟೀಲ ೫೦೧ ರೂ. ಅಲ್ಲದೆ ಉಳಿದ ಊರವರು ಕೂಡಿ ೪೦೦ ರೂಪಾಯಿ ಕೊಟ್ಟರು. ಗೊಳಸಂಗಿ ಭಕ್ತಮಂಡಳದವರು ೨೧೫೦ ರೂ. ಕೊಟ್ಟರು.

ಬಾಗಲಕೋಟೆಯ ಎಲ್ಲ ಸಾರ್ವಜನಿಕ ಕೆಲಸಗಳಲ್ಲಿ ಮುಂದಾಗಿ ದುಡಿಯುತಿರುವ ಶ್ರೀ ಜೋರಾಪುರ ಕೃಷ್ಣರಾಯರ ಧರ್ಮಪತ್ನಿ ಸೌ. ರುಕ್ಮಿಣಿಬಾಯಿಯವರು ಕ್ಷಯದ ಬೇನೆಯಿಂದ ಇದೇ ೧೩ ನೇ ತಾರೀಕು ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ತಮ್ಮ ಪತಿಯ ಕಾರ್ಯದಲ್ಲಿ ತುಂಬ ನೆರವಾಗುತ್ತಿದ್ದರು. ಇವರು ಮನೆಯಲ್ಲಿ ಚಿಕ್ಕಚಿಕ್ಕಮಕ್ಕಳನ್ನು ಬಿಟ್ಟು ಅಕಾಲ ಮೃತ್ಯುವಶವಾದ್ದರಿಂದ ಶ್ರೀ ಕೃಷ್ಣರಾಯರಿಗೆ ಅಪಾರ ದುಃಖವಾಗಿದೆ. ಈಶಚಿತ್ತಕ್ಕೆ ಉಪಾಯವಿಲ್ಲ. ಪರಮಾತ್ಮನು ಮೃತರ ಆತ್ಮಕ್ಕೆ ಚಿರಶಾಂತಿಯನ್ನೀಯಲಿ.

ಉತ್ತರ ಕನ್ನಡ

ಗೋವೆಯಿಂದ ಪ್ರವಾಸಿಕರನ್ನು ತುಂಬಿಕೊಂಡು ೧೨ ನೇ ತಾರೀಕಿಗೆ ಮಾಜಾಳಿಗೆ ಬಂದ ಮೋಟಾರಿನಲ್ಲಿಯ ಪ್ರವಾಸಿಕರ ಗಂಟುಗಳನ್ನು ಪರಿಶೋಧಿಸಲಾಗಿ ಶೇಖ ಅಲ್ಲಿ ಶೇಖ ಅಬ್ದುಲ್ ಖಾದರ ಎಂಬವರ ಪೆಟ್ಟಿಗೆಯಲ್ಲಿ ಬಂದೂಕಿನ ೮೦ ಸೀಸದ ಗುಂಡುಗಳು ಒಂದು ಬುಟ್ಟಿ ತುಂಬಮದ್ದು ೧೫ ಫೂಟು ಎರಡು ಚೂರಿಗಳು ಸಿಕ್ಕಿದ್ದರಿಂದ ಪಂಚನಾಮೆ ಮಾಡಿ ಗುನ್ಹೆ ಮಾಲು ಸಹಿತ ಅವರನ್ನು ಕಾರವಾರ ಸಬ್ ಇನಸ್ಪೆಕ್ಟರರ ಕಡೆಗೆ ಕಳಿಸಿಕೊಟ್ಟರು.

ದಕ್ಷಿಣಕನ್ನಡ

ಕಾಸರಗೋಡಿನಲ್ಲಿ ಸೇರುವ ಕನ್ನಡ ಸಾಹಿತ್ಯ ಸಮ್ಮೇಲನವನ್ನು ನ್ಯಾಯಮೂರ್ತಿ ಆರ್. ಎ. ಜಾಗಿರದಾರರು ಉದ್ಘಾಟಿಸುವರು. ಕರ್ನಾಟಕ ಏಕೀಕರಣ ಕ್ರಿಯಾಸಮಿತಿಯ ಸಭೆ ೨೯ ನೇ ತಾರೀಕು ಸಾಯಂಕಾಲ ಇಲ್ಲಿಯೆ ಜರುಗುವದು. ಕರ್ನಾಟಕ ಪರಿಷತ್ತು ಮಾನ್ಯ ಎ ಬಿ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರುಗುವದು.

ಕನ್ನಡ ಸಂಸ್ಥಾನ

ದಕ್ಷಿಣ ಸಂಸ್ಥಾನಗಳ ಒಕ್ಕೂಟ ಸಂಬಂಧದಲ್ಲಿ ಆಯಾ ಸಂಸ್ಥಾನಗಳ ಅಧಿಪತಿಗಳು ಮಹಾತ್ಮಾ ಗಾಂಧಿಯವರನ್ನು ಸರದಾರ ಪಟೇಲರನ್ನು ಭೆಟ್ಟಿಯಾಗಿ ತಮ್ಮ ಯೋಜನೆಗಳ ಬಗ್ಗೆ ಅವರ ಶುಭಾಶೀರ್ವಾದವನ್ನು ಕೋರಿದರು. ಪ್ರಜೆಗಳ ವಿಶ್ವಸ್ತರಾಗಿ ಅವರ ಅಣತಿಯಂತೆ ನಡೆಯಬೇಕೆಂದು ಗಾಂಧೀಜಿ ಹೇಳಿದ್ದಲ್ಲದೆ ಪ್ರಜೆಗಳೂ ಅಧಿಪತಿಗಳೂ ಒಪ್ಪಿದಲ್ಲಿ ವಿಲೀನೀಕರಣಯೋಜನೆ ಜಾರಿಯಲ್ಲಿ ಬರಬೇಕೆಂದು ತಿಳಿಸಿದರು. ದಕ್ಷಿಣಸಂಸ್ಥಾನಗಳ ಒಕ್ಕೂಟದೊಂದಿಗೆ ಮುಂದೆ ಸಾಗಬೇಕೆಂದೂ ಹೇಳಿದರು.

ದಕ್ಷಿಣ ಸಂಸ್ಥಾನಗಳ ಘಟನಾಸಭೆಯ ಉದ್ಘಾಟನವು ೨೦ ನೇ ತಾರೀಖಿಗೆ ಮಿರಜಿಯಲ್ಲಿ ನಡೆಯುವದು.

ಮಲೆನಾಡು ಅಡಿಕೆ ಸಿಂಡಿಕೇಟಿನ ವ್ಯವಸ್ಥಾಪಕರಾದ ಶ್ರೀ ಎಸ್ ಶ್ರೀಕಂಠಯ್ಯ ಇವರು ತಮ್ಮ ಸಹಕಾರಿಗಳೊಡನೆ ದಿಲ್ಲಿಗೆ ಹೋಗಿ ವಾಣಿಜ್ಯಖಾತೆಯ ಮಂತ್ರಿಗಳನ್ನು ಪರಿಷ್ಕಾಧಿಕಾರಿಗಳನ್ನು ಭೆಟ್ಟಿಯಾಗಿ ಅಡಿಕೆ ಬೆಳೆ ಒಮ್ಮೆಲೆ ಇಳಿದ ಬಗೆ ತಮ್ಮ ವಿವಂಚನೆಯನ್ನು ವ್ಯಕ್ತಪಡಿಸಿ ಬೆಳೆಗಾರರ ಸಂಕಷ್ಟಗಳನ್ನೆಲ್ಲ ನಿವಾರಿಸಲು ಯೋಗ್ಯ ಸಂರಕ್ಷಣೆಯನ್ನು ಕೊಡಬೇಕೆಂದು ಕೇಳಿಕೊಂಡರು.

ರಾಮದುರ್ಗ ಪ್ರಜಾಸಂಘದ ಕಾರ್ಯಕಾರೀ ಮಂಡಳದ ಸಭೆಸೇರಿ ವಿಲೀನೀಕರಣ ಗೊತ್ತುವಳಿಯನ್ನು ಪಾಸುಮಾಡಲಾಯಿತು. ಜಮಖಂಡಿ ರಾಜಾಸಾಹೇಬರು ಇದರಲ್ಲಿ ಮುಂದುವರಿದ್ದಕ್ಕಾಗಿ ಅವರನ್ನಭಿನಂದಿಸಲಾಯಿತು.

ಜಮಖಂಡಿಯ ರಾಜೇಸಾಹೇಬರಾದ ಶ್ರೀಮಂತ ಪರಶುರಾಮ ಭಾವೂ ಇವರು ಕುಂದಗೋಳ, ಸಾಂಸಿ ಭಾಗಗಳಲ್ಲಿ ಸಂಚರಿಸಿದರು. ಹೋದಹೋದಲ್ಲಿ ಪ್ರಜೆಗಳು ಅವರನ್ನು ಸಂಭ್ರಮದಿಂದ ಸತ್ಕರಿಸಿದರು. ರಾಜೇಸಾಹೇಬರು ವಿಲೀನೀಕರಣದ ಸಂಬಂಧದಲ್ಲಿ ಮಾತಾಡುತ್ತ ಧುರೀಣರೇ ಅದನ್ನು ವಿರೋಧಿಸುತ್ತಿದ್ದು ಅವರ ಹೃದಯ ಪರಿವರ್ತನೆ ಮಾಡಿರೆಂದು ಪ್ರಜೆಗಳಿಗೆ ಉಪದೇಶಿಸಿದರು.

ಸಾಂಗಲಿಯಲ್ಲಿ ಸ್ಥಳೀಯ ಟ್ರೇನಿಂಗ ಕಾಲೇಜ ಹಾಲಿನಲ್ಲಿ ೧೧ ನೇ ತಾರೀಕಿನ ದಿವಸ ಕನ್ನಡ ಶಾಲೆಯ ಉದ್ಘಾಟನ ಸಮಾರಂಭ ಜರುಗಿತು. ವಿಘ್ನೇಶ್ವರ ಪೂಜೆಯ ನಂತರ ಪ್ರ. ಮುಗಳಿ ಮಂತ್ರಿವರ್ಯ ದೇಶಪಾಂಡೆ, ವಿದ್ಯಾಖಾತೆಯ ಇನಸ್ಪೆಕ್ಟರ ಗೋಖಲೆ ಮತ್ತು ಕನ್ನಡಿಗರ ಸಂಘದ ಅಧ್ಯಕ್ಷರಾದ ಶ್ರೀ ಭಾವಕೆ ಮತ್ತು ದಿವಾಣರಾದ ಶ್ರೀ ಬೈತಮಂಗಳಕರ ಮೊದಲಾದವರು ಭಾಷಣಮಾಡಿ ಸಾಂಗಲಿ ರಾಜೇಸಾಹೇಬರ ಕನ್ನಡ ಪ್ರೇಮವನ್ನು ಕೊಂಡಾಡಿದರು. ದ್ಯಾವಣಗೇರಿಯ ಶ್ರೀನಿವಾಸ ಶೆಟ್ಟಿ ಮತ್ತು ಬಂಧುಗಳು ಉಪಾಧ್ಯಾಯರ ೬ ತಿಂಗಳ ಸಂಬಳವನ್ನು ವಹಿಸಿಕೊಂಡದ್ದರಿಂದ ಇಷ್ಟು ಬೇಗ ಇದರ ಸ್ಥಾಪನೆಯಾಯಿತು.

ಬೆಂಗಳೂರಿನಲ್ಲಿ ದೊಂಬಿ

ಪರಿಸ್ಥಿತಿ ಬೇಗ ಶಾಂತವಾಗಿದೆ

ಬೆಂಗಳೂರಿನ ಕೋಟೆ ಭಾಗದಲ್ಲಿ ೧೬ ನೇ ತಾರೀಕು [illegible] ನಡೆದದ್ದರಿಂದ ಸಂಜೆ ೬ ರಿಂದ ೧೪ ಗಂಟೆಗಳ ಕರ್ಫ್ಯೂ ಜಾರಿ [illegible] ಯಿತು. ಕೋಟೆ [illegible] ವಿದ್ಯಾರ್ಥಿಯ ಮೇಲೆ [illegible] ಬಿದ್ದುದರಿಂದ [illegible] ವಿದ್ಯಾರ್ಥಿಗಳಲ್ಲಿ [illegible]. [illegible] ಮನೆಗಳು ಧ್ವಂಸ [illegible] ತಿಳಿಯುತ್ತದೆ. ಗಲಭೆ ಪರಿಣಾಮವಾಗಿ ೧೦ ಜನರು [illegible] ಸುಮಾರು ೧೦೦ ಜನರಿಗೆ ಗಾಯ [illegible] ಗಿದೆ. ಮಂತ್ರಿವರ್ಯ [illegible] ಸಂಕ್ರಸ್ತ ಭಾಗದಲ್ಲಿ ಸಂಚರಿಸಿ ಪರಿಸ್ಥಿತಿಯು [illegible] ಗಿದೆ. ೧೪ ನೇ ತಾರೀಕಿನ ದಿವಸ [illegible] ಮುಂಜಾನೆ ೬ ರಿಂದ ೨೪ ತಾಸು ಕರ್ಫ್ಯೂ [illegible] ಲಾಗಿದೆ.

[illegible] ೧೫ ನೇ ತಾರೀಕು ಕರ್ಫ್ಯೂ [illegible] ಸ್ವಲ್ಪ ಸಡಲಿಸಲಾಯಿತು. [illegible] ನಡೆದವು. [illegible] ಗಳನ್ನು ಪೋಲೀಸರು [illegible] ಪೋಲೀಸರು [illegible] ಜನರನ್ನು [illegible]. ಪೋಲೀಸರು, [illegible] ಕಾವಲು [illegible]. ೧೬ ನೇ ತಾರೀಕು [illegible] ಇದುವರೆಗೆ ೧೪ ಜನರು ಸತ್ತದ್ದು [illegible] ನ್ನು ಮುಕ್ಕಿದೆ. ಪವಿತ್ರ [illegible] ಪೋಲೀಸರು [illegible] ವಂದೇಮಾತರಂ ಗೀತೆಗೆ ತಮ್ಮ ದೇಣಿ ಆಕ್ಷೇಪವಿಲ್ಲೆಂದು ಸಂಸ್ಥಾನದ ಮುಸಲ್ಮಾನ ಮುಂದಾಳುಗಳು ಆಶ್ವಾಸನ ಕೊಟ್ಟಿರುವರು. [illegible] ವಂದನೆಮಾತಲೂ ಅವರು ಒಪ್ಪಿಕೊಂಡಿರುವರು. ಶಾಲೆಯಲ್ಲಿ ವಂದೇಮಾತರಂ ಪದ್ಯಕ್ಕೆ ಮುಸಲ್ಮಾನರು ಆಕ್ಷೇಪಿಸತೊಡಗಿದ್ದರಿಂದ [illegible] ದಲ್ಲೆಲ್ಲ ಪ್ರಕ್ಷುಬ್ಧ ಪರಿಸ್ಥಿತಿಯುಂಟಾಗಿತ್ತು. ಆದರೀಗ ಮುಸಲ್ಮಾನರು ತಮ್ಮ ಆಕ್ಷೇಪವೇನೂ ಇಲ್ಲೆಂದು ಹೇಳಿದ್ದರಿಂದ ಪರಿಸ್ಥಿತಿ [illegible] ಶಾಂತವಾಗಿದೆ.

ಅಂಕುಶ (ಕನ್ನಡ ವಾರಪತ್ರಿಕೆ)

ಪ್ರಕಾಶಕರು- ಶ್ರೀ. ಧೀ. ಕು. ಪಾಟೀಲರು— ಧಾರವಾಡ ಅಂಕುಶ ಕಾರ್ಯಾಲಯ.

ಪುಟಗಳು ೮. [illegible] ಸಂಚಿಕೆ ೨ ಆಣೆ.


ಅಂಕುಶವು ತನ್ನ ಗುರಿತಪ್ಪದೆ ಮುಂದೆ ಸಾಗುವವಾಗಿ ಹಾರೈಸುತ್ತೇವೆ.

ಶೃಂಗೇರಿ ಜಗದ್ಗುರು ಸಂಸ್ಥಾನದ ಅಲ್ಲಿಯ [illegible] ದೇವಸ್ಥಾನದ ಶ್ರೀಯೋಭಿವೃದ್ಧಿಗಾಗಿ [illegible] ೨೫೦ ರೂಪಾಯಿಗಳ ವೆಚ್ಚದ ಯೋಜನೆಯೊಂದನ್ನು ಮಾಡಿರುವರು. ಆದರೆ ಜಗದ್ಗುರುಗಳ ಯೋಜನೆಗೆ ಸರಕಾರದ [illegible] ರಿಸಬೇಕೆಂದೂ [illegible] ಬಾರದೆಂದೂ ಮುಂತಾಗಿ ಅವರು ತಿಳಿಸುತ್ತಾರೆ.

ನೂತನ ಆಯುರ್ವೇದ ಕಾರ್ಯಾಲಯ ವಿಜಾಪುರ

--- ಶ್ರೀ ಧನ್ವಂತರಿ ಮಹೋತ್ಸವ —

ತಾ. ೧೦—೧೧—೪೭ ಕ್ಕೆ ವಿಜಾಪುರದಲ್ಲಿ ಸಿವಿಲ್ ಸರ್ಜನ್ ಶ್ರೀ [illegible] ಅಧ್ಯಕ್ಷತೆಯಲ್ಲಿ ಜರುಗಿದ ಶ್ರೀ. ಧನ್ವಂತರಿ ಉತ್ಸವದ ಛಾಯಾಚಿತ್ರ. ಶ್ರೀ. [illegible] ಮುಖ್ಯ ಭಾಷಣಕಾರರಾಗಿದ್ದರು.



ಮುಂಬಯಿ

ಸಾಮ್ಯವಾದಿ ಶ್ರೀ ಲಿಮಯೆ ಅವರು ಅಶ್ರುವಾಯು ಕಸ್ತ್ರಗಳ ಸಂಬಂಧವಲ್ಲಿ ತಾ. ೧೫ರಂದು ಬಂಧಿತರಾಗಿದ್ದಾರೆ.

ಮುಂಬಯಿ ಟ್ರಿಬ್ಯುನಿಗಿಂಡೆ ಒಡೆಯರ ಸಂಘದ ಮುಖಾಂತರ ನಿರಾಶ್ರಿತರಿಗೆ ಹಂಚುವದಕ್ಕಾಗಿ ದಿಲ್ಲಿಗೆ ೩೦೦ ಬಟ್ಟೆಯ ಗಂಟುಗಳನ್ನು ದಾನರೂಪವಾಗಿ ಕಳಿಸಲಾಗಿದೆಯೆಂದು ಗಿರಣಿ ಒಡೆಯರ ಸಂಘದ ಕಾರ್ಯದರ್ಶಿಗಳು ಮಾಧ್ಯಮಿಕ ಮಧ್ಯಶಾಲೆಯ ಆರನೇ ಏಳನೇ ಇಯತ್ತೆಯ ಹಿರಿಯ ವಿದ್ಯಾರ್ಥಿಗಳಿಗೆ ಸ್ವಸ್ಥ ಶಿಕ್ಷಣ ಕೊಡಲು ಮುಂಬಯಿ ಸರಕಾರವು ನಿರ್ಧರಿಸಿದೆ. ಸದ್ಯಕ್ಕೆ ೩ ಸಾವಿರ ವಿದ್ಯಾರ್ಥಿಗಳಿಗೆ ಪ್ರವೇಶ ಕೊಡಲಾಗುವದು.

ಮಾನ್ಯ ನಂದಾರವರು ಮುಂಬಯಿ ಸರಕಾರದ ಗೃಹಯೋಜನೆಯನ್ನು ವಿವರಿಸುತ್ತ ಕಳೆದ ೧೦೦ ವರ್ಷಗಳಲ್ಲಿ ಅಹಮ್ಮದಾಬಾದದ ಜನಸಂಖ್ಯೆ ೧೦೦ಕ್ಕೆ ೩೦೦ ರಷ್ಟು ಹೆಚ್ಚಿದ್ದು ೪೫ ಸಾವಿರ ಹೊಸ ಮನೆಗಳು ಈ ನಗರಕ್ಕೆ ಬೇಕಾಗಿವೆಯೆಂದೂ ಪ್ರಾಂತದಲ್ಲೆಲ್ಲ ಉಂಟಾದ ಈ ಸಮಸ್ಯೆಯನ್ನು ಸರಕಾರವು ಬಿಡಿಸಲು ನಿರ್ಧರಿಸಿದೆಯೆಂದೂ ಹೇಳಿದರು.

ಮುಂಬಯಿ ಹೊಸ ಗುವಳಿ ಕಾಯದೆ ಅನ್ವಯ ೧೯೪೮ ಅಗಸ್ಟ ೧ ರಿಂದ ಕೆಳಗೆಕಾಣಿಸಿದ ಭಾಗಗಳಲ್ಲಿ ಕೋರುಪಾಲನ್ನು ರೋಖಹಣದ ರೂಪದಲ್ಲಿ ಪರಿವರ್ತಿಸಲು ಯೋಜಿಸಿದ್ದಾರೆ. ಈ ಬಗ್ಗೆ ಆಕ್ಷೇಪ ಕಳಿಸುವವರು ಸರಕಾರದ ಕಂದಾಯ ಸೆಕ್ರೆಟರಿ ಅವರಿಗೆ ಜಾನೇವರಿ ೨೫ ರೊಳಗಾಗಿ ಕಳಿಸಬೇಕು. ಈ ಯೋಜನೆಗೆ ಒಳಪಟ್ಟ ಭಾಗಗಳು; ಅಹಮ್ಮದಾಬಾದ, ಪಂಚಮಹಾಲ, ಸುರತ, ಠಾಣೆ, ಪಶ್ಚಿಮ ಖಾನದೇಶ ನಾಸಿಕ, ಧಾರವಾಡ ಹಾಗು ಕಾರವಾರ ಜಿಲ್ಲೆಗಳ ಎಲ್ಲ ತಾಲೂಕು ಮತ್ತು ಬೆಳಗಾವ ಜಿಲ್ಲೆಯ ಖಾನಾಪುರ ತಾಲೂಕು ಮತ್ತು ಚಂದಗಡ ಮಹಾಲಿನ ಹಾಗು ಕುಲಾಬಾ ಜಿಲ್ಲೆಯ ಅಲಿಬಾಗ ಕರ್ಜತ ಮೊದಲಾದವು.

ಡಾ. ಎಂ. ಆರ್. ಜಯಕರರು ತಾ. ೧೩ ರಂದು ಬೃಹನ್ಮಹಾರಾಷ್ಟ್ರ ವಣಿಕ್ ಕಾಲೇಜಿನಲ್ಲಿ ಭಾಷಣಮಾಡುತ್ತ ಪುಣೆ ವಿಶ್ವ ವಿದ್ಯಾಲಯದ ಸ್ಥಾಪನೆಗೆ ಗಂಡಾಂತರ ಒದಗುವ ಲಕ್ಷಣವಿರುವದೆಂದೂ ಮರಾಠಿ ಭಾಷೆಯಾಡುವವರೆಲ್ಲ ಮತಭೇದ ಮರೆತು ಒಕ್ಕಟ್ಟಾಗಿ ಈ ವಿಶ್ವವಿದ್ಯಾಲಯವು ಬೇಗ ಅಸ್ತಿತ್ವದಲ್ಲಿ ಬರುವಂತೆ ನೋಡಿಕೊಳ್ಳಬೇಕೆಂದೂ ಹೇಳಿದರು.

ಮುಂಬಯಿ ಸರಕಾರದವರು ಮಾಧ್ಯಮಿಕ ಶಿಕ್ಷಣ ಸುಧಾರಣೆ ಸಂಬಂಧದಲ್ಲಿ ಯುದ್ಧೋತ್ತರ ಪುನರ್ರಚನೆ ಯೋಜನೆಯೆಂದು ಪಂಚವಾರ್ಷಿಕ ಯೋಜನೆ ಮಾನ್ಯ ಮಾಡಿದ್ದಾರೆ. ಈ ಯೋಜನೆಯನ್ವಯ ೧೯೪೭-೧೯೪೮ ರಿಂದ ಪ್ರತಿವರ್ಷ ಸರಕಾರೇತರ ಮಾಧ್ಯಮಿಕ ಶಾಲೆಗಳಿಗೆ ಗ್ರಾಂಟ ಹಣ ಹೆಚ್ಚಿಸುತ್ತ ಹೋಗಲಾಗುವದು. ಈಗ ಗ್ರಾಂಟ ಹಣ ೨೧ ಲಕ್ಷವಿದೆ. ೧೯೪೭-೪೮ ರಲ್ಲಿ ೧೦ ಲಕ್ಷ ಹೆಚ್ಚಿಸಿ ಮುಂದೆ ೫ ವರ್ಷಗಳ ವರೆಗೆ ಪ್ರತಿವರ್ಷ ಎರಡೆರಡು ಲಕ್ಷ ಹೆಚ್ಚಿಸಲಾಗುವದು ಮಾಧ್ಯಮಿಕ ಶಾಲೆಗಳ ಪರಿಸ್ಥಿತಿ ಸುಧಾರಿಸುವದೇ ಈ ಯೋಜನೆಯ ಗುರಿ.

ಇಂಪೀರಿಯಲ್ ಬ್ಯಾಂಕಿನೊಳಗಿಂದ ತಾ ೧೩ ರಂದು ನಾಸಿಕ ಜಿಲ್ಲಾ ಲೋಕಲ್ ಬೋರ್ಡಿನ ಹಣದ ಪೆಟ್ಟಿಗೆಯು ಕಳವಾಗಿ ಹೋಗಿದೆ. ಅದರಲ್ಲಿ ೨೦೦ ರೂ. ಗಳೂ ಮಹತ್ವದ ಕಾಗದ ಪತ್ರಗಳೂ ಇದ್ದವು.

ಸಂಯುಕ್ತಪ್ರಾಂತ

ಅಲಹಾಬಾದ ವಿಶ್ವವಿದ್ಯಾಲಯದ ಪದವಿದಾನ ಸಮಾರಂಭದಲ್ಲಿ ತಾ ೧೩ ರಂದು ಚಾನ್ಸಲರರಾದ ಶ್ರೀಮತಿ ಸರೋಜಿನಿ ದೇವಿಯವರಿಂದ ಪಂ. ಜವಾಹರಲಾಲರು ಡಾಕ್ಟರ ಆಫ್ ಲಾಯನ್ಸ ಪದವಿಯನ್ನು ಸ್ವೀಕರಿಸಿದರು. ಇದೇ ಪದವಿಯನ್ನು ಸರ್ ಸಿ ವಿ ರಾಮನ್ನ, ಡಾ ಬಿ ಸಿ ರಾಯ, ಸರ್ ವಿಶ್ವೇಶ್ವರಯ್ಯ ಮೊದಲಾದವರಿಗೂ ಕೊಡಲಾಯಿತು.

ಇದರಂತೆ ಶ್ರೀಮತಿ ವಿಜಯಲಕ್ಷ್ಮಿ ಪಂಡಿತ, ಪಂ ಗೋವಿಂದ ವಲ್ಲಭಪಂತ, ಸರ್ ಸುಲೈಮಾನ್ ಮೊದಲಾದವರಿಗೆ ಡಾಕ್ಟರ ಆಫ್ ಲಾ ಪದವಿಯನ್ನೂ, ಮೌ. ಆಜಾದ, ಸರ್ ತೇಜಬಹದ್ದೂರ ಸಪ್ರು ಮತ್ತು ಡಾ. ಕೈಲಾಸನಾಥ ಕಟಜು ಮೊದಲಾದವರಿಗೆ ಡಾಕ್ಟರ ಆಫ್ ಲಿಟರೇಚರ ಪದವಿಯನ್ನೂ ಕೊಡಲಾಯಿತು.

ಪಂ. ಜವಾಹರಲಾಲರು ತಾ ೧೪ ರಂದು ಅಲಹಾಬಾದದಲ್ಲಿ ವಸ್ತುಸಂಗ್ರಹಾಲಯದ ಅಡಿಗಲ್ಲು ಕೂಡಿಸಿದರು. ಮತ್ತು ತಾವು ಬರೆದ ಆತ್ಮ ಚರಿತ್ರೆಯ ಮೂಲಪ್ರತಿಯನ್ನು ಈ ಸಂಗ್ರಹಾಲಯಕ್ಕೆ ಕೊಡುವದಾಗಿಯೂ ಅಲ್ಲಿ ಭಾರತದ ಪ್ರಾಚೀನ ಕಲಾಕೃತಿಗಳನ್ನು ಬೇಗ ಭಾರ

ಮದ್ರಾಸ

ನಾನ್ ಗಜೆಟೆಡ್ ನೌಕರರ ಸಂಪು ತಾ ೧೫ ಮುಂಜಾನೆ ಪ್ರಾರಂಭವಾಯಿತು.

ಭಾಷಾವಾರ ತಳಹದಿಯ ಮೇಲೆ ಮದ್ರಾಸ ಪ್ರಾಂತದ ವಿಭಜನೆಯಾಗಬೇಕೆಂದು ಮದ್ರಾಸ ಉಭಯ ಶಾಸನ ಸಭೆಗಳು ಸ್ವೀಕರಿಸಿದ ಗೊತ್ತುವಳಿಗಳನ್ನು ಕೇಂದ್ರ ಸರಕಾರಕ್ಕೆ ಶ್ರುತಪಡಿಸಲಾಗಿದೆಯೆಂದೂ ಈ ಬಗ್ಗೆ ಸೀಮಾ ಸಮಿತಿಯನ್ನು ನೇಮಿಸಬೇಕೆಂದು ಮದ್ರಾಸ ಸರಕಾರವು ಕೇಂದ್ರ ಸರಕಾರದೊಡನೆ ಪತ್ರವ್ಯವಹಾರ ಮಾಡಿಲ್ಲವೆಂದೂ ಡಾ ಸುಬ್ಬರಾಯನರು ತಾ ೧೩ ರಂದು ಮದ್ರಾಸ ಶಾಸನ ಸಭೆಯಲ್ಲಿ ಕೇಳಲಾದ ಪ್ರಶ್ನೆಗೆ ಉತ್ತರ ಕೊಟ್ಟರು

ಬೇರೆ ಬೇರೆ ಜಮೀನದಾರಿ ಭೂಮಿಗಳ ಲಾವಣಿಗಳನ್ನು ರೈತವಾರಿ ಭೂಮಿಗಳ ಮಟ್ಟಕ್ಕೆ ತರುವ ಮದ್ರಾಸ ಜಮೀನದಾರಿ ಭೂಮಿಗಳ ಮಸೂದೆಯು ತಾ ೧೯ ರಂದು ಶಾಸನ ಸಭೆಯಲ್ಲಿ ಸ್ವೀಕೃತವಾಯಿತು.

ಮಹಾಬೋಧಿ ಸಂಘದವರು ಬೌದ್ಧರ ಚಟುವಟಿಕೆಗಳಿಗಾಗಿ ಮದ್ರಾಸದಲ್ಲಿ ಒಂದು ಶಾಖೆಯನ್ನು ಪ್ರಾರಂಭಿಸಲಿದ್ದಾರೆ. ಕಲಕತ್ತಾ, ಗಯಾ ಕಾಶಿ, ಲಖನೌ, ದಿಲ್ಲಿ, ಮತ್ತು ಮುಂಬಯಿಗಳಲ್ಲಿ ಇದರ ಶಾಖೆಗಳಿವೆ.

ಮದ್ರಾಸ ಸರಕಾರವು ಒಂದು ಪ್ರಕಟನೆ ಹೊರಡಿಸಿ, ನಾನ್ ಗ್ಯಾಝೆಟೆಡ್ ಅಧಿಕಾರಿಗಳ ಮೂಲ ಸಂಬಳದ ಪ್ರಮಾಣಗಳನ್ನು ಹೆಚ್ಚಿಸುವದೆಂದರೆ ಕರಕೊಡುವ ಜನಸಾಮಾನ್ಯರ ಮೇಲೆ ಹೆಚ್ಚಿನ ಭಾರ ಹೇರಿದಂತಾಗುತ್ತದೆ ಎಂದು ಹೇಳಿದೆ.

ಮದ್ರಾಸ ಸರಕಾರವು ಕೈಮಗ್ಗದ ಬಟ್ಟೆಯ ನಿಯಂತ್ರಣ ಹುಕುಮು ಹಾಗು ಕೈಮಗ್ಗದ ಬಟ್ಟೆಯ ಉತ್ಪಾದನೆಯ ನಿಯಂತ್ರಣ ಹುಕುಮು ಬೇಗನೆ ತೆಗೆದೊಗೆಯಲಿದೆ.

ಹೊಸದಿಲ್ಲಿ

ತಾ ೧೨ ರಂದು ಮಾಡಿದ ಒಂದು ಆಕಾಶವಾಣಿ ಭಾಷಣದಲ್ಲಿ ಬಿಕಾನೇರ ಮಹಾರಾಜರು, ಸಂಸ್ಥಾನಿಕರೆಂದರೆ ಪರದೇಶದವರಲ್ಲ. ನಿಮ್ಮಂತೆ ಅವರಿಗೂ ಹಿಂದುಸ್ತಾನದ ಸಂಸ್ಕೃತಿ ಮತ್ತು ಇತಿಹಾಸಗಳ ಬಗ್ಗೆ ಅಭಿಮಾನವಿದೆ. ನಾವು ನಿಮ್ಮಿಂದ ಭಿನ್ನರಾಗಿಲ್ಲ ಎಂದು ಮುಂತಾಗಿ ಹೇಳಿದರು.

ನಿರಾಶ್ರಿತರ ಪುನರ್ನಿವೇಶನದ ವಿಷಯದಲ್ಲಿ ಬಿಕಾನೇರ ಸಂಸ್ಥಾನವು ಹಿಂದುಸ್ಥಾನ ಸರಕಾರದೊಡನೆ ಸಂಪೂರ್ಣ ಸಹಕರಿಸುವದಾಗಿಯೂ ಮಹಾರಾಜರು ಪ್ರಕಟಪಡಿಸಿದರು

೧೯೪೮ ಜಾನೇವರಿ ೧೦ಕ್ಕೆ ಮುಗಿವ ೩೦ ಆಕ್ಟೊಬರ ಭಾರತಕ್ಕೆ ೪ ಲಕ್ಷ ೫೦ ಸಾವಿರ ಟನ್ ಆಹಾರ ಧಾನ್ಯಗಳು ೮ ವಿದೇಶಿ ರಾಷ್ಟ್ರಗಳಿಂದ ಬರಲಿವೆ. ಈ ಆಹಾರ ಧಾನ್ಯಗಳನ್ನು ದಿನಂಪ್ರತಿ ಮೂರು ಮೂರು ಹಡಗುಗಳು ತರುವವು

ಮದ್ರಾಸಿನ ಎಂ. ಜಮಾಲ ಮಹಮ್ಮದ ಸಾಹೇಬರು, ಹಿಂದುಸ್ತಾನ ಪಾಕಿಸ್ತಾನಗಳ ಮುಸಲ್ಮಾನರಿಗೆ ಲೀಗಿನ ಬಲು ಹರಿದು ಕೊಂಡು ಇನ್ನು ಮೌಲಾನಾ ಆಜಾದರನ್ನು ಅನುಸರಿಸುವದು ಕ್ಷೇಮವೆಂದು ಉಪದೇಶ ಮಾಡಿದರು. ಅವಿವೇಕದ ರಕ್ತಪಾತ ದ್ವೇಷ ಮೊದಲಾದವನ್ನು ನಿಲ್ಲಿಸದಿದ್ದರೆ ಮುಸಲ್ಮಾನರು ಏಳಿಗೆ ಹೊಂದಲಾರರಾಗಿ ಹೇಳಿದರು.

ಅ. ಭಾ. ಪ್ರೌಢ ಶಿಕ್ಷಣ ಪರಿಷತ್ತಿನ ೫ ನೆಯ ಅಧಿವೇಶನವು ಅಖಿಲ ಭಾರತ ಶಿಕ್ಷಣ ಪರಿಷತ್ತಿನೊಂದಿಗೆ ರೇವಾದಲ್ಲಿ ಡಿಸೆಂಬರ ೨೮ ರಿಂದ ೩೦ ರವರೆಗೆ ಜರುಗುವದು. ಮುಂಬಯಿ ಸರಕಾರದ ಮುಖ್ಯಮಂತ್ರಿ ಮಾನ್ಯ ಶ್ರೀ ಖೇರರು ಅಧ್ಯಕ್ಷತೆವಹಿಸುವರು ಪ್ರತಿನಿಧಿಗಳಿಗೆ ಊಟ ಹಾಗೂ ವಸತಿ ಉಚಿತವಾಗಿದೆ. ಶಿಕ್ಷಣದ ಬಗ್ಗೆ ನಿಬಂಧ ಓದಬಯಸುವವರೂ ಗೊತ್ತುವಳಿ ಸೂಚಿಸತಕ್ಕವರೂ ಅವನ್ನು ಮೊದಲೇ ಕಳಿಸಬೇಕಾಗಿ ಪ್ರಧಾನ ಕಾರ್ಯದರ್ಶಿಗಳಾದ ರಣಜಿತ ಎಂ, ಚೇತಸಿಂಗರು ಪ್ರಕಟಿಸುತ್ತಾರೆ.

ದ್ವಿರಾಷ್ಟ್ರವಾದವು ತಳವಿಲ್ಲದ ಮಾಗಿನ ಂತಿರುವದರಿಂದ ಅದನ್ನು ತ್ಯಜಿಸುವದರಿಂದಲೇ ಮುಸಲ್ಮಾನರ ಹಿತ ಸಾಧಿಸುವದೆಂದು ಪ್ರೊ. ಅಬ್ದುಲ್, ಮಜೀದ ಖಾನರು ತಾ. ೧೪ ರಂದು ಒಂದು ಪ್ರಕಟನೆ ಹೊರಡಿಸಿದ್ದಾರೆ.

ಓಡಿಸಾ

ಕಟಕದಲ್ಲಿ ಮುಸಲ್ಮಾನರು ಸರದಾರ ವಲ್ಲಭಭಾಯಿ ಪಟೇಲರಿಗೆ ಮಾನಪತ್ರ ಕೊಡುತ್ತ ಮುಸ್ಲಿಂ ಲೀಗಿಗೆ ಮತಕೊಟ್ಟದ್ದು ತಪ್ಪಾಯಿತು ಎಂಬುದಾಗಿ ಪಶ್ಚಾತ್ತಾಪ ವ್ಯಕ್ತಪಡಿಸಿದರು ಅಲ್ಲದೆ ಓಡಿಸಾದ ಮುಖ್ಯಮಂತ್ರಿಗಳಾದ ಶ್ರೀ ಹರೇಕೃಷ್ಣ ಮಹತಾಬರು ಮತ್ತು ಅವರ ಸರಕಾರವು ಜಾತೀಯತೆಯನ್ನು ಧಾರ್ಷ್ಟ್ಯದಿಂದ ಎದುರಿಸಿ ಆಡಳಿತ ಸಾಗಿಸಿದ್ದಕ್ಕೆ ಧನ್ಯವಾದಗಳನ್ನು ಅರ್ಪಿಸಿದರು.

ಸರದಾರ ವಲ್ಲಭಭಾಯಿ ಪಟೇಲರ ಪ್ರಯತ್ನದ ಫಲವಾಗಿ ಓಡಿಸಾ ಮತ್ತು ಛತ್ತೀಸಗಡದ ಬ ಮತ್ತು ಕ ವರ್ಗದ ೧೫ ಸಂಸ್ಥಾನಗಳಲ್ಲಿ ೧೩ ಓಡಿಸಾ ಪ್ರಾಂತದಲ್ಲಿ ವಿಲೀನವಾಗಲು ಒಪ್ಪಿವೆಯೆಂದು ತಿಳಿದು ಬಂದಿದೆ. ರಾಜರಿಗೆ ಯೋಗ್ಯವಾದ ಪೋಟಿಗೆ ಕೊಡಲಾಗುವದು. ಸರದಾರರು ಅವರ್ಗದ ಸಂಸ್ಥಾನಿಕರೊಡನೆ ಸಂಧಾನ ನಡೆಸಿದ್ದು ಅವರೂ ಒಪ್ಪಂದಕ್ಕೆ ಸಹಿ ಮಾಡಬಹುದು.

ಮಧ್ಯಪ್ರಾಂತ

ಮಧ್ಯಪ್ರಾಂತದ ೧೪ ಸಂಸ್ಥಾನಗಳು ವಿಲೀನೀಕರಣಕ್ಕೆ ಒಪ್ಪಿರುವದಾಗಿ ತಿಳಿಯುತ್ತದೆ.

ಹಿಂದು ಮಹಾಸಭೆಯ ಧುರೀಣರಾದ ಡಾ. ಮುಂಜೆಯವರು ತಾ. ೧೩ ರಂದು ಕೊಟ್ಟ ಹೇಳಿಕೆಯಲ್ಲಿ, ಹಿಂದುಸ್ತಾನ ಸರಕಾರವು ಹೈದರಾಬಾದವನ್ನು ಅಲಕ್ಷಿಸಿ ಸಾರ್ವತ್ರಿಕ ಮತಗಣನೆಗೆ ಕಾಶ್ಮೀರ ಒಂದನ್ನೇ ಉಲ್ಲೇಖಿಸಿ ದೊಡ್ಡ ತಪ್ಪು ಮಾಡಿದೆಯೆಂದು ಟೀಕಿಸಿದ್ದಾರೆ. ೨೦ ವರ್ಷಗಳ ಹಿಂದೆ ಗಡಿನಾಡ ಪ್ರವಾಸ ಮಾಡಿಬಂದಾಗ ಹಿಂದುಸ್ತಾನವು ಒಂದಿಲ್ಲೊಂದು ದಿನ ಗುಡ್ಡಗಾಡು ಜನರನ್ನು ಎದುರಿಸಬೇಕಾಗುವದೆಂದು ತಾವು ಹೇಳಿದ್ದಾಗಿಯೂ ಅದು ಇಂದು ನಿಜವಾಗಿರುವದಾಗಿಯೂ ಅವರು ತಮ್ಮ ಹೇಳಿಕೆಯಲ್ಲಿ ಉಲ್ಲೇಖಿಸಿರುವರು.

ಪೂರ್ವಪಂಜಾಬ

ಪೂರ್ವಪಂಜಾಬದಲ್ಲಿ ಕೆಲವು ಮುಸಲ್ಮಾನರು ದಾಲಹಳ್ಳಿಯ ದನಗಾಯಿಗಳ ಮೇಲೆ ಗುಂಡು ಹಾರಿಸಿ ಕೆಲವು ಎಮ್ಮೆಗಳನ್ನು ಅಪಹರಿಸಿಕೊಂಡು ಹೋದರು. ಇದೊಂದು ದುರ್ಘಟನೆ ಬಿಟ್ಟರೆ ಎಲ್ಲ ಜಿಲ್ಹೆಗಳಲ್ಲಿ ಪರಿಸ್ಥಿತಿ ಶಾಂತವಿದೆ.

ಪಶ್ಚಿಮ ಬಂಗಾಲ

ಯುರೋಪಿಯನ್ ವಣಿಕ್ ಮಂಡಳದ ವಾರ್ಷಿಕ ಸಭೆಯಲ್ಲಿ ತಾ ೧೫ ರಂದು ಕಲಕತ್ತಾದಲ್ಲಿ ಮಾತನಾಡುತ್ತ ಪಂ. ನೆಹರು ಅವರು ಹಿಂದುಸ್ತಾನಕ್ಕೆ ಇನ್ನೂ ಕೆಲವು ವರ್ಷ ಬ್ರಿಟಿಶ್ ಉದ್ದಿಮೆದಾರರ ನೆರವು ಅವಶ್ಯವೆಂದು ಹೇಳಿದರು.

ಈ ಮಂಡಳದ ಅಧ್ಯಕ್ಷರಾದ ಎಂ ಡಿ ಕಂಬರಬ್ಯಾಚರು ಭಾರತವು ವಿಭಾಗಿಸಲ್ಪಟ್ಟದ್ದಕ್ಕೆ ವಿಷಾದವ್ಯಕ್ತಪಡಿಸಿ ದೇಶದಲ್ಲಿ ಸುಖಶಾಂತಿ ನೆಲೆಸಲು ತಾವು ಸರ್ವವಿಧ ಸಹಾಯ ನೀಡುವದಾಗಿ ಹೇಳಿದರು.

ಸುದ್ದಿಗಾರರ ಸಭೆಯಲ್ಲಿ ಮಾತನಾಡುತ್ತ ಪಂ ಜವಾಹರಲಾಲರು, ಕಾಶ್ಮೀರದ ವಿಭಜನೆಗೆ ತಾವು ಸರ್ವಥಾ ಒಪ್ಪುವದಿಲ್ಲವಾಗಿ ನುಡಿದರು.

ಸುರೇಂದ್ರನಾಥ ಬ್ಯಾನರ್ಜಿಯವರ ಶತ ಸಾಂವತ್ಸರಿಕ ಜಯಂತಿ ಉತ್ಸವವು ತಾ ೧೩ ರಂದು ಕಲಕತ್ತೆಯಲ್ಲಿ ಸಿನೆಟಭವನದಲ್ಲಿ ಆಚರಿಸಲ್ಪಟ್ಟಿತು. ಗವ್ಹರ್ನರರಾದ ಶ್ರೀ ಸಿ ರಾಜಗೋಪಾಲಾಚಾರ್ಯರು, ಸರ್ ಬಿ ಎಲ್ ಮಿತ್ರ, ಪಿ ಎನ್ ಬ್ಯಾನರ್ಜಿ ಮೊದಲಾದವರು ಭಾಷಣಮಾಡಿ ಅವರು ತಮ್ಮ ಕಾಲದ ಡೆಮಾಕ್ರಸೀಸ್ ಹಾಗೂ ಸಿಸಿರೋ ಆಗಿದ್ದರೆಂದೂ ಕಾಂಗ್ರೆಸಿಗಿಂತ ಮೊದಲೇ ಅವರ ಹೆಸರಿತ್ತೆಂದೂ ಅವರು ಅಂದಿನ ರಾಷ್ಟ್ರೀಯತ್ವದ ಪ್ರತೀಕರಾಗಿದ್ದರೆಂದೂ ಹೇಳಿದರು.

ಈ ಮೊದಲು ತಿಳಿಸಿದಂತೆ ಅ. ಭಾ. ಹಿಂದೂ ಮಹಾಸಭೆಯು ಈ ತಿಂಗಳು ಕೂಡದೆ ಮಾರ್ಚ ತಿಂಗಳಲ್ಲಿ ಪಾಟನಾದಲ್ಲಿ ಕೂಡುವದು ಶಕ್ಯವಿದ್ದತೆ ಸಾಧ್ಯವಾಗದ್ದಕ್ಕೆ ಹೀಗೆ ಅಧಿವೇಶನವು ಮುಂದೆ ಹಾಕಲ್ಪಟ್ಟಿತು.

ಹಿಂದೀಸಂಸ್ಥಾನ

ಜಯಪೂರ ಮಹಾರಾಜರ ಪಟ್ಟಾಭಿಷೇಕದ ರಜತ ಮಹೋತ್ಸವದ ಸಮಾರಂಭದಲ್ಲಿ ಗವ್ಹರ್ನರ ಜನರಲ್ ಮೌಂಟಬ್ಯಾಟನ್ನರು ತಾ. ೧೪ ರಂದು ಮಾತನಾಡುತ್ತ. ಹಿಂದುಸ್ತಾನವು ಅಖಂಡವಾಗಿದ್ದರೇ ಹಿತವೆಂದು ನಾನು ಸದಾ ಹೇಳುತ್ತ ಬಂದಿದ್ದೇನೆ ಹಿಂದೀ ಸಂಸ್ಥಾನಗಳು ಹಿಂದುಸ್ತಾನದ ಒಕ್ಕೂಟದಲ್ಲಿ ಸೇರಿದರೆ ಉಭಯರಿಗೂ ಲಾಭವಿದೆ ಎಂದು ಮುಂತಾಗಿ ಹೇಳಿದರು.

ಜಯಪೂರ ಅರಸರ ರಜತಮಹೋತ್ಸವದ ನಿಮಿತ್ತ ಇಂಗ್ಲಂಡದ ಅರಸರು ಅವರಿಗೆ ಜಿ. ಸಿ. ಎಸ್. ಆಯ್. ಎಂಬ ಬಿರುದನ್ನು ಮುಂಗಡವಾಗಿಯೇ ಕೊಟ್ಟಿದ್ದಾರೆ. ಈ ಬಿರುದು ೧೯೪೮ ರ ಹೊಸ ವರ್ಷ ಪ್ರಕಟಿಸಲ್ಪಡತಕ್ಕದ್ದಿತ್ತು.

ಇಂದೂರ ಸಂಸ್ಥಾನದಲ್ಲಿ ಹೊಣೆಗಾರ ರಾಜ್ಯ ಸ್ಥಾಪಿಸುವದೇ ತಮ್ಮ ಗುರಿಯಾಗಿದೆಯೆಂದು ಮಹಾರಾಜರು ತಾ. ೧೩ ರಂದು ಸಾರಿದರು.

ಜುನಾಗಡ ಪೋಲೀಸರು ಮುಂಬಯಿ ಪೋಲೀಸ ಅಧಿಕಾರಿಗಳ ಸಹಾಯದಿಂದ ರಾಜಕೋಟೆ ಬಳಿಯ ಹಳೆಯ ಕೋಟೆಯಲ್ಲಿ ಕೆಲವು ನೆಲಮನೆಗಳನ್ನು ಶೋಧಿಸಲು ಅಲ್ಲಿ ಹೇರಳ ಆಧುನಿಕ ಶಸ್ತ್ರಾಸ್ತ್ರ ಮದ್ದುಗುಂಡು ಸಿಕ್ಕಿರುವವು. ಉತ್ಖನನ ಇನ್ನೂ ಸಾಗಿದೆ.

ಹೈದರಾಬಾದ

ಹೈದರಾಬಾದ ನಡುಗಾಲಸರಕಾರದಲ್ಲಿ ನವಾಬ ಮೋಯಿನ ನವಾಜ ಜಂಗ, ಮೇಜರ ಜನರಲ್ ಎಡ್ರೂಸ. ನವಾಬ ದೀನಯಾರಜಂಗ ಬಹದ್ದೂರ. ಶ್ರೀ. ಶ್ರೀ ಪಿ. ರಾವ. ಎಂ. ಎ. ರಹೀಮ. ಯಾಮೀನ ಝುಲಬೇರಿ, ಅಬ್ದುಲ್ ರಾವುಫ, ಪಿಂಗಳೆ ವೆಂಕಟ ರಾಮ ರೆಡ್ಡಿ, ರಾಜಾ ಮನ ಮೋಹನಲಾಲ. ಮಲ್ಲಪ್ಪ ಪಟೀಲ ಮತ್ತು ಬಿ. ಎಸ್. ವೆಂಕಟರಾವ ಮೊದಲಾದವರು ಸೇರ್ಪಡೆ ಹೊಂದಬಹುದೆಂದು ತಿಳಿಯುವದು.

ಹೈದರಾಬಾದ ಸರಕಾರದವರು ದಿನಮಣಿ ಎಂಬ ದೈನಿಕವನ್ನು ಸಂರಕ್ಷಣ ಕಾಯದೆಯನ್ವಯ ಸಂಸ್ಥಾನದಲ್ಲಿ ಪ್ರತಿಬಂಧಿಸಿದ್ದಾರೆ.

ಹೈದರಾಬಾದ ಸಂಸ್ಥಾನದಲ್ಲಿ ಸತ್ಯಾಗ್ರಹ ನಿಲ್ಲಿಸಬಾರದೆಂಬುದಾಗಿ ಮುಂಬಯಿಯಲ್ಲಿ ತಾ ೧೩ಕ್ಕೆ ಕೂಡಿದ ಹೈದರಾಬಾದ ಸಂಸ್ಥಾನ ಕ್ರಿಯಾ ಸಮಿತಿಯ ಸಭೆಯಲ್ಲಿ ನಿರ್ಧರಿಸಲಾಯಿತೆಂದು ತಿಳಿಯುತ್ತದೆ. ಈ ನಿರ್ಧಾರವನ್ನು ಈ ಸಭೆಯ ಅಧ್ಯಕ್ಷರಾದ ಸ್ವಾಮಿ ರಮಾನಂದ ತೀರ್ಥರು ನಿಜಾಮರ ಮಂತ್ರಿ ನವಾಬ ಮೋಯಿನ ನವಾಜ ಜಂಗರಿಗೆ ತಿಳಿಸಿದ್ದಾರೆ.

ಮಧುರಾ ತಾಲೂಕಿನ ೭ ಹಳ್ಳಿಗಳು ಸ್ವಾತಂತ್ರ್ಯ ಸಾರಿ ಹಿಂದೀ ಒಕ್ಕೂಟದಲ್ಲಿ ಸೇರುವ ಘೋಷಣೆ ಮಾಡಿದ್ದನ್ನು ನಿಜಾಮ ಸರಕಾರವು ಅಲ್ಲಗಳೆದಿದ್ದರಲ್ಲಿ ಅರ್ಥವಿಲ್ಲ. ಈ ೭ ಹಳ್ಳಿಗಳಲ್ಲದೇ ಅದೇ ತಾಲೂಕಿನ ಮತ್ತೆ ೭ ಹಳ್ಳಿಗಳು ಸ್ವಾತಂತ್ರ್ಯ ಸಾರಿರುವವು. ಈ ಹಳ್ಳಿಗಳ ಆಡಳಿತಕ್ಕಾಗಿ ಅಧ್ಯಕ್ಷರನ್ನೂ ಕಾರ್ಯಕಾರೀ ಮಂಡಳವನ್ನೂ ಆರಿಸಿ ಸಂಸ್ಥಾನ ಕಾಂಗ್ರೆಸ್ಸಿನ ನೇತೃತ್ವದಲ್ಲಿ ಆಡಳಿತ ಸುಗಮವಾಗಿಸಾಗಿದೆ ಎಂದು ಮೊದಲಾಗಿ ಹೈದರಾಬಾದ ಸ್ಟೇ. ಕಾಂ ಕೇಂದ್ರಗಳಿಂದ ಬಂದ ಸಮಾಚಾರ ಒಂದು ಹೇಳುತ್ತದೆ.

ಹೈದರಾಬಾದ ಸಂಸ್ಥಾನದ ಹಳ್ಳಿಗಳಲ್ಲಿ ಪೋಲೀಸರ ಹಾಗೂ ಸೈನಿಕರ ಸ್ವೈರಾಚಾರ ಹೊಡೆತ, ಲೂಟಿ. ಝುಡತಿ ಮತ್ತು ಸ್ತ್ರೀ ಮಾನಭಂಗ ಮಿತಿಮೀರಿ ನಡೆದು ಹೋಗಿರುವ ಬಗ್ಗೆ ಹೈದರಾಬಾದ ಸ್ಟೇ. ಕಾಂ. ಕೇಂದ್ರಗಳ ವರದಿ ಹೇಳುತ್ತದೆ.

ಪಾಕಿಸ್ತಾನ

ಜುನಾಗಡ ಹಾಗು ಕಾಶ್ಮೀರ ಸಂಬಂಧದಲ್ಲಿ ಪಾಕಿಸ್ತಾನ ಹಾಗು ಹಿಂದುಸ್ತಾನ ಸರಕಾರಗಳಲ್ಲಿ ಮಾತುಕತೆ ಸೌಹಾರ್ದದಿಂದ ಸಾಗಿರುವದಾಗಿ ಪಾಕಿಸ್ತಾನ ಮುಖ್ಯಪ್ರಧಾನರು ಪತ್ರಿಕೋದ್ಯಮಿಗಳಿಗೆ ತಿಳಿಸಿದರು.

ಪಾಕಿಸ್ತಾನದ ಹೊಸ ನಾಣ್ಯಗಳು ೧೯೪೮ ಎಪ್ರಿಲದಿಂದ ಬಳಕೆಯಲ್ಲಿ ಬರಬಹುದೆಂದು ತಿಳಿಸಲಾಗಿದೆ. ಪಾಕಿಸ್ತಾನದ ಹೊಸ ರೂಪಾಯಿಯ ಮೇಲೆ ಒಂದು ಮಗ್ಗಲು ಚಂದ್ರ ಚಿಕ್ಕೆ, ಮೇಲ್ಗಡೆಗೆ ಏಕ ರೂಪಯಾ, ಎಂದು ಉರ್ದುವಿನಲ್ಲಿ ಕೆಳಗಡೆ ಇಂಗ್ಲೀಷದಲ್ಲಿ 'ಒನ್ ರೂಪಿ' ಎಂದು ಮುದ್ರಿಸಲಾಗುವದು. ಇನ್ನೊಂದು ಮಗ್ಗಲು ಮೇಲ್ಗಡೆಗೆ ಗವ್ಹರ್ನಮೆಂಟ ಆಫ್ ಪಾಕಿಸ್ತಾನ ಎಂದು ಇಂಗ್ಲೀಷಿನಲ್ಲಿಯೂ ಕೆಳಗಡೆಗೆ ಹುಕೂಮತ್—ಎ—ಪಾಕಿಸ್ತಾನ ಎಂದು ಉರ್ದುವಿನ

ಚಿಕ್ಕ ಕತೆ

★ ಕೊನೆಗೂ....! ★

([illegible] ಕತೆಯೊಂದರ ಭಾವಾನುವಾದ)

(ನಾರಾಯಣ ಕುಲಕರ್ಣಿ ಬೆಳಗಾಂವಿ)

ಮಾತ್ರ ಚಿನ್ನದಂತಹದು। ಕೆಸರಿನಲ್ಲಿಯೇ ಕಮಲ ಹುಟ್ಟುವದಿಲ್ಲವೇ? ಅದೇ ರೀತಿ ಅವಳ ಬಾಳು. ಅವಳ ಹೆಸರು ಕೂಡಾ 'ಕಮಲಾ'! ಕಮಲಳು ಸಂಜೆಯಾದ ಬಳಿಕ, ತನ್ನ ಸಹೋದ್ಯೋಗಿಗಳಂತೆ—ತಕ್ಕ ಮಟ್ಟಿಗೆ ಸಿಂಗಾರಿಯಾಗಿ—ತನ್ನ ಸಹಜಸೌಂದರ್ಯವನ್ನು ಪ್ರದರ್ಶಿಸುತ್ತ ಮಹಡಿಯ ಮೇಲಿನ ಬಾಗಿಲ ಬಳಿ ಕುಳಿತುಕೊಳ್ಳುತ್ತಿದ್ದಳು. ಆಗ ಅವಳ ಮುಖದಲ್ಲಿ ನಗೆಯ ಮಿಂಚುಗಳು ಮೂಡಿ-ಮಾಯವೇನೋ ಆಗುತ್ತಿದ್ದವಾದರೂ......ಹೃದಯ ಅಳುತ್ತಿತ್ತು.

ರಸ್ತೆಯಲ್ಲಿ ಓಡಾಡುವ ಜನರು—ತರುಣರಿರಲಿ-ಮುದುಕರಿರಲಿ—-ಯೋಗಿ ಭೋಗಿಗಳಿರಲಿ—. ಅವಳ ಅಂಗಸೌಷ್ಠವವನ್ನು ಕಂಡು-ಇನ್ನೊಂದು ಕ್ಷಣ ಹೆಚ್ಚಿಗೆ ನೋಡಿಯೇ ನೋಡುತ್ತಿದ್ದರು. ಅದನ್ನು ಕಂಡಾಗ ಅವಳ ಹೃದಯ ತಲ್ಲಣಗೊಳ್ಳುತ್ತಿತ್ತು. ಸ್ತ್ರೀ ಜಾತಿಗೆ ಧಿಕ್ಕಾರವಿರಲೆನ್ನುತ್ತಿದ್ದಳು. ಆ ತರಹದ ಜೀವನದಿಂದ ಎಂದು ಪಾರಾಗುವೆನೋ—ಸಾಯುವೆನೋ ಎಂದು ನಿಟ್ಟುಸಿರೆಳೆದು,—ಆ ದಿನ—ಸುದಿನ—ಬೇಗನೆ ಬರಲೆಂದು—ದೇವರನ್ನು ಪ್ರಾರ್ಥಿಸುತ್ತಿದ್ದಳು.

○ ○ ○

ಎಂದಿನಂತೆ ಕಮಲಾ ಮಹಡಿಯ ಮೇಲಿನ ಬಾಗಿಲ ಬಳಿ ಕುಳಿತಿದ್ದಳು. ರಸ್ತೆಯ ಮೇಲೆ ಓಡಾಡುವ ಜನಸಂದಣಿಯೆಡೆಗೆ ಅವಳ ದೃಷ್ಟಿ ನೆಟ್ಟಿತ್ತು: ಟ್ರಾಮಿನಿಂದ ಒಬ್ಬ ಮುದುಕ ಇಳಿಯಲನುವಾದ. ಇಳಿಯುತ್ತಿರುವಾಗ, ಅವನ ಕಾಲಿಗೆ ಧೋತರದ ಚುಂಗೊಂದು ಸಿಕ್ಕು-ತೊಡಕಿ ಬಿದ್ದು ಬಿಟ್ಟ! ತಲೆಯೇ ಕೆಳಗಾಗಿಬಿಟ್ಟಿತು! ಗಟ್ಟಿಮುಟ್ಟಾದ ರಸ್ತೆ! ಕೇಳುವದೇನು! ಮುದುಕನ ತಲೆಗೆ ತುಂಬಾ ಪೆಟ್ಟು ತಗಲಿ, ಸ್ಮೃತಿದಪ್ಪಿ-ಬಿದ್ದು ಬಿಟ್ಟ! ಪ್ರಸಂಗ ಮೈಮೇಲೆ ಬರಬಹುದಾಗಿತ್ತಾದ್ದರಿಂದ ಡ್ರೈವರ್ ಟ್ರ್ಯಾಮನ್ನು ಓಡಿಸಿಯೇ ಬಿಟ್ಟ! 'ಹಿಡಿಯಿರಿ ಅವನನ್ನು! ಟ್ರ್ಯಾಂ ನಿಲ್ಲಿಸಿರಿ'! ಎಂಬ ಕೂಗು ಜನರಿಂದ ಹೊರಟಿತು. ಆದರೆ—ಬಹು ಬೇಗ ಟ್ರ್ಯಾಮು ಅಲ್ಲಿಂದ ಓಡಿಬಿಟ್ಟಿತ್ತು!

ಮುದುಕನ ಸುತ್ತಲೂ ಜನ ಕಿಕ್ಕಿರಿದು ನೆರೆದಿದ್ದರು. ಕೆಲವರು "ತೀವ್ರ ಗಾಯವಾಗಿದೆ! ಉಳಿಯಲಿಕ್ಕಿಲ್ಲ"! —ಮತ್ತೆ ಕೆಲವರು "ಸಾಯಲಿಕ್ಕಿಲ್ಲ ತಾನೆ?..."— ಇನ್ನು ಕೆಲವರು, "ನಡೆಯಿರಪ್ಪಾ...ಇದೆಲ್ಲೀ ಕಾಟ...ಸತ್ತರ ಽ ಽ... ಪೋಲೀಸ್ರು ಬರ್ತಾರ!...ಮತ್ತ ಕೋರ್ಟಿಗ್ಯಾರು ಹೋಗ್ಬೇಕು?!..." ಎಂದೂ ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದರು. ಕೆಲವರು ಚದರತೊಡಗಿದರು. ಒಬ್ಬರು... ಬಿದ್ದ ಮುದುಕನನ್ನು ಎತ್ತಿ ಸಹ ಕೂಡಿಸಲಿಲ್ಲ!

ಇದನ್ನೆಲ್ಲ ಕಂಡು, ಕಮಲಳ ಹೃದಯ ಕರಗಿತ್ತು. ಕೂಡಲೇ ಮಹಡಿಯಿಂದಿಳಿದು ಬಂದು ಮುದುಕನ ಬಳಿ ನಡೆದಳು. ವಿನಯದಿಂದ, "ನೀವೆಲ್ಲ—ದಯಮಾಡಿ—ಇವರನ್ನು ನನ್ನ ಕೊಠಡಿಗೆ ಸಾಗಿಸುವಿರಾ...?" ಎಂದು ಕೇಳಿದಳು. ಜನರು ಒಬ್ಬರ ಮುಖವನ್ನೊಬ್ಬರು ನೋಡತೊಡಗಿದರು. ಅವರಲ್ಲೊಬ್ಬ— "ಇವರು ನಿಮ್ಮ ಸಂಬಂಧಿಕರೇ...?" ಎಂದು ಕೇಳಿಯೇ ಬಿಟ್ಟ. ಆದರೆ-ಕಮಲಳು ಅವನಿಗುತ್ತರಕೊಡುವ ಗೋಜಿಗೆ ಹೋಗಲಿಲ್ಲ. ತನ್ನ-ಬಣ್ಣದ ಪತ್ತಲಿನ ಚುಂಗೊಂದನ್ನು ಹರಿದು-ಮುದುಕನ ರಕ್ತಸಿಕ್ತವಾದ ತಲೆಯನ್ನೊರಸಿ, ಸರಿಯಾಗಿ ಕಟ್ಟಿದಳು. ಆ ಮೇಲೆ ಪುನಃ ಸವಿನಯದಿಂದ ಅದೇ ಪ್ರಶ್ನೆ ಕೇಳಿದಳು. ನೆರೆದವರಲ್ಲಿ ನಾಲ್ಕು ಜನ ಮುಂಬರಿದು ಮುದುಕನನ್ನು ಅವಳ ಕೊಠಡಿಗೆ ಕಳುಹಿಸಿದರು.

ಒಬ್ಬ ಘಟಿಂಗ, "ಹೀಂಗೆಲ್ಲಾ ಚೆಂದನ್ನ ಹೆಣ ಮಕ್ಕಳು ಕರಕೊಂಡ್ಹೋಗಿ ಉಪಚಾರಾ ಮಾಡಿದರ...ನಾ ದಿನಾ ನೂರಾರ ಸಾರೇ...ಟ್ರ್ಯಾಮಿನಿಂದ ಬೀಳ್ತೇನಿ, ನೋಡ್ರೆಪಾ....!" ಎಂದು ಹಲ್ಲುಕಿರಿದೇ ಬಿಟ್ಟ!

○ ○ ○

ಒಂದು ರಾತ್ರಿ-ಒಂದು ಹಗಲು ಕಳೆದವು. ಆದರೂ...ಮುದುಕನಿಗೆ ಸ್ಮೃತಿ ಬಂದಿರಲಿಲ್ಲ.

ಕಮಲಳು ಊಟ, ನಿದ್ರೆ ಇವನ್ನೆಲ್ಲಾ ಮರೆತೇ ಬಿಟ್ಟಿದ್ದಳು. ಅವನ ಹಾಸುಗೆಯ ಬಳಿಯೇ ಕುಳಿತು, ಗಾಳಿ ಹಾಕುವುದು, ಕೈ ಕಾಲು ತಿಕ್ಕುವುದು ಇವೇ ಮೊದಲಾದ ಸೇವೆ ಸಲ್ಲಿಸುತ್ತಿದ್ದಳು.

ಅವಳ ಮನೆಯ ಕೆಳ ಬದಿಗೇ ಒಬ್ಬ ಡಾಕ್ಟರರು ನೆಲೆಸಿದ್ದರು. ಅವರಿಗೇ ಮುದುಕನ ಸ್ಥಿತಿಗತಿಗಳನ್ನು ತೋರಿಸಿದ್ದಳು. ಆದರೂ ಮುದುಕ ಕಣ್ಣುಗಳನ್ನು ಕೂಡಾ ತೆರೆದಿರಲಿಲ್ಲ! ಆದ್ದರಿಂದ ಕಮಲಳಿಗೆ ತುಂಬಾ ಯೋಚನೆಗಿಟ್ಟುಕೊಂಡಿತು.

ಅಂದು ರಾತ್ರಿ ಕಮಲಳು ಮುದುಕನ ಮೈ ಮುಟ್ಟಿ ನೋಡಿದಳು. ತುಂಬ ಕಾಯ್ದಿತ್ತು. ಕಮಲಳಿಗೆ ಭಯವಾಯ್ತು. ತನ್ನ ಆಳು ಮನುಷ್ಯನನ್ನು ಪ್ರಸಿದ್ಧ ಡಾಕ್ಟರರೊಬ್ಬರನ್ನು ಕರೆತರಲು ಕಳಿಸಿದಳು.

ಡಾಕ್ಟರರು ಬಂದರು. ಸರಳ ಹೃದಯದ ಯುವಕರಾಗಿದ್ದರು. ಸ್ಥಿತಿಗತಿಗಳನ್ನು ಪರೀಕ್ಷಿಸಿ "ರೋಗಿಯ ಪರಿಸ್ಥಿತಿ ಅಪಾಯಕರವಿದೆ..." ಎಂದು ತಿಳಿಸಿದರು.

ಆತುರದ ದನಿಯಲ್ಲಿ ಕಮಲಳು, "ಹಾಗಾದರೆ ನಿವಾರಣೋಪಾಯವಿಲ್ಲವೇ... ಡಾಕ್ಟರರೇ...?" ಎಂದು ಕೇಳಿದಳು.

"ಸರಿಯಾದ ಚಿಕಿತ್ಸಾಕ್ರಮ ತಕ್ಕೊಂಡಲ್ಲಿ ಉಳಿಯಬಹುದು..". ಎಂದರು—ಡಾಕ್ಟರರು. ಔಷಧಿಕೊಟ್ಟು ಅವರು ಹೊರಡಲನುವಾದರು. ಕಮಲಳು—ವಿಜಿಟಿಂಗ್ ಫೀಸ್ ಎಂದು ಕೆಲವು ರೂಪಾಯಿಗಳನ್ನು ಅವರ ಕೈಗಿತ್ತಳು. ರೂಪಾಯಿಗಳನ್ನು ಎಣಿಸುತ್ತಲೇ... "ಇವರು...ನಿಮಗೇನಾಗಬೇಕು?" ಎಂದು ಡಾಕ್ಟರರು ಕೇಳಿದರು. ಕಮಲಳು—ಏನು ಉತ್ತರಿಸಬೇಕೆಂದು ಯೋಚನೆ ಮಾಡಲುದ್ಯುಕ್ತಳಾದುದನ್ನು ಕಂಡು—ಪುನಃ ಡಾಕ್ಟರರು—"ಇವರು...ನಿ...ಮ್ಮ..." ಎಂದು ಹೇಳುತ್ತಿರುವಾಗಲೇ.... "ಇಲ್ಲಾ....ಡಾಕ್ಟರರೇ!....ನಿಮ್ಮ ತರ್ಕ ತಪ್ಪಿದೆ!" ಎಂದು ತಿಳಿಸಿ ನಡೆದ ಎಲ್ಲಾ ಸಂಗತಿಯನ್ನು ಸಂಕ್ಷಿಪ್ತದಲ್ಲಿ ಹೇಳಿದಳು.

ಡಾಕ್ಟರರು ವಿಚಾರಮಗ್ನರಾಗಿದ್ದರು. ಕೊನೆಗೆ "ಕಮಲಾ..ನೀವು..ಇವರನ್ನು ತಪ್ಪದೆ..ಬೆಳಿಗ್ಗೆ ಹಾಸ್ಪಿಟಲ್ ಸೇರಿಸಿ ಬಿಡಿ! ಅಲ್ಲಿಯ ಚಿಕಿತ್ಸೆಯಿಂದ ಖಂಡಿತ ಗುಣಹೊಂದಬಹುದು. ಒಂದು ವೇಳೆ..ಸತ್ತರೂ..ನಿಮ್ಮ ಮೇಲೆ ಯಾವ ಪ್ರಸಂಗವೂ ಬರಲಾರದು. ನೀವು ಸುರಕ್ಷಿತರಾಗಿರಬಹುದು...." ಎಂದರು.

ಬಾಗಿಲ ಹೊರಗೆ, ಯಾರೋ ಒಬ್ಬ ಧಷ್ಟಪುಷ್ಟ ಹೆಂಗಸು ಡಾಕ್ಟರರ ಮಾತನ್ನೆಲ್ಲ ಕೇಳಿದ್ದಳು. ಅವರ ಮಾತು ಮುಗಿದ ಬಳಿಕ--ಒಮ್ಮೆಲೇ—ಒಳನುಗ್ಗಿದಳು! ಆ ಮೇಲೆ ಮಾತಿಗಾರಂಭಿಸಿಯೇ ಬಿಟ್ಟಳು! "ನಾನೂ ಅದಽಽ ಅಂತೇನ್ರೀಽ ಡಾಕ್ಟರಽ...! ಆ ಮುದುಕ ಯಾರೋ ಏನೋ! ಸುಮ್ನಽ ಹಾದೀ ಹೋಗೋ ದೆವ್ವನ್ನ...ಮನ್ಯಾಗ ತಗೊಂಡಾಳ!... ಸುಳ್ಳಽ ರೊಕ್ಕಾ ಖರ್ಚ ಮಾಡತಾಳಾತು! ನೀವು......" ಎಂದು ಯಾರ ಮಾತನ್ನೂ ಅಪೇಕ್ಷಿಸದೆ—ಪ್ರಾರಂಭಿಸಿದ್ದಳು. ಕಿವಿಗಳಲ್ಲಿ ಬೆರಳುಗಳನ್ನಿಡುತ್ತ ಕಮಲಳೆಂದಳು. "ತಾಯೀ..ಕ್ಷಮಿಸಿ ಬಿಡು! ಅತಿಲ್ಲೋ!!!" ಎಂದಳು. ಆದರೆ, "ಅಯ್ಯಽಽ..ಹೇಳೋ ಮಾತಽ ವಾಽ ಇದು! ಇದಕ್ಕ ಯಾಕ.ಕ್ಷಮಾಗಿಮಾ....?" ಎಂದು ಪುನಃ ಸುರುವು ಮಾಡಿದಳು.

ಆಗ ಮಾತ್ರ ಕಮಲಳಿಗೆ ತಡೆಯಲು ಸಾಧ್ಯವೇ ಆಗಲಿಲ್ಲ! "ಸುಮ್ನಾಗಽ ಇನ್ನ!... ನಿನಗ ಯಾರು ಇಲ್ಲಿ ಮಧ್ಯಸ್ತಿಕೀ ಮಾಡ್ಲಿಕ್ಕೆ ಕರದಿದ್ದರು...? ಹೊಂಟ್ಹೋಗ ನಿನ್ನ ಕೆಲಸಕ್ಕ... ಇಲ್ಲಾಂದರ...ಈಗಽ......ಆಳ ಕಡಿಂದ ಽ... ಽ..." ಎಂದು ಗದರಿಸಿಬಿಟ್ಟಳು.

ಆಗಲೇ ಅವಳು ಹೋಗಿದ್ದಳು. ಕಮಲಳು, "ಡಾಕ್ಟರರೇ...ಇವರಿಗೆ ಸ್ಮೃತಿ ಎಂದು ಬಂದೀತು?" ಮರುಕದ ದನಿಯಲ್ಲಿ ಕೇಳಿದಳು. "ಇಂದೇ ರಾತ್ರಿ...ಸ್ಮೃತಿ ಬರಬಹುದು. ಇಲ್ಲವಾದರೆ ಅಪಾಯಕರ. ಡಾಕ್ಟರರು ಉತ್ತರಿಸಿದರು. ಹಾಸುಗೆಯ ಮೇಲಿದ್ದ ಟೊಪ್ಪಿಗೆಯನ್ನು ತಕ್ಕೊಳ್ಳುತ್ತ, "ಒಳ್ಳೇದು. ನಾನಿನ್ನು ಬರಲೇ...?" ಎಂದು ಹೊರಡಲನುವಾದರು. ಕಮಲಳು, "ತಮ್ಮಿಚ್ಛೆ...!" ಎಂದಿಷ್ಟೇ ಹೇಳಿ ಶಿರಬಾಗಿ ವಂದಿಸಿದಳು.

ಡಾಕ್ಟರರು ಮಹಡಿಯಿಂದಿಳಿಯುತ್ತಿದ್ದರು. ಕೂಡಲೇ-ತಿರುಗಿ-ಬಿಟ್ಟರು. "ಕಮಲಾ! ಈ ರೂಪಾಯಿಗಳನ್ನು ಪತ್ತ ತಕ್ಕೊಂಡು ಬಿಡಿ..." ಎನ್ನುತ್ತ ಕಿಸೆಯಲ್ಲಿ ಕೈಯಿಕ್ಕಿದರು. ಕಮಲಳು ಆಶ್ಚರ್ಯದಿಂದ, "ಏಕೆ...?" ಎಂದಳು. ಸ್ನೇಹಪೂರಿತ ದೃಷ್ಟಿಯನ್ನು ಬೀರಿ "ಸು...ಮ್ಮ...ನೇ...!" ಎಂದು ಹೇಳಿ ಡಾಕ್ಟರರು ಹಾಸುಗೆಯ ಮೇಲೆ ರೂಪಾಯಿಗಳನ್ನಿಟ್ಟು ನಡೆದೇ ಬಿಟ್ಟರು!

ಕಮಲಳಿಗೆ ಅದರ ಕಾರಣವೇ ತಿಳಿಯಲಿಲ್ಲ! ವಿಚಾರಮಗ್ನಳಾಗಿದ್ದಳು. ಕೊನೆಗೆ— "ನಾನು ಒಳ್ಳೆಯದನ್ನು ಮಾಡಿದರೂ... ಜನ ಸಂಶಯವನ್ನೇ ತಕ್ಕೊಳ್ಳುತ್ತಾರೆ...! ಹಾಯ್! ವೇಶ್ಯಾ ಜೀವನವೆಂಥ ಕೀಳಾಗಿದೆಯಲ್ಲ!... ಉಶ್..." ಎಂದು ನಿಡಿದಾದ ಉಸಿರೊಂದನ್ನು ಬಿಟ್ಟಳು.

○ ○ ○

ಅರ್ಧರಾತ್ರಿಯ ಸುಮಾರಕ್ಕೆ ಮುದುಕನಿಗೆ ಸ್ಮೃತಿ ಬಂತು. ಕಮಲಳು ಅವನ ಸೇವೆಯಲ್ಲಿಯೇ ನಿರತಳಾಗಿದ್ದಳು. ಅತ, ಮಗ್ಗುಲ ಹೊರಳಿಸುತ್ತ, ಕ್ಷೀಣ ಸ್ವರದಲ್ಲಿ ಮಾತನಾಡಿದ "ಎದೆಯಲ್ಲಿ ಉ-ರಿ!— ತುಸು... ನೀ-ರು—!... ತಾಯಿ..."

ಬೀಸಣಿಕೆಯಿಂದ ಗಾಳಿ ಹಾಕುತ್ತಿರುವದನ್ನು ನಿಲ್ಲಿಸಿ, ಕಮಲಳು, ಬದಿಯಲ್ಲಿನ ತಂಬಿಗೆಯಿಂದ ಲೋಟ ಒಂದರಲ್ಲಿ ನೀರು ಬಾಗಿಸಿ ಕೊಟ್ಟಳು. ನೀರನ್ನು ಎಚ್ಚರಿಕೆಯಿಂದ ಗುಟುಕುಗುಟುಕಾಗಿ ಕುಡಿಸಿದಳು ಆಗ ಮುದುಕನಿಗೆ ಸ್ವಲ್ಪ ವಿಶ್ರಾಂತಿ ದೊರೆತಂತಾಯ್ತು. ಕಮಲಳು ಅವನ ತಲೆಯ ಮೇಲೆ ಕೈಯಾಡಿಸುತ್ತಿದ್ದಳು. ಕೊಂಚ ಹೊತ್ತುಗತಿಸಿದ ಬಳಿಕ ಪುನಃ ಮುದುಕ, "ಎ-ದೆ-ಯ-ಲ್ಲಿ ಉ-ರಿ..." ಎಂದು ಕ್ಷೀಣ ಸ್ವರದಲ್ಲಿ ನುಡಿದ. ಕಮಲಳು ಅವನ ಎದೆಯ ಮೇಲೆ ತನ್ನ ಶೀತಲ, ಕೋಮಲವಾದ ಕರಗಳನ್ನಾಡಿಸಹತ್ತಿದಳು. ಮುದುಕ ಶಾಂತನಾಗಿ ನಿದ್ರಾವಶನಾದ.

ಕೊಂಚ ವೇಳೆಯಾದ ಬಳಿಕ "ನೀ-ರು-" ಎಂದು ನುಡಿದ. ಕಮಲಳು ನೀರನ್ನು ಗುಟ್ಕಾಗಿ ಕುಡಿಸಿದಳು. ಮುದುಕ ಒಂದೆರಡು ನಿಮಿಷಗಳ ವರೆಗೆ ಕಮಲಳನ್ನೇ ನೋಡಿದ. 'ಮಗೂ... ಸುಧಾ...!" ಎಂದು ಉದ್ಗಾರ ತೆಗೆದ. "ಅಲ್ಲ-ಅಲ್ಲ! ನಾನು ಸುಧೆ ಅಲ್ಲ!... ನಾನೊಬ್ಬ ಅ-ಭಾ-ಗಿ-ನಿ..." ಎಂದು ಕಮಲಳು ಉತ್ತರಿಸಿದಳು. "ಮಗೂ... ಇಷ್ಟು ರಾತ್ರಿಯ ವರೆಗೂ... ಎಚ್ಚತ್ತೀಯಾ ?!" ಎಂದು ಆತ ಕೇಳಿದ.

'ಮಗೂ...'—! ಆಹಾ ಎಂತಹ ಸುಖಮಯ ಸಂಬೋಧನವದು ! ಎಂತಹ ಮಧುರ ಕಂಠ!!... ಕಮಲಳ ಹೃದಯ ತುಂಬಿ ಬಂತು! ಆ ಧ್ವನಿಯು ಅವಳ ಕಿವಿಗಳಲ್ಲಿ ಮೊರೆಯಹತ್ತಿತು ಅವಳ ಹೃದಯದಲ್ಲಿ ಅಪೂರ್ವ ಸಂತಸ ಜಾಗೃತವಾಯಿತು.

ಅದೇ ವೇಳೆಗೆ- ಯಾರೋ ಬಾಗಿಲು ತಟ್ಟಿ "ಕಮಲಾ..." ಎಂದು ಕೂಗಿದರು. ಅದನ್ನು ಕೇಳಿಯೂ ಅವಳು ಉತ್ತರಿಸಲಿಲ್ಲ; ಬಾಗಿಲನ್ನೂ ತೆರೆಯಲಿಲ್ಲ. ಮುದುಕನ 'ಮಗೂ...' ಎಂಬ ಮಾತೇ ಅವಳ ಹೃದಯದಲ್ಲಿ ಪ್ರತಿಧ್ವನಿಸುತ್ತಿತ್ತು! ಪುನಃ ಬಾಗಿಲ ಹೊರಗಿನಿಂದ "ಕಮಲಾ! ನನ್ನ ಚಿನ್ನಾ!..." ಎಂಬ ಕೂಗೂ ಕೇಳಿಬಂತು. ಆದರೂ-ಕಮಲಳು ಸುಮ್ಮನೇ ಇದ್ದಳು. ಪುನಃ, "ಕಮಲಾ! ಕೇಳಿಸಲಿಲ್ಲವೇ!" ಎಂದು ಬಾಗಿಲು ಬಡಿದ ಧ್ವನಿ ಕೇಳಿಸಿತು. ಆ ಬಳಿಕ ಆ ವ್ಯಕ್ತಿ ಸಿಳ್ಳುಹಾಕುತ್ತ ನಿಂತಿತು. ಕಮಲಳು... ಅವನೊಬ್ಬ ಕಾಮುಕನೆಂಬುದನ್ನರಿಯದಿರಲಿಲ್ಲ!

ಮತ್ತೊಮ್ಮೆ- "ಕಮಲಾ-ಕಮಲಾ" ಎಂಬ ಕೂಗು ಕೇಳಿ ಬಂತು. ಆಗ ಕಮಲಳಿಗೆ ತಡೆಯಲಾಗಲಿಲ್ಲ!... ಧಡಧಡನೆ ಕಿಟಕಿಯ ಬಳಿ ಹೋಗಿ "ಇನ್ನೊಮ್ಮೆ— 'ಕಮಲಾ' ಎಂದು ಕೂಗಿದ್ದಾದರೆ.... ಗತಿ ನೆಟ್ಟಗೆ ಆಗಲಿಕ್ಕಿಲ್ಲ!...ಊ—ತೊಲಗು ಅತ್ತ ಕಡೆ!!..." ಎಂದು ಕಿಟಕಿಯನ್ನಿಕ್ಕಿದಳು. ಆಗಲೇ ಆ ವ್ಯಕ್ತಿ ಅಲ್ಲಿಂದ ಕಾಲ್ತೆಗೆದಿತ್ತು!

○ ○ ○

ಮರುದಿನ ಸಂಜೆಯ ಸಮಯ. ಕಮಲಳೊಬ್ಬಳೇ ಖಿನ್ನವದನಳಾಗಿ-ಮಹಡಿಯ ಮೇಲಿನ ಬಾಗಿಲಬಳಿ- ಕುಳಿತಿದ್ದಳು. ಅಂದು ಬೆಳಿಗ್ಗೆ ಮುದುಕನ ಮೈ ತುಂಬಾ ಕಾದಿತ್ತು. ಆಗಲೇ ಅವನನ್ನು ಸಿವ್ಹಿಲ್ ಹಾಸ್ಪಿಟಲ್ಲಿಗೆ ಕಳಿಸಿದ್ದಳು. ಬೇರೊಂದು ಉಪಾಯವೇ ಇರಲಿಲ್ಲ! ದಿನದಲ್ಲಿ ಮೂರು ನಾಲ್ಕುಸಲ ತನ್ನ ಆಳುಮನುಷ್ಯನನ್ನು ಕಳಿಸಿ, ಮುದುಕನ ಸ್ಥಿತಿಗತಿ ವಿಚಾರಿಸುತ್ತಿದ್ದಳು. ಮುದುಕನ ಮನೆಯವರಿಗೆ ಆ ಸುದ್ದಿ ತಿಳಿದು ಅವರು ಸಿವ್ಹಿಲ್ ಹಾಸ್ಪಿಟಲ್ಲಿಗೆ ಹೋಗಿರುವದಾಗಿ ಅವಳಿಗೆ ತಿಳಿದುಬಂತು. ಆಗ ಅವಳಿಗೆ ಕೊಂಚ ಶಾಂತತೆ ಎನಿಸಿತು.

ನಾಲ್ಕೈದು ದಿನಗಳುರುಳಿದವು. ಮರುದಿನವೇ ಮುದುಕ- ತನ್ನ ಮನೆಗೆ ಹೊರಟು ಹೋಗುವವನಿದ್ದಾನೆಂದು ಅವಳಿಗೆ ತಿಳಿದುಬಂತು. ಅದನ್ನು ತಿಳಿದಾಗ ನಿಶ್ಚಿಂತೆಯ ಉಸಿರೊಂದನ್ನೆಳೆದಳು. ಆನಂದದಿಂದ ದೇವರಿಗೆ, ಭಕ್ತಿಪೂರ್ವಕ ಧನ್ಯವಾದಗಳನ್ನು ಅರ್ಪಿಸಿದಳು. ಕೂಡಲೇ ಮುದುಕನನ್ನು ಕಾಣುವದಾಗಿ ನಿಶ್ಚಯಿಸಿದಳು.

ಹಾಸ್ಪಿಟಲ್ಲಿನ ಎದುರಿಗೆ ಟಾಂಗೆಯೊಂದು ನಿಂತಿತು. ಕಮಲಳು ತನ್ನ ಆಳುಮನುಷ್ಯನೊಂದಿಗೆ ಕೆಳಗಿಳಿದಳು. ಆಳುಮನುಷ್ಯ-ಮುದುಕನ ಕೊಠಡಿಯನ್ನು ತೋರಿಸಿದ. ವಿನಯಪೂರಿತಳಾಗಿ ಮುದುಕನನ್ನು ಕಾಣಲು ಬಹಳ ಆನಂದವೆನಿಸಿತು, ಸಾವಕಾಶವಾಗಿ ಬಾಗಿಲನ್ನು ನೂಕಿ ಒಳಗೆ ಹೋದಳು.

ಮುದುಕ ಎದ್ದು ಕುಳಿತಿದ್ದ. ಬದಿಯಲ್ಲಿ ಒಬ್ಬ ತರುಣ ಹಾಗು ತರುಣಿ ಕುಳಿತಿದ್ದರು. ಆ ತರುಣ ಸುಂದರ ದಂಪತಿಗಳಾಗಿದ್ದರು. ಅವರೊಡನೆ ಮುದುಕ ಮಾತನಾಡುತ್ತ ಕುಳಿತಿದ್ದ. ಆದರೆ ಕಮಲಳು ಒಳಗೆ ಹೋದ ಕೂಡಲೇ ಸ್ತಬ್ಧನಾದ.

ಕಮಲಳು ಒಳಗೆ ಹೋಗಿ ಆತ್ಮೀಯತೆಯಿಂದ ಮುದುಕನ ಕಾಲುಗಳನ್ನು [illegible] ದಿಂದ ನಮಸ್ಕರಿಸಿದಳು. ಬದಿಯಲ್ಲಿ ಕುಳಿತವರು [illegible]. ಮುದುಕನಿಗೆ ಆಶ್ಚರ್ಯವಾಯಿತು. ಅವಳನ್ನು ತಲೆಯಿಂದ ಕಾಲವರೆಗೆ, ದಿಟ್ಟಿಸುತ್ತ ನೋಡಿದ. "ನೀನು ಯಾರು?" ಎಂದು ಕೇಳಿದ.

"ನನ್ನನ್ನು ಗುರುತಿಸಲಿಲ್ಲವೇ... [illegible]?" ಎಂದು ಕೋಮಲಕಂಠದಿಂದ ಕಮಲಳು ಕೇಳಿದಳು.

"ಹ್ಞಾ..... ಸ್ವಲ್ಪ ಗುರ್ತು ಹತ್ತುತ್ತದೆ. ಟ್ರ್ಯಾಮಿನಿಂದ ಬಿದ್ದ ಬಳಿಕ [illegible]... ಎಲ್ಲಿಯೋ ನೋಡಿದಂತಿದೆ! ... ಹೌದಲ್ಲವೇ...?" ಎಂದು ಮುದುಕ ಕೇಳಿದ, "ಹೌದು..." ಕಮಲಳ ಉತ್ತರ.

"ಈಗ ನೆನಪಿಗೆ ಬಂದಿತು ನೋಡು! ನೀನೇ ನನ್ನ ಕಾಲುಗಳನ್ನು ಒತ್ತುತ್ತಿದ್ದವಳು(?)... ಕುಡಿಸಿದ್ದು ನೀನಲ್ಲವೆ? ..." ಮುದುಕ ಮತ್ತೆ ಕೇಳಿದ. "ಟ್ರ್ಯಾಮಿನಿಂದ ತಾವು ಬಿದ್ದ ಬಳಿಕ...ನಾನೇ ತಮ್ಮನ್ನು ನನ್ನ ಕೊಠಡಿಗೆ ಕರೆದುಕೊಂಡು ಹೋಗಿದ್ದೆ. ಅಲ್ಲಿ ತಾವು ಎರಡು ರಾತ್ರಿಗಳನ್ನು ಕಳೆದಿರಿ. ಒಂದೆರಡು ಸಲ ಸ್ಮೃತಿ ಬಂದಿತ್ತು— ತಮಗೆ ಜ್ವರ ಏರಿತು. ಡಾಕ್ಟರರ ಸಲಹೆಯ ಪ್ರಕಾರ ಇಲ್ಲಿಗೆ ಕಳಿಸಿದೆ. ತಮಗೆ ಗುಣವಾಗಿ—ತಾವು ನಾಳೆಯೇ ತಮ್ಮ ಮನೆಗೆ ಹೋಗುವಿರೆಂದು-ತಿಳಿದು ಬಂತು. ಅದ್ದರಿಂದ ನಾನು ಭೆಟ್ಟಿಗೆ ಬಂದಿರುವೆ..." ಎಂದು ನಮ್ರಳಾಗಿ ವಿಶದೀಕರಿಸಿದಳು.

ಇದನ್ನು ಕೇಳಿ ಮುದುಕ ಕೊಂಚ ವೇಳೆಯವರೆಗೆ ಏನೋ ಯೋಚಿಸಹತ್ತಿದ. ಆದರೆ ಒಮ್ಮೆಲೆ "ಅಽಽ! — ನೀನು [illegible] ... ನಾನು (!) —ನಿನ್ನ ಮನೆಯಲ್ಲಿ —ನಿನ್ನ ಕೈಗಳಿಂದಲೇ ನೀರು ಕುಡಿದಿರುವೆನೇ ...?... " ಅತ್ಯುಗ್ರನಾಗಿ ಭ್ರಾಂತನಾದಂತೆ ನುಡಿದ.

ಅವನ ಉಗ್ರ ಭಾವ ಕಂಡು ಕಮಲಳು ಬೆಚ್ಚಿಬಿದ್ದಳು.

"ಹೌದು...ಈಗ ಮತ್ತೆ ನೆನಪಿಗೆ ಬಂತು. ನೀನೆ ನನಗೆ ಹಾಲು—ಸಾಬೂದಾಣೆಯ ಪಾಯಸ ಇವನ್ನೆಲ್ಲಾ ಕುಡಿಸಿದ್ದು ಅಲ್ಲವೇ...?!" ಎಂದು ಮತ್ತೆ ಶಾಂತನಾಗಿ ಆತ ನುಡಿದ.

ಸ್ತಬ್ಧನಾಗಿ ಕುಳಿತಿದ್ದ ಅವಳನ್ನೇ ನಿರೀಕ್ಷಿಸುತ್ತಿದ್ದ ಅವಳ ಅಂಗಾಂಗಗಳನ್ನು ಕಂಡು—ಮುದುಕ ಅತ್ಯುಗ್ರನಾದ. ಒಮ್ಮೆಲೇ..."ಛೀ...! ನೀನೊಬ್ಬ ವೇಶ್ಯೆ!! ನೀನು [illegible]...ನಾನೂ ಪಾಪಿಷ್ಠ!! ಪಾಪಿಷ್ಠ!!!... [illegible] ವೇಶ್ಯೆ!! ಪಾಪಿಷ್ಠೆ ಽಽ!!!" ಎಂದು ಭ್ರಾಂತನಾದಂತೆ ಕೂಗಿ, ನಗತೊಡಗಿದ.

ಕಮಲಳು ತಲೆ ಕೆಳಗೆ ಮಾಡಿ ನೆಲವನ್ನು ನೋಡುತ್ತ ಕುಳಿತಿದ್ದಳು.

"......ಪಾಪಿ.....ಛೀ...ಽ!!! ನೀನು ನನ್ನನ್ನು [illegible] ಬಿಟ್ಟಿಯಲ್ಲ!..... ನಾನೇಕೆ ಸಾಯಲಿಲ್ಲ?..... ನಾನೇಕೆ ಸಾಯಲಿಲ್ಲ??— [illegible]—ಈಗ ಇಲ್ಲೇಕೆ ಬಂದಿರುವಿ?... ಪಾಪಿ!!....." ಎಂದು ಮತ್ತೊಮ್ಮೆ ನುಡಿದ.

ಅವಳು ಮಾಡಿದ್ದ ಉಪಕಾರವನ್ನು ಮರೆತೇ ಬಿಟ್ಟ! ವೇಶ್ಯೆಯಾದ ಮಾತ್ರಕ್ಕೆ—ಅವಳಿಂದ—ಪಡೆದ ಉಪಕಾರಕ್ಕೆ ಕೃತಜ್ಞನಾಗಲಿಲ್ಲ. ಜಾತಿಯ [illegible]ಗೆ ಬಿದ್ದು—ಅವಳ ಮೇಲೆ ದೋಷದ ಗಂಟನ್ನೇ ಹೇರಿದ; ಅವಳನ್ನು ಜರೆದ!

ಅವನ ಬಿರುನುಡಿಗಳನ್ನು—[illegible] ಹೊರಬಿದ್ದ ಅಸಂಭಾವಿತ ಮಾತುಗಳನ್ನು—ಕೇಳಿ ಕಮಲಳ ಹೃದಯಕ್ಕೆ ಒಂದೇ ಸಲಕ್ಕೆ ಸಾವಿರಾರು ಚೇಳುಗಳು ಏಕಕಾಲಕ್ಕೆ ಕಚ್ಚಿದಂತಾಯಿತು! ಅವಳ ಮುಖವನ್ನು [illegible] ಇಲ್ಲ!

ಮತ್ತೆ, ಕರ್ಕಶ ಸ್ವರದಿಂದ ಮುದುಕ—"ಛೀ!— ನನ್ನ [illegible]!!— ಬೇಗ ಹೊರಗೆ ಹೋಗು... ಏನಾದರೂ [illegible] ಬಂದಿರುವಿಯಾ?..." ಎಂದು—ಮುಂದೆ ಕೇಳಿದ.

ಆಗ ಕಮಲಳ ಹೃದಯಕ್ಕೆ [illegible] ಆಯಿತು. ಅವಳು — [illegible]. "ಹೌ—" ಎಂದು [illegible] ಮಾತೆ ಹೊರಡಲಿಲ್ಲ.

ಮುದುಕ [illegible] ಬಿಟ್ಟ.... [illegible] ನೋಟದಿಂದ [illegible] "[illegible]..." [illegible]

([illegible])



ಜ್ಯೋತಿಷಿ— ಕೃಷ್ಣಶಾಸ್ತ್ರಿ ಭಿಡೆ ಭವಿಷ್ಯ ಕಥನ ಅಫೀಸ ಖಡೇಬಜಾರ ಬೆಳಗಾವಿ.

ಡಿಸೆಂಬರ ೨೨ ರಿಂದ ೨೮ ರ ವರೆಗೆ

ಮೇಷ

ಮನೆಯಲ್ಲಿಯ ಕೆಲ ವೃದ್ಧ ಜನರನ್ನು ಹೊರತು ಪಡಿಸಿ ಉಳಿದವರ ಆರೋಗ್ಯ ಉತ್ತಮ. ಆದರೆ ಪತಿಪತ್ನಿಯರಲ್ಲಿ ಅಲ್ಪಸ್ವಲ್ಪ ಮತಭೇದ. ಬಹುತರ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಅನುಕೂಲ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭಕ್ಕಿಂತ ಪ್ರತಿಷ್ಠೆ ಉತ್ತಮ. ಮಿತ್ರರಲ್ಲಿ ಒಬ್ಬರಿಗೆ ಬಹಳ ಕ್ಲೇಶ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅನುಕೂಲತೆ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಉತ್ತಮ. ಅಶ್ವಿನಿಯ ಕೊನೆಯ ೩ ಮತ್ತು ಭರಣಿಯ ೧ ನೇ ಚರಣಕ್ಕೆ ತೊಂದರೆ ಕಡಮೆ. ತಾ. ೨೩, ೨೪, ೨೫, ೨೬ ಅನುಕೂಲ.

ವೃಷಭ

ಮಕ್ಕಳುಮರಿಗಳಿಗೆ ಸ್ವಲ್ಪ ಕ್ಲೇಶ. ಆದರೆ ಪತಿಪತ್ನಿಯರಲ್ಲಿ ಪೂರ್ಣ ಏಕತೆ ಮತ್ತು ಪ್ರಾಪಂಚಿಕ ಸುಖ ಉತ್ತಮ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ಮಿತ್ರ ಸುಖ ಬಹಳ ಉತ್ತಮ. ಆಪ್ತರಲ್ಲಿ ಸ್ವಲ್ಪ ಮತ ವಿರೋಧ. ಸ್ಥಾವರದಲ್ಲಿ ಹೆಚ್ಚಳ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ಯಶಸ್ಸು. ಪ್ರವಾಸ ಮತ್ತು ಭೆಟ್ಟಿ ಪತ್ರವ್ಯವಹಾರಕ್ಕಿಂತ ಅನುಕೂಲ. ರೋಹಿಣಿಯ ಕೊನೆಯ ೩ ಮತ್ತು ಮೃಗಾದ ೧ ನೇ ಚರಣಕ್ಕೆ ತೊಂದರೆಯಿಂದಲೆ ಯಶಸ್ಸು. ತಾ. ೨೨, ೨೫, ೨೬, ೨೭ ಅನುಕೂಲ.

ಮಿಥುನ

ನಿಮ್ಮ ಪ್ರಕೃತಿ ಉತ್ತಮ. ಪತ್ನಿಯ ಆರೋಗ್ಯ ಕೆಡುವದು. ಪ್ರಾಪಂಚಿಕ ಸುಖ ಅತ್ಯಂತ ತೊಂದರೆಯದು. ಆದರೆ ಆಸ್ತಿಯಲ್ಲಿ ಸ್ವಲ್ಪ ಹೆಚ್ಚಳ. ಉದ್ಯೋಗದಲ್ಲಿ ಲಾಭ ಉತ್ತಮ. ಆದರೆ ಪ್ರಗತಿ ಮತ್ತು ಪ್ರತಿಷ್ಠೆ ಕುಂದುತ್ತ ಹೋಗುವ ಚಿನ್ಹ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಟ್ಟುವದು; ಮಿತ್ರ ಸುಖ ಅನುಕೂಲ. ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಅನುಕೂಲ. ಆರಿದ್ರೆಯ ಕೊನೆಯ ೩ ಮತ್ತು ಪುನರ್ವಸುವಿನ ೧ ನೇ ಚರಣಕ್ಕೆ ಹೆಚ್ಚು ತೊಂದರೆ. ತಾ. ೨೨, ೨೪, ೨೮ ಅನುಕೂಲ.

ಕರ್ಕ

ಎಲ್ಲರ ಪ್ರಕೃತಿ ಅನುಕೂಲ. ಆದರೆ ಅನಾಂತರ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಕೆಡುವಂತಹ ಘಟನೆಗಳು. ಉದ್ಯೋಗದಲ್ಲಿ ಪ್ರಗತಿ ಉತ್ತಮ. ಪ್ರತಿಷ್ಠೆ ಬಹಳ ಮತ್ತು ತುಂಬ ಲಾಭ. ಕೆಲ ಆಪ್ತರೊಡನೆ ವಿರೋಧ. ಮಿತ್ರ ಸುಖ ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಸಾಮಾನ್ಯ ಅನುಕೂಲ. ಪ್ರವಾಸ ಮತ್ತು ಭೆಟ್ಟಿ ಪತ್ರವ್ಯವಹಾರಕ್ಕಿಂತ ಅನುಕೂಲ. ಪುಷ್ಯದ ಕೊನೆಯ ೩ ಮತ್ತು ಆಶ್ಲೇಷಾದ ೧ ನೇ ಚರಣಕ್ಕೆ ತೊಂದರೆ ಕಡಮೆ. ತಾ. ೨೨, ೨೪, ೨೫, ೨೬ ಅನುಕೂಲ.

ಸಿಂಹ

ಹೆಂಡತಿಯ ಆರೋಗ್ಯ ಕೆಡುವದು. ಆದರೆ ಉಳಿದವರದು ಉತ್ತಮ. ಪ್ರಾಪಂಚಿಕ ಸುಖ ಮಧ್ಯಮ. ಸ್ಥಾವರದಲ್ಲಿ ಹೆಚ್ಚಳ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಅನುಕೂಲ. ಆದರೆ ಪ್ರತಿಷ್ಠೆ ಸಾಮಾನ್ಯ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಟ್ಟುವದು. ಮಿತ್ರ ಸುಖ ಅನುಕೂಲ. ಪ್ರವಾಸಾದಿ ಕೆಲಸ ಕಷ್ಟಸಾಧ್ಯ. ಮಘಾದ ಕೊನೆಯ ೩ ಮತ್ತು ಪೂರ್ವಾದ ೧ ನೇ ಚರಣಕ್ಕೆ ತೊಂದರೆಯಿಂದಲೆ ಯಶಸ್ಸು. ತಾ. ೨೪, ೨೭, ೨೭, ೨೮ ಅನುಕೂಲ.

ಕನ್ಯಾ

ಪ್ರಕೃತಿ ಉತ್ತಮ. ಹೆಂಡತಿ ಮತ್ತು ಮಕ್ಕಳಿಗೆ ಉತ್ತಮ ಸುಖ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಮಾತ್ರ ಅನುಕೂಲ. ಆದರೆ ವೆಚ್ಚ ಹೆಚ್ಚು ಪ್ರಮಾಣದಲ್ಲಿ. ಆರ್ಥಿಕವಾಗಿ ವಿವಾದ ಹೆಚ್ಚುವಂತಹ ವ್ಯವಹಾರ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆಯ ಯಶಸ್ಸು. ಮಿತ್ರ ಸುಖ ಉತ್ತಮ. ಪ್ರವಾಸಾದಿ ಕೆಲಸ ಹಿತದು. ಹಸ್ತಾದ ಕೊನೆಯ ೩ ಮತ್ತು ಚಿತ್ರಾದ ೧ ನೇ ಚರಣಕ್ಕೆ ಹೆಚ್ಚು ಅನುಕೂಲ. ತಾ. ೨೨, ೨೫, ೨೬, ೨೭ ಅನುಕೂಲ.

ತುಲಾ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಉತ್ತಮ ಆದರೆ ಮಕ್ಕಳುಮರಿಗಳಲ್ಲಿ ಕ್ಲೇಶ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಉತ್ತಮ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಆದರೆ ಮನಸ್ಸು ಯಾವಾಗಲೂ ಚಿಂತಾಗ್ರಸ್ತ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಟ್ಟುವದು. ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಅನುಕೂಲ. ಸ್ವಾತಿಯ ಕೊನೆಯ ೩ ಮತ್ತು ವಿಶಾಖಾದ ೧ ನೇ ಚರಣಕ್ಕೆ ತೊಂದರೆಯಿಂದಲೆ ಯಶಸ್ಸು. ತಾ. ೨೪, ೨೭, ೨೮ ಅನುಕೂಲ.

ವೃಶ್ಚಿಕ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಉತ್ತಮ ಎಲ್ಲರೂ ಪ್ರೀತಿಯಿಂದ ವರ್ತಿಸುವದು ಉದ್ಯೋಗದಲ್ಲಿ ಪ್ರಗತಿ ಉತ್ತಮ. ಪ್ರತಿಷ್ಠೆ ಬಹಳ ಮತ್ತು ಲಾಭ ಮನಸ್ಸಿನಂತೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉತ್ತಮ ಯಶಸ್ಸು. ಪ್ರವಾಸಾದಿ ಕೆಲಸ ಸುಖದ್ದು. ಅನುರಾಧೆಯ ಕೊನೆಯ ೩ ಮತ್ತು ಜ್ಯೇಷ್ಠಾದ ೧ ನೇ ಚರಣಕ್ಕೆ ತೊಂದರೆ ಹೆಚ್ಚು. ತಾ. ೨೨. ೨೫, ೨೬, ೨೭ ಅನುಕೂಲ.

ಧನು

ತನಗಿಂತ ಹೆಂಡತಿಯ ಮತ್ತು ಮಕ್ಕಳ ಪ್ರಕೃತಿ ಉತ್ತಮ. ಪ್ರಾಪಂಚಿಕ ಸುಖ ಬಹಳ ಉತ್ತಮ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಎಲ್ಲ ಮನಸ್ಸಿನಂತೆ. ಆದರೆ ವೆಚ್ಚವೂ ವಿಪರೀತ. ಮಿತ್ರ ಸುಖ ಅನುಕೂಲ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಯಶಸ್ಸು. ಪ್ರವಾಸಾದಿ ಕೆಲಸ ಮನಸ್ಸಿನಂತೆ. ಮೂಲಾದ ಕೊನೆಯ ೩ ಮತ್ತು ಪೂರ್ವಾಷಾಢಾದ ೧ ನೇ ಚರಣಕ್ಕೆ ತೊಂದರೆಯಿಂದಲೆ ಯಶಸ್ಸು. ತಾ. ೨೪, ೨೪, ೨೭ ೨೮ ಅನುಕೂಲ.

ಮಕರ

ಪ್ರಕೃತಿ ಉತ್ತಮ. ಆದರೆ ಮನೆಯಲ್ಲಿಯ ಹಿರಿಯರಿಗೆ ಬಹಳ ಕ್ಲೇಶ. ವಾಹನದಿಂದ ಅಪಘಾತ. ಉಳಿದ ಪ್ರಾಪಂಚಿಕ ಸುಖ ಬಹಳ ಉತ್ತಮ. ಉದ್ಯೋಗದಲ್ಲಿ ಲಾಭ ಪ್ರತಿಷ್ಠೆ ಮತ್ತು ಉತ್ಕರ್ಷ ಅಂದಾಜಿಗಿಂತ ಹೆಚ್ಚು ಅನುಕೂಲ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಯಶಸ್ಸು. ಪ್ರವಾಸ ಮತ್ತು ಪತ್ರವ್ಯವಹಾರಕ್ಕಿಂತ ಭೆಟ್ಟಿ ಅನುಕೂಲ. ಶ್ರವಣಾದ ಕೊನೆಯ ೩ ಮತ್ತು ಧನಿಷ್ಠಾದ ೧ ನೇ ಚರಣಕ್ಕೆ ತೊಂದರೆ ಕಡಮೆ. ತಾ. ೨೨, ೨೫, ೨೬ ಅನುಕೂಲ.

ಕುಂಭ

ಪ್ರಕೃತಿ ಸಾಮಾನ್ಯ. ಆದರೆ ಹೆಂಡತಿ ಮತ್ತು ಮಕ್ಕಳ ಸುಖ ಉತ್ತಮ. ಪ್ರಾಪಂಚಿಕ ಕೆಲ ವಿಷಯಗಳಲ್ಲಿ ಉತ್ಕರ್ಷದ ಘಟನೆಗಳು. ಉದ್ಯೋಗದಲ್ಲಿ ಪ್ರಗತಿ ಕಡಮೆ. ಆದರೆ ಪ್ರತಿಷ್ಠೆ ಮತ್ತು ಲಾಭ ತುಂಬ. ಪ್ರತಿಯೊಂದು ಕೆಲಸದಲ್ಲಿ ಬಹಳ ಪ್ರಯತ್ನದಿಂದ ಆದರೆ ಪೂರ್ಣ ಯಶಸ್ಸು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಯಶಸ್ಸು. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಉತ್ತಮ. ಶತತಾರಿಕೆಯ ಕೊನೆಯ ೩ ಮತ್ತು ಪೂರ್ವಾಭಾದ್ರಪದದ ೧ ನೇ ಚರಣಕ್ಕೆ ತೊಂದರೆಯಿಂದಲೆ ಯಶಸ್ಸು. ತಾ. ೨೪, ೨೭, ೨೬, ೨೭ ಅನುಕೂಲ

ಮೀನ

ಪ್ರಕೃತಿ ಉತ್ತಮ. ಸ್ತ್ರೀ ಸುಖ ಮನಸ್ಸಿನಂತೆ. ಮಕ್ಕಳಲ್ಲಿ ಕೆಲವರ ಉತ್ಕರ್ಷ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ದೊಡ್ಡ ಪ್ರಮಾಣದಲ್ಲಿ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉತ್ತಮ ಯಶಸ್ಸು, ಸಿಕ್ಕು ಶತ್ರುಗಳ ಹಾನಿ ವಿಪರೀತ. ಪ್ರವಾಸಾದಿ ಕೆಲಸ ಹಿತದ್ದು. ಉತ್ತರಾಭಾದ್ರಪದದ ಕೊನೆಯ ೩ ಮತ್ತು ರೇವತಿಯ ೧ ನೇ ಚರಣಕ್ಕೆ ಬಹಳ ಉತ್ತಮ. ತಾ. ೨೨, ೨೪, ೨೭, ೨೬ ಅನುಕೂಲ.

ಪುಸ್ತಕ ವಿಮರ್ಶೆ

ದೇವಗಾನ

ಬರೆದವರು ಶ್ರೀ ಕು. ಸೌ. ರತ್ನ; ಪ್ರಕಾಶಕರು ಸಂಜೀವನಿ ಪ್ರಕಾಶನ, ಹುಬ್ಬಳ್ಳಿ; ಪುಟ ೧೦೮, ಬೆಲೆ ರೂ. ೧॥.

"ದೇವಗಾನ" ವೊಂದು ಕಥಾ ಸಂಕಲನ. ಇದರಲ್ಲಿ ೧೪ ಕಥೆಗಳಿವೆ. ಈ ಕಥೆಗಳನ್ನು ಕಥೆಗಳೆನ್ನದೆ ಗದ್ಯರೂಪದ ಭಾವಗೀತಗಳು ಎಂದು ಕರೆಯಬಹುದಾಗಿದೆ. ಇಂದು ಹಲವರು ಲೇಖಕರು ಮುನ್ನುಡಿ ಹಿನ್ನುಡಿಗಳನ್ನು ಮಾರ್ಸುಡಿಯನ್ನೆದುರಿಸಲು ಮೊದಲೇ ಬರೆದು ಅಟ್ಟಹಾಸವನ್ನು ಪ್ರಕಟಿಸುತ್ತಿರುವಲ್ಲಿ, ಪ್ರಸ್ತುತ ಸಂಕಲನವು ಅನಲಂಕೃತಕಾಂತವಾಗಿ ಹೊರಬಿದ್ದಿರುವುದು ಸ್ವಾಗತಾರ್ಹವಾಗಿದೆ. ದೇವಗಾನದಲ್ಲಿಯ ಸರೋಜಿ, ೨ ನೆಯ ಕತೆಯಲ್ಲಿಯ ಗೋಪಾಲ, ಅನಂತರ ಗೀತಾ, ನಾಗ, ಅತಿಥಿಯನ್ನು ಸತ್ಕರಿಸುವ ವಿಮಲು, ಸತಿ ಸಾವಿತ್ರಿ ಮುಂತಾದ ತರುಣ ತರುಣಿಯರ ಪಾತ್ರಗಳು ಸ್ವಭಾವಮಾಧುರ್ಯದಿಂದ ಓದುಗರಿಗೆ ಉಲ್ಲಾಸವನ್ನುಂಟು ಮಾಡದಿರವು. ನಿರಾಡಂಬರ ಶೈಲಿಯಿಂದ ಕತೆಗಾರ್ತಿ ಮಧುರ ಸನ್ನಿವೇಶಗಳನ್ನು ಚಿತ್ರಿಸಿರುವುದು ಹೃದಯಂಗಮವಾಗಿದೆ. ಕತೆಗಳ ಚಿಕ್ಕತನವೇ ಇಲ್ಲಿ ಒಂದು ವೈಶಿಷ್ಟ್ಯ. ಆದರೆ ಮುಕ್ತಾಯದಲ್ಲಿ ಕಥಾಸೂತ್ರವು ಭಾವಗರ್ಭಿತವಾಗಿದ್ದರೂ ಅಸ್ಪಷ್ಟೋಲ್ಲೇಖದಿಂದ ಕೆಲವೆಡೆ ಮಾಸಿ ಹೋಗಿದೆ; ಕೆಲವೊಮ್ಮೆ ಅತಿವೇಗವೆಂದೂ ಕಥನ ವಿಷಯದ ಓಟವನ್ನು ಟೀಕಿಸಬಹುದು. ಆದರೆ ಒಳ್ಳೆಯ ಕತೆಗಾರಿಕೆಯ ಶಕ್ತಿ ಇಲ್ಲಿ ಕಂಡು ಬರುವುದನ್ನು ಮೇಲಿನ ದೋಷಗಳು ಹೊಡೆದು ಹಾಕಲಾರವು. ಇಂತಹ ಸುಂದರ ಪಾತ್ರ ಚಿತ್ರಗಳನ್ನು ಕತೆಗಳಲ್ಲಿ ಕೊಟ್ಟ ಲೇಖಿಕೆ ಶೈಲಿಯ ಕಡಿವಾಣವನ್ನು ಇನ್ನೂ ಹೆಚ್ಚು ಜಾಣ್ಮೆಯಿಂದ ಹಿಡಿದು ಕಥಾಮಾರ್ಗದಲ್ಲಿ ಪಾತ್ರಗಳನ್ನು ನಡೆಸಲೆಂದು ಹಾರೈಸುತ್ತೇವೆ.

ಕಿರ್ಲೋಸ್ಕರ (ದೀಪಾವಳಿ ವಿಶೇಷಸಂಚಿಕೆ)

ಸಂಪಾದಕರು- ಶ್ರೀ ಶಂ. ವಾ. ಕಿರ್ಲೋಸ್ಕರ ಪ್ರ. ಕಿರ್ಲೋಸ್ಕರವಾಡಿ ಪ್ರೆಸ್ ಕಿರ್ಲೋಸ್ಕರವಾಡಿ (ಜಿ. ಸಾತಾರಾ) -- ಬೆಲೆ ೦—೧೨—೧

ಮೂರು ವರ್ಣದ ಮುಖಪೃಷ್ಠದಿಂದ ಮನೋಹರವೂ ವ್ಯಂಗ ಚಿತ್ರ ಹಾಗೂ ಸಣ್ಣ ಕತೆಗಳಿಂದ ಮನೋರಂಜಕವೂ ಆಗಿದೆ. ಅಖಂಡ ದಿವಾಳಿ ಎಂಬ ಹಾಸ್ಯ ರಸಪೂರ್ಣ ಸಣ್ಣ ಕತೆಯು ಬಹಳ ಚನ್ನಾಗಿದೆ. ತಪ್ಪು ತಿಳುವಳಿಕೆಯ ಮೂಲಕ ಒಂದು ಮನೆಯ ವಿಭಜನೆಯಾಗಿ ಅದರಲ್ಲಿ ಮಿಯಾಸ್ಥಾನ ಮತ್ತು ಬಿಬಿಸ್ಥಾನ ಎಂಬ ಗಂಡನ ಹಾಗು ಹೆಂಡತಿಯ ಪ್ರತ್ಯೇಕ ರಾಜ್ಯಗಳು ಸ್ಥಾಪಿತವಾದವು. ಈ ಕುಟುಂಬದಂತೆ ಇನ್ನೊಂದು ಕುಟುಂಬವೂ ತುಂಡಾಗಿತ್ತು. ಆ ಕುಟುಂಬದ "ನಿರಾಶ್ರಿತರು" ಬಂದೊಡನೆ ಮಿಯಾಸ್ಥಾನ ಬಿಬಿಸ್ಥಾನಗಳು ಹೇಗೆ ಒಂದಾದವೆಂಬುದೇ ಈ ಕತೆಯ ವಸ್ತು.

ಪೋಲೀಸರೆಂದರೆ ಜನತೆಯ ಸೇವಕರೆಂಬ ಅರಿವನ್ನು ಪೋಲೀಸರಿಗುಂಟುಮಾಡಿದ ಮುಂಬಯಿ ಪ್ರಾಂತದ ಮೊದಲನೆ ಹಿಂದೀ ಪೋಲೀಸ ಇನ್ಸಪೆಕ್ಟರ ಜನರಲ್ಲರಾದ ಶ್ರೀ ನಾರಾಯಣರಾವ ಕಾಮಟಿಯವರ ಪರಿಚಯವೂ ಮತ್ತು ಕೊಯನಾ ನದಿಯ ಅಣೆಕಟ್ಟಿನ ಸವಿಸ್ತರ ವರ್ಣನೆಯೂ ವಾಚನಾರ್ಹವಾಗಿವೆ.

ಉಷಾ (ದಸರಾ ಸಂಚಿಕೆ)

ಸಂಪಾದಕ, ಮುದ್ರಕ ಮತ್ತು ಪ್ರಕಾಶಕರು ಶ್ರೀ ಎಸ್. ನಂಜಪ್ಪನವರು, ಚಿಕ್ಕಪೇಟೆ ಬೆಂಗಳೂರು ನಗರ,ಪುಟಗಳು ೧೨೨, ಬೆಲೆ ರೂ. ೧.

'ಉಷೆ'ಯು ಮೊದಲಿನ ವಿಶೇಷ ಕಾಲಗಳಲ್ಲಿಯಂತೆಯೆ ಸಾಲಂಕಾರ ಸೌಂದರ್ಯದಿಂದ ಹೊರಬಿದ್ದಿದ್ದಾಳೆ. ಲೇಖನಗಳು ವೈವಿಧ್ಯ ನಾವೀನ್ಯಗಳಿಂದ ಆಕರ್ಷಕವೆನಿಸಿವೆ. ಕನ್ನಡ ಪ್ರಪಂಚದಲ್ಲಿಯ ಸದ್ಯದ ನಿಶೆಯನ್ನು ಉಷೆ ಬಂದು ಪರಿಹರಿಸಲಿ.

ಕೊನೆಗೂ...!

[೧೫ನೇ ಪುಟದಿಂದ]

ಇದನ್ನು—ಪಾಪಿ ! ! – ತೊಲಗಾಚೆ- " ಎಂದು- ಅವಳ ಮುಖದ ಮೇಲೆ ಆ ನೋಟನ್ನೆಸೆದುಬಿಟ್ಟ! ಅದು ಕಮಲಳ ಶರೀರಕ್ಕೆ ತಾಗಿ, ನೆಲಕ್ಕೆ ಬಿದ್ದಿತು.

ಕಮಲಳ ಕಂಣುಗಳು ಒದ್ದೆಯಾಗಿದ್ದವು. ಅಲ್ಲಿಂದ ಆಗಲೇ ಹೊರಬೀಳುವುದು ವಾಸಿಯೆಂದು ಯೋಚಿಸಿದಳು. ನೆಲಕ್ಕೆ ಬಿದ್ದ ನೋಟನ್ನು ಕೈಗೆ ತಕ್ಕೊಂಡಳು. ಅವಳು ಬಾಗಿದಾಗ ಎರಡು ಅಶ್ರುಬಿಂದುಗಳು ನೆಲದ ಮೇಲೆ 'ಟಪ್' ಎಂದು ಬಿದ್ದವು. ಆದರೆ ಅವು ಮುದುಕನ ಕಂಣುಗಳಿಗೆ ಕಾಣಿಸಲಿಲ್ಲವೇನೊ ! ಬೇಗನೇ ಹೊರಕ್ಕೆ ಹೋಗಿಬಿಟ್ಟಳು.

ನಾನು ಅವನಿಗೆ ಅಷ್ಟು ಮಾಡಿದೆ. ಇಲ್ಲವಾದರೆ.. ನಾನು ಗೈದ ಉಪಕಾರವನ್ನು ಅತ—ತಾನು ಬ್ರಾಹ್ಮಣ- ನಾನು ವೇಶ್ಯೆಯಾದ್ದರಿಂದ—ಅಲ್ಲಗಳೆದನಲ್ಲ ! ನಾನು ವೇಶ್ಯೆಯಾದರೇನು? ನನ್ನ ಉಪಕಾರವನ್ನು ಸ್ವೀಕರಿಸಬಾರದೇ ? —ಕೊನೆಗೂ ನನ್ನ ಮೇಲೇ ದೋಷವೇ ?.... ಕೊನೆಗೂ... ನಾನೇ ಪಾಪಿ !....ಹಾಯ್ ! ! ! ' ಎಂದು ಏನೋ ಯೋಚಿಸುತ್ತ ಮುನ್ನಡೆದಿದ್ದಳು.

ರಸ್ತೆಯ ಮೇಲಿನ ಒಂದು ಭಿಕ್ಷುಕಿ, "ಅಮ್ಮಾ... !ಒಂದೀಟು ಭಿಕ್ಷಾ ನೀಡಿರೀ !..." ಎಂದು ದೈನ್ಯಸ್ವರದಿಂದ ನುಡಿದಳು. ಕಮಲಳು ಕೈಯಲ್ಲಿನ ಹತ್ತು ರೂಪಾಯಿ ನೋಟನ್ನೇ- ಅವನಿಗೆ ಕೊಟ್ಟುಬಿಟ್ಟಳು ! ಆತ ವಿಸ್ಮಯಗೊಂಡು ಅವಳ ಪಾದಗಳನ್ನು ಭದ್ರವಾಗಿ—ಹಿಡಿದು ನಮಸ್ಕರಿಸಿದ—ತಲೆಯನ್ನು ಅಲ್ಲಿ ಉರುಳಾಡಿಸಿದ. "ತಾಯೀ ನಿಮಗೆ ಜಯವಾಗಲಿ! ನಿಮ್ಮ ಹೊಟ್ಟೆ ತಂಣಗಾಗಲಿ ತಾಯಿ ! " ಎಂದು ನುಡಿದ.

ಆದರೆ—ಆ ಹರಕೆ ಕಮಲಳ ಕಿವಿಗಳಿಗೆ ಕೇಳಿಸಲೇ ಇಲ್ಲ ! ಅವಳ ಕಂಣುಗಳು ಅಶ್ರುಪೂರಿತವಾಗಿದ್ದವು. ವಿಶ್ವವೆಲ್ಲಾ—ಅವಳಿಗೆ ಅಂಧಕಾರಮಯವಾಗಿ ತೋರಿತು.... ಕೊನೆಗೂ....ನಾನೇ ಪಾಪಿಯಾದೆನಲ್ಲ !' ಎಂದುಕೊಂಡು ಭರಭರನೆ ಸಾಗಿಬಿಟ್ಟಳು. ಹೃದಯ ಭಾರವಾಗಿತ್ತು.

ಈ ಪತ್ರಿಕೆಯು ಹುಬ್ಬಳ್ಳಿ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ 'ಲೋಕಶಿಕ್ಷಣಟ್ರಸ್ಟ' ಪರವಾಗಿ ಪ. ರಾ. ಮೊಹರೆಯವರಿಂದ ಮುದ್ರಿತನಾಗಿ ಪ್ರಕಟವಾಯಿತು.